ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 51 ರೂ. 2.00 17 ಡಿಸೆಂಬರ್ 1995

ಮಹಾ ಹಗರಣ ಮಾಲೆಯಲ್ಲಿ ದೇಶದ ಗಮನ ಸೆಳೆದಿದೆ ಮತ್ತೊಂದು 'ಮಾಣಿಕ್ಯ!'

ಇದೀಗ ಇನ್ನೊಂದು ಹಗರಣದತ್ತ ಸಂಸತ್ತು ದೇಶದ ಗಮನ ಸೆಳೆದಿದೆ. ನರಸಿಂಹರಾಯರ 54 ತಿಂಗಳ ಆಳ್ವಿಕೆಯಲ್ಲಿ ಐದನೇ ಮಹಾ ಹಗರಣ ಇದು - ಶೇರು ಹಗರಣ, ಸಾರ್ವಜನಿಕ ವಲಯದ ಶೇರುಗಳ ಮಾರಾಟದ ಹಗರಣ, ಸಕ್ಕರೆ ಹಗರಣ, ಹವಾಲಾ ಹಗರಣ - ಈಗ ಟೆಲಿಕಾಂ ಹಗರಣ. ದೂರಸಂಪರ್ಕ ವಲಯದ ಖಾಸಗೀಕರಣದ ಪ್ರಯತ್ನದ ಆರಂಭದಿಂದಲೇ ಈ ಹಗರಣವೂ ಆರಂಭವಾಗಿದೆ. ಆದರೆ ಈಗ ಅದು ಯಾವ ಮಟ್ಟ ತಲುಪಿದೆಯೆಂದರೆ ಖಾಸಗೀಕರಣ, ಉದಾರೀಕರಣದ ಬೆಂಬಲಿಗರೂ ಇದು ಕೋಟಿಗಟ್ಟಲೆ ರೂಪಾಯಿಗಳ ಇನ್ನೊಂದು ಮಹಾ ಹಗರಣವೆಂದು ಒಪ್ಪಬೇಕಾಗಿ ಬಂದಿದೆ. ಈ ವಾರ ಸಂಸತ್ತಿನಲ್ಲಿ ಈ ಹಗರಣದ ಬಗ್ಗೆ ಕೋಲಾಹಲವೆದ್ದಿತು. ದೂರಸಂಪರ್ಕ ಮಂತ್ರಿ ಸುಖರಾಂ ರಾಜೀನಾಮೆಯ ಒತ್ತಾಯ ತೀವ್ರವಾಗುತ್ತಿದೆ. ಈ ಬಗ್ಗೆ ಸಂಸದೀಯ ತನಿಖೆಯಾಗಬೇಕೆಂಬುದು ಎಲ್ಲಾ ಪ್ರತಿಪಕ್ಷಗಳ ಒಕ್ಕೊರಲಿನ ಆಗ್ರಹ.

ಈಗ ಸುಖರಾಂರವರ ಮೇಲೆ ಮುಖ್ಯ ಆರೋಪವೆಂದರೆ ಅವರು ಕೆಲವು ತಮಗೆ ಬೇಕಾದವರ ಕಂಪನಿಗಳಿಗೆ ವಿಶೇಷ ಕೃಪೆ ತೋರಿದ್ದಾರೆ- ಇದರ ಹಿಂದೆ ಸಹಜವಾಗಿಯೇ ಏನೋ "ವ್ಯವಹಾರ" ಕುದುರಿದೆ ಎಂದು. ಖಾಸಗಿಯವರು ದೂರಸಂಪರ್ಕ ವ್ಯವಸ್ಥೆ ಒದಗಿಸುವ ಬಗ್ಗೆ ಟೆಂಡರ್‌ಗಳನ್ನು ತೆರೆದಾಗ ಒಂದು ವಿಚಿತ್ರ ದೃಶ್ಯ ಕಂಡು ಬಂತು. ಬಹಳ ಜನ ಕೇಳಿಯೇ ಇರದ ಹಿಮಾಚಲ ಪ್ರದೇಶದ ಕಂಪನಿಯೊಂದು(ಹಿಮಾಚಲ್ ಫ್ಯೂಚರಿಸ್ಟಿಕ್ ಕಮ್ಯುನಿಕೇಷನ್ಸ್ ಲಿಮಿಟೆಡ್) 9 ಅತೀ ಲಾಭಕರ ವಲಯಗಳಲ್ಲಿ ಅತೀ ಹೆಚ್ಚು 'ಬಿಡ್' ಮಾಡಿದ ಕಂಪೆನಿಯಾಗಿ ಹೊರ ಹೊಮ್ಮಿತ್ತು. ಇದರಿಂದ ಟೆಂಡರ್‌ಗಳ ನಿಬಂಧನೆಗಳ ಪ್ರಕಾರ ಮುಂದಿನ 15 ವರ್ಷಗಳಲ್ಲಿ ಈ ಕಂಪನಿ ದೂರಸಂಪರ್ಕ ಇಲಾಖೆಗೆ 85 ಸಾವಿರ ಕೋಟಿ ರೂ.ಗಳಷ್ಟು ಲೈಸನ್ಸ್ ಶುಲ್ಕ ನೀಡಬೇಕಾಗಿತ್ತು. ಆದರೆ ಈ ನಡುವೆ ನಿಬಂಧನೆಗಳಲ್ಲಿ ಒಂದು ಬದಲಾವಣೆ ತರಲಾಯಿತು. ಯಾವುದೇ ಕಂಪನಿ ಮೂರಕ್ಕಿಂತ ಹೆಚ್ಚು ವಲಯಗಳಲ್ಲಿ 'ಬಿಡ್'(ಸವಾಲ್) ಮಾಡುವಂತಿಲ್ಲ ಎಂದು. ಇದರ ಪ್ರಕಾರ 'ಹಿಮಾಚಲ್ ಫ್ಯೂಚರಿಸ್ಟಿಕ್'ಗೆ ಮೂರು ವಲಯಗಳನ್ನು ಆರಿಸಲು ಅವಕಾಶ ನೀಡಲಾಯಿತು. ಈಗ ಅದು ಸರಕಾರಕ್ಕೆ ನೀಡಬೇಕಾದ ಲೈಸೆನ್ಸ್ ಶುಲ್ಕ 20,000 ಕೋಟಿ ರೂ.ಗೆ ಇಳಿಯಿತು. ಅದು ಅತೀ ಹೆಚ್ಚು 'ಬಿಡ್ ಕೂಗಿದ್ದ' ಇತರ ಆರು ವಲಯಗಳಲ್ಲಿ ಎರಡನೇ ಸ್ಥಾನ ಪಡೆದವರು 'ಕೂಗಿದ' ಲೈಸೆನ್ಸ್ ಶುಲ್ಕ ಬಹಳ ಕಮ್ಮಿಯಿತ್ತು- ಸುಮಾರು ಮೂರನೇ ಒಂದರಷ್ಟು. ಟೆಂಡರ್‌ನ ಹೊಸ ನಿಬಂಧನೆಗಳ ಪ್ರಕಾರ ಎರಡನೇ 'ಸವಾಲು' ಕೂಗಿದವರ ಮೊತ್ತ ಮೊದಲನೆಯವರ ಮೊತ್ತಕ್ಕಿಂತ ಕಮ್ಮಿಯಿದ್ದರೆ ಮತ್ತೊಮ್ಮೆ ಟೆಂಡರ್ ಕರೆಯಬೇಕು. ಅಂದರೆ ಟೆಂಡರ್ ತೆರೆದ ಮೇಲೆ ನಿಬಂಧನೆ ಬದಲಿಸಿದ್ದರಿಂದ ಸರಕಾರಕ್ಕೆ 65 ಸಾವಿರ ಕೋಟಿ ನಷ್ಟವಾಯಿತು.

ಈ ಕಂಪನಿ ಸುಖರಾಂರವರ ಸ್ವಂತ ರಾಜ್ಯ(ಹಿಮಾಚಲ ಪ್ರದೇಶ)ಕ್ಕೆ ಸೇರಿದ್ದಷ್ಟೇ ಅಲ್ಲ, 1987ರಲ್ಲ ಆರಂಭವಾದ ಈ ಕಂಪನಿಯ ಹಣಕಾಸು ವ್ಯವಹಾರದಲ್ಲಿ 1991-92 ರವರೆಗೆ ವಿಶೇಷವಾದುದೇನೂ ಇರಲಿಲ್ಲ. ಆದರೆ 1991-92ರಿಂದ ವರ್ಷೇ ವರ್ಷೇ ವಿಪರೀತ ಪ್ರಮಾಣದಲ್ಲಿ ಇದರ "ವ್ಯವಹಾರ" ಏರಿತು. ಇದು ಸುಖರಾಂ ದೂರಸಂಪರ್ಕ ಇಲಾಖೆಯಲ್ಲಿ ಅತ್ಯುನ್ನತ ಸ್ಥಾನ ಗಳಿಸಿದ್ದ ಅವಧಿಯೂ ಆಗಿತ್ತು. ಟೆಂಡರ್ ತೆರೆದ ಮೇಲೆ ನಿಯಮಗಳನ್ನು ಬದಲಸಿ ಮೂರಕ್ಕಿಂತ ಹೆಚ್ಚು ವಲಯಗಳನ್ನು ಯಾವುದೇ ಕಂಪನಿಗೆ ಕೊಡಬಾರದೆಂಬ ನಿಬಂಧನೆ ತಂದದ್ದು ಈ ಕಂಪನಿಗೆ ಆದ 'ಮುಜುಗರ'(ಹಣಕಾಸಿನ ಅಸಮರ್ಥತೆ?)ವನ್ನು ನಿವಾರಿಸಲು ಎಂದು ಹೇಳಲಾಗುತ್ತಿದೆ. ಆದ್ದರಿಂದಲೇ ಸುಖರಾಂ ರಾಜೀನಾಮೆಗೆ ತೀವ್ರ ಒತ್ತಾಯ ಬರುತ್ತಿದೆ. ಇದಲ್ಲದೆ ತಮಿಳುನಾಡು ಹಾಗೂ ಕೇರಳ ವಲಯಗಳಲ್ಲಿ ಅಮೇರಿಕಾದ ಯುಎಸ್ ವೆಸ್ಟ್‌ನೊಂದಿಗೆ ಬಿಪಿಎಲ್ ಸೇರಿ ರಚಿಸಿಕೊಂಡ ಯುಸ್ ವೆಸ್ಟ್ ಇಂಡಿಯಾ ಕಂಪನಿ ಟೆಂಡರ್ ಗೆಲ್ಲುವಲ್ಲಿಯೂ ಈ ಮಂತ್ರಿವರ್ಯರ 'ಕೈ' ಇದೆಯೆಂದು ಹೇಳಲಾಗುತ್ತಿದೆ. ಈ ಎರಡು ವಲಯಗಳಲ್ಲಿ 'ಹಿಮಾಚಲ್ ಫ್ಯೂಚರಿಸ್ಟಿಕ್ಸ್' ಸ್ಪರ್ಧಿಸಿಲ್ಲ ಎಂಬುದು ಗಮನಾರ್ಹ.

ಇಲ್ಲಿ ಇನ್ನೂ ನಾಲ್ಕು ಅಂಶಗಳನ್ನು ಗಮನಿಸಬೇಕು.

■ ಸರಕಾರ ಆರಂಭದಲ್ಲೇ ಹೊಸ ಟೆಲಿಕಾಂ ನೀತಿಯನ್ನು ಮಂಡಿಸುವಾಗಲೇ ದೂರಸಂಪರ್ಕ ಸೌಲಭ್ಯದ ವ್ಯಾಪಕ ವಿಸ್ತರಣೆಗೆ ಅಗತ್ಯವಾಗುವ ಸಂಪನ್ಮೂಲವನ್ನು ಬೇಕೆಂದೇ ನಾಲ್ಕು ಪಟ್ಟು ಹಿಗ್ಗಿಸಿ ಹೇಳಿತ್ತು. ದೇಶೀ ಹಾಗೂ ವಿದೇಶೀ ಖಾಸಗಿಯವರಿಗೆ ಅನುಕೂಲ ಮಾಡಿಕೊಡಲು

■ ಕಾಂಟ್ರಾಕ್ಟ್ ನೀಡುವ ಟೆಂಡರಿನ ನಿಬಂಧನೆಗಳು ವಿದೇಶೀ ಬಹುರಾಷ್ಟ್ರೀಯ

ಪುಟ 8 ನೋಡಿ

ಅಂತೂ ಬಂತು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

ಬಹಳ ದಿನಗಳಿಂದ ನನೆಗುದಿಗೆ ಬಿದ್ದಿದ್ದ ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಜನವರಿ 7, 1996ರಂದು ಚುನಾವಣೆ ನಡೆಯಲಿದೆ. ರಾಜ್ಯದಲ್ಲಿ ಒಟ್ಟು 6 ಮಹಾನಗರಪಾಲಿಕೆಗಳು 33 ನಗರ ಸಭೆಗಳು, 80 ಪುರಸಭೆಗಳು, 38 ಟೌನ್ ಪಂಚಾಯತಿಗಳಿದ್ದು ಹೀಗೆ ರಾಜ್ಯದಲ್ಲಿಯ ಒಟ್ಟು 157 ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತ ಪ್ರತಿನಿಧಿಗಳು ಆರಿಸಿಬಂದು ಆಡಳಿತ ನಡೆಸಲು ಅವಕಾಶ ದೊರೆತಂತಾಗಿದೆ.

ತಾನು ಅಧಿಕಾರಕ್ಕೆ ಬಂದ ತತ್ ಕ್ಷಣದಲ್ಲಿಯೇ ಗ್ರಾಮಪಂಚಾಯಿತಿ, ತಾಲೂಕ ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆಸಿದ ಜನತಾದಳದ ದೇವೇಗೌಡರ ಸರಕಾರ ನಗರಸಭೆ, ಪುರಸಭೆಗಳಿಗೆ ಚುನಾವಣೆ ನಡೆಸುವ ಕುರಿತು ಮೀನಾವೇಷ ಹಾಕುತ್ತ ಒಂದಿಲ್ಲೊಂದು ನೆಪಮುಂದಿಟ್ಟು ಕೊಂಡು ಅದನ್ನು ಮುಂದೂಡುತ್ತಾ ಬಂದಿತ್ತು. ಸುಪ್ರೀಂ ಕೋರ್ಟಿನ ಆದೇಶವನ್ನೂ ಪರಿಪಾಲಿಸದಿರುವಾಗ 1996ರ ಜನವರಿಯಲ್ಲಿ ಚುನಾವಣೆ ನಡೆಸಲೇಬೇಕೆಂದು ಸುಪ್ರೀಂಕೋರ್ಟ್ ಆದೇಶ ಹೊರಡಿಸಿ ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕುವ ಹಂತದಲ್ಲಿತ್ತು. ಇಷ್ಟಾದರೂ ಕೂಡ ರಾಜ್ಯ ಸರಕಾರ ಕ್ಷೇತ್ರಗಳ ಪುನರ್ವಿಂಗಡನೆ ಮೀಸಲಾತಿ ಮೊದಲಾದ ವಿವರಗಳ ಅಧಿಸೂಚನೆ ಹೊರಡಿಸಲು ಮೀನಾಮೇಷ ತಾಳಿತ್ತು. ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟು ಕೊಂಡು, ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಫಲಿತಾಂಶ ಲೋಕಸಭಾ ಚುನಾವಣೆಯ ಮೇಲೆ ಪ್ರಭಾವ ಬೀರಬಹುದೆಂಬ ಭೀತಿ ಜನತಾದಳದ ಮುಖಂಡರನ್ನು ಕಾಡುತ್ತಿರುವುದರಿಂದ ಲೋಕಸಭೆಯ ಚುನಾವಣೆಯ ನಂತರವೇ ಈ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವ ಹೊಂಚು ದೇವೇಗೌಡ ಸರಕಾರದ್ದಾಗಿತ್ತೆಂದು ಕಂಡುಬರುತ್ತದೆ. ಕೊನೆಗೂ ಚುನಾವಣಾ ಆಯೋಗದ ಒತ್ತಡಕ್ಕೆ ಜನತಾ ದಳ ಸರ್ಕಾರ ಮಣಿಯಬೇಕಾಯಿತು. ಮಣ್ಣಿನ ಮಗನೆಂದು ಜಂಬಕೊಚ್ಚಿ ಕೊಳ್ಳುವ ದೇವೇಗೌಡರಿಗೆ ಅವರ ಈ ನಿಲುಮೆ ಶೋಭಿಸುವುದಿಲ್ಲೆಂದು ಹೇಳಬೇಕಾಗುತ್ತದೆ. ಪ್ರಜಾಪ್ರಭುತ್ವ ತತ್ವವನ್ನೊಪ್ಪಿಕೊಳ್ಳುವ ಸರಕಾರ ಚುನಾವಣಾ ಫಲಿತಾಂಶದತ್ತ ಗಮನ ಹರಿಸದೆ ಮೌಲ್ಯ ಎತ್ತಿ ಹಿಡಿಯುವ ಧೈರ್ಯ ತೋರಿಸಲು ಮುಂದಾಗಬೇಕು,

ಎಸ್.ಕೆ.ಉಪಾಧ್ಯಾಯ

ಸಿಪಿಐ(ಎಂ) ಪಕ್ಷದ ನೇತೃತ್ವದ ಪಶ್ಚಿಮ ಬಂಗಾಳ ಎಡರಂಗ ಸರಕಾರ ಹಾಗೆಯೇ ತ್ರಿಪುರಾ ಸರಕಾರಗಳು ಚುನಾವಣಾ ಫಲಿತಾಂಶಗಳಿಂದ ಎದೆಗುಂದದೆ ಐದು ವರ್ಷಕ್ಕೊಂದು ಸಲ ವೇಳೆಗೆ ಸರಿಯಾಗಿ ಚುನಾವಣೆಗಳನ್ನು ನಡೆಸುತ್ತಿರುವುದನ್ನು ನೋಡುತ್ತಿದ್ದೇವೆ. ಅದೇ ರೀತಿ ಕೇರಳದಲ್ಲಿ ಕೂಡ ಎಡ ಪ್ರಜಾಪ್ರಭುತ್ವ ರಂಗ ಸರಕಾರದ ಕಾಲದಲ್ಲಿ ಚುನಾವಣೆಗಳನ್ನು ನಡೆಸುತ್ತಿತ್ತು. ಆದರೆ ಕಾಂಗ್ರೆ ಪಕ್ಷ ಆಳುವ ಸರಕಾರಗಳಾಗಲೀ, ದಳ ಸರಕಾರಗಳಾಗಲೀ ತನ್ನ ಪಕ್ಷದ ಸೋಲು ಗೆಲುವಿಗೆ ಹೆಚ್ಚು ಮಹತ್ವ ಕೊಟ್ಟು ಚುನಾವಣೆಗಳನ್ನು ಮುಂದೂಡಿ ಪ್ರಜಾಪ್ರಭುತ್ವವನ್ನು, ಮೌಲ್ಯ ಆಧಾರಿತ ನೀತಿಯನ್ನು ಕೊಲೆ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಅದು ನಿಲ್ಲಬೇಕಾಗಿದೆ.

ನಾಮಪತ್ರಗಳ ಸಲ್ಲಿಕೆ 15.12.95ರಿಂದ ಪ್ರಾರಂಭಗೊಂಡು ಇಡೀ ಚುನಾವಣಾ ಪ್ರಕ್ರಿಯೆ 12.1.96ರಂದು ಕೊನೆಗೊಳ್ಳುತ್ತದೆ.

ಕ್ಷೇತ್ರಗಳ ಪುನರ್ವಿಂಗಡಣೆಯಲ್ಲಿಯೂ, ಮಹಿಳೆಯರಿಗೆ, ಎಸ್.ಸಿ. ಮತ್ತು ಎಸ್.ಟಿ. ಕುರಿತು ಕ್ಷೇತ್ರಗಳ ಹಂಚುವಿಕೆಯಲ್ಲಿಯೂ ಅನ್ಯಾಯವಾಗಿದೆಯೆಂದೂ ಈಗಿರುವ ಮಹಾನಗರ ಪಾಲಿಕೆ, ನಗರ ಸಭೆಗಳಿಗೆ ಸುತ್ತಮುತ್ತಲ ಹಳ್ಳಿಗಳನ್ನು ಸೇರಿಸಿ ವಿನಾ ಕಾರಣ ವಿಸ್ತರಿಸಲಾಗಿದೆಯೆಂಬ ದೂರು ಎಲ್ಲಾ ಕಡೆಗಳಿಂದ ಕೇಳಿ ಬರುತ್ತಿದೆ. ಮಂಗಳೂರು, ಬೆಂಗಳೂರು ಮಹಾನಗರ ಪಾಲಿಕೆಗಳಿಗೆ ದೂರದ ಹಳ್ಳಿಗಳನ್ನು ಸೇರಿಸಿದ್ದರ ವಿರುದ್ಧ ಪ್ರತಿಭಟನೆ ನಡೆಯುತ್ತಿದೆ. ಹೈಕೋರ್ಟಿಗೆ ರಿಟ್‌ಗಳೂ ಸಲ್ಲಿಸಲ್ಪಟ್ಟಿವೆ. ಕ್ಷೇತ್ರಗಳ ಪುನರ್ವಿಂಗಡಣೆಯಲ್ಲಿ ಶಾಸಕರ ಕೈವಾಡ ಬಹಳಷ್ಟು ನಡೆದಿದೆಯೆಂಬ ದೂರುಗಳಿವೆ. ಕ್ಷೇತ್ರಗಳ ಪುನರ್ವಿಂಗಡಣೆ ಮತ್ತು ಮೀಸಲಾತಿ ಸರಿಯಾಗಿ ನಡೆದೇ ಇಲ್ಲ ಎಂಬುದಕ್ಕೆ ನಾವು ಸಾಕಷ್ಟು ಉದಾಹರಣೆಗಳನ್ನು ನೀಡಬಹುದಾಗಿದೆ. ಕ್ಷೇತ್ರಗಳ ಪುನರ್ವಿಂಗಡಣೆಯನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ತೆರೆದಿಟ್ಟು ಅವರ ಸೂಚನೆಗಳನ್ನು ಪಡೆದು ಅನಂತರ ಅದನ್ನು ಕೊನೆಯದಾಗಿ ಪ್ರಕಟಿಸಬೇಕಾಗಿದೆ. ಆದರೆ ಈ ಸಲ ಪುನರ್ವಿಂಗಡಣೆಯ ಕುರಿತು ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲವೆಂದೂ ಯಾರದೋ ಕಣ್ಣಿಗೆ ಕಾಣದ ಕೈವಾಡವಿದೆಂಬ ಆರೋಪದಲ್ಲಿಯೂ ತತ್ಯತೆ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಕಾರಣದಿಂದಾಗಿ ಕೆಲವು ಕ್ಷೇತ್ರಗಳ ಚುನಾವಣೆಗಳು ಮುಂದೂಡಲ್ಪಟ್ಟರೂ ಆಶ್ಚರ್ಯಪಡುವ ಅಗತ್ಯವಿಲ್ಲ.

ಚುನಾವಣಾ ಪ್ರಕ್ರಿಯೆ ದಿ.15.12.95ರಂದು ಪ್ರಾರಂಭವಾಗುವುದರಿಂದ ಪ್ರಕ್ರಿಯೆ ಪ್ರಾರಂಭವಾಗಿ ಅದು 12.1.96ರಂದು ಮುಗಿಯುವ ತನಕ ಕೋರ್ಟು ಕಟ್ಟೆಯೇರುವಂತಿಲ್ಲ.

ಹೇಗೂ ಅರೆ ಮನಸ್ಸಿನಿಂದ ದೇವೇಗೌಡ ಸರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಮುಂದಾಗಿದೆ. ಈ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ನೇರವಾಗಿ ಸ್ಪರ್ಧಿಸುತ್ತಿವೆ. ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಸರಬರಾಜು, ವಸತಿ, ಆರೋಗ್ಯಗಳಂಥ ಮಹತ್ತರವಾದ ಪ್ರಶ್ನೆಗಳಿಗೆ ಪರಿಹಾರ ಲಭ್ಯವಾಗಲಾರದಾಗಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಸ್ಪರ್ಧಿಸುವ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ವ್ಯಕ್ತಿಗಳನ್ನು ಆರಿಸಿ ತರುವಂತೆ ಆ ಮೂಲಕ ಜನಪರವಾದ ಆಡಳಿತ ಅಸ್ತಿತ್ವದಲ್ಲಿ ಬರುವಂತೆ ಪ್ರಯತ್ನ ಮಾಡಬೇಕಾಗಿರುವುದು ಅತ್ಯಗತ್ಯ.

ಕರ್ನಾಟಕಾದ್ಯಂತ ಅಸಂಘಟಿತ ಕಾರ್ಮಿಕ ತೀವ್ರ ಹೋರಾಟ

ಬೆಂಗಳೂರು ಸಮಾವೇಶದ ಕರೆ

ಡಿಸೆಂಬರ್ 4ರಂದು ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ಸೇರಿದ್ದ ಅಸಂಘಟಿತ ವಲಯದ ಕಾರ್ಮಿಕರ ಸಮಾವೇಶ ಕರ್ನಾಟಕ ರಾಜ್ಯದ ಕಾರ್ಮಿಕರ ನೀತಿಯನ್ನು ಚರ್ಚಿಸಿ ಡಿಸೆಂಬರ್ 18ರಿಂದ 23ರವರೆಗೆ ಕನಿಷ್ಟ ಕೂಲಿಯ ಅಂತಿಮ ಪ್ರಕಟಣೆಗಾಗಿ, ಕಾರ್ಮಿಕ ಕಾನೂನುಗಳ ಜಾರಿಗಾಗಿ ಸತತವಾಗಿ ಕಾರ್ಮಿಕ ಇಲಾಖೆಯ ಕಛೇರಿಗಳು, ಸರಕಾರದ ಮುಖ್ಯ ಆಡಳಿತಾಧಿಕಾರಿಗಳ ಕಛೇರಿಗಳನ್ನು ಪಿಕೆಟಿಂಗ್ ಮಾಡಬೇಕೆಂದು ಕರೆ ನೀಡಿದೆ.

ಸಮಾವೇಶ ಬೆಂಗಳೂರಿನಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ನಿರ್ಧರಿಸಿದೆ.

18.12.95ರಂದು ವಿಧಾನಸೌಧ ಚಲೋ

19.12.95ರಂದು ಲೇಬರ್ ಕಮೀಷನರ್ ಕಚೇರಿಯನ್ನು ಬೀಡಿ ಮತ್ತು ಅಗರಬತ್ತಿ ಕಾರ್ಮಿಕರ ಮುತ್ತಿಗೆ

20.12.95ರಂದು ಪವರ್‌ಲೂಂ ಕಾರ್ಮಿಕರಿಂದ ಲೇಬರ್ ಕಮೀಷನರ್ ಕಚೇರಿ ಮುತ್ತಿಗೆ

21.12.95ರಂದು ಗಾರ್ಮೆಂಟ್ ಕಾರ್ಮಿಕರಿಂದ

22.12.95ರಂದು ಎಲ್ಲಾ ಕಾರ್ಮಿಕರಿಂದ ಕಾರ್ಮಿಕಮಂತ್ರಿ ಮನೆ ಮುಂದೆ ಧರಣೆ

ರಾಜ್ಯದ ಅಸಂಘಟಿತ ವಲಯದಲ್ಲಿ ಒಂದು ಕೋಟಿಯ ಮೇಲಿರುವ ಕಾರ್ಮಿಕರಿಗೆ ಬಹಳಷ್ಟು ಕಡಿಮೆ ಮಟ್ಟದಲ್ಲಿ ಕನಿಷ್ಟ ಕೂಲಿಯನ್ನು ನಿಗದಿಪಡಿಸುವ ಕರ್ನಾಟಕ ರಾಜ್ಯ ಸರಕಾರದ ಕಾರ್ಮಿಕ ಇಲಾಖೆಯ ನೀತಿಯನ್ನು ಬಲವಾಗಿ ಖಂಡಿಸಿದ ಸಮಾವೇಶ ಬೀಡಿ ಕಾರ್ಮಿಕರು ಏಪ್ರಿಲ್-ಮೇ ತಿಂಗಳ ಅವಧಿಯಲ್ಲಿ ಮಾಡಿದ ಹೋರಾಟದ ಫಲವಾಗಿ ಸಾವಿರ ಬೀಡಿ ಕಟ್ಟಲು ರೂ. 36.85 ಕನಿಷ್ಟ ಕೂಲಿ ಕೊಡಬೇಕೆಂದು ಕರಡು ಪ್ರಕಟಣೆ ಹೊರಡಿಸಿ 6 ತಿಂಗಳಾದರೂ ಈವರೆಗೂ ಅಂತಿಮ ಪ್ರಕಟಣೆ ಹೊರಡಿಸದೆ ಇರುವುದರಿಂದ ಸರಕಾರ ಮಾಡಿದ ಈ ಸೂಚನೆ ಜಾರಿಗೆ ಬಂದಿಲ್ಲ ಎಂದಿದೆ. ರಾಜ್ಯದ ಕನಿಷ್ಟ ಕೂಲಿ ಸಲಹಾ ಸಮಿತಿಯ ಸರ್ವಾನುಮತದ ಶಿಫಾರಸು ಅನುಸರಿಸಿ ಯಾವುದೇ ಕಾರ್ಮಿಕರಿಗೆ ಬಡತನ ರೇಖೆಯ ಕೆಳಗಿನ ಕೂಲಿ ನೀಡಬಾರದೆಂದು 1309 ಸೂಚ್ಯಂಕಕ್ಕೆ ಕನಿಷ್ಟ ರೂಪಾಯಿ 37.65 ಮತ್ತು ಮೇಲಿರುವ ಪ್ರತಿ ಸೂಚ್ಯಂಕಕ್ಕೆ ಮೂರೂವರೆ ಪೈಸೆ ತುಟ್ಟಿ ಭತ್ಯೆ ನೀಡಬೇಕೆಂದು ಸೂಚನೆ ಇದ್ದಾಗಲೂ ಅದನ್ನು ಕಡೆಗಣಿಸುವುದೇ ರಾಜ್ಯ ಸರಕಾರದ ಧೋರಣೆಯಾಗಿದೆ. ಈ ವಿಷಯದಲ್ಲಿ ಈಗಿನ ಸರಕಾರ, ಹಿಂದಿನ ಸರಕಾರಗಳಿಂದ ಯಾವುದೇ ರೀತಿಯಲ್ಲಿ ಕಾರ್ಮಿಕರ ಪರವಾದ ಧೋರಣೆ ಅನುಸರಿಸುತ್ತಿಲ್ಲ. ಹಿಂದೆ 1983ರಿಂದ 88ರವರೆಗೆ ಇದ್ದಂತ ಜನತಾ ಸರಕಾರದ ಕಾರ್ಮಿಕ ಪರವಾದ ನಿಲುಮೆಯನ್ನು ಈಗಿನ ಸರಕಾರ ಪೂರ್ತಿಯಾಗಿ ಕೈಬಿಟ್ಟಿರುವುದಾಗಿ ಕಂಡು ಬರುತ್ತದೆ. ಈಗ ಅಧಿಕಾರದಲ್ಲಿರುವ ಕಾರ್ಮಿಕ ಮಂತ್ರಿ ತಮ್ಮ ಬೊಕ್ಕಸವನ್ನು ಹೆಚ್ಚಿಸಲು ಮಾಲೀಕರನ್ನು ಕಾಪಿಡಾ

ಪುಟ 8 ನೋಡಿ

DYFI 5ನೇ ರಾಷ್ಟ್ರ ಸಮ್ಮೇಳನ

ನವೆಂಬರ್ 14, 1995ರಂದು ಡಿವೈಎಫ್ಐ 5ನೇ ಅಖಿಲ ಭಾರತ ಸಮ್ಮೇಳನ ದಿನೇಶ್ ಮಜುಂದಾರ್ ನಗರದಲ್ಲಿ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ್ತಿ ಕ್ಯಾಪ್ಟನ್ ಲಕ್ಷ್ಮಿಸೈಗಲ್‌ರವರು ಸಂಘಟನೆಯ ಧ್ವಜ(ಶ್ವೇತ ಪತಾಕೆ)ವನ್ನು ಅಧ್ಯಕ್ಷರಾದ ಎಂ.ಎ. ಬೇಬಿಯವರಿಗೆ ಹಸ್ತಾಂತರಿಸುವುದರ ಮುಖಾಂತರ ಪ್ರಾರಂಭವಾಯಿತು. ಪ್ರತಿನಿಧಿ ಕಲಾಪವು ಕಲ್ಕತ್ತಾದ ನಜರುಲ್ ಮಂಚ್ ಎಂಬಲ್ಲಿ ನಡೆಯಿತು. ಡಿವೈಎಫ್ಐನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಸಲೀಂರವರು ವರದಿಯನ್ನು ಪ್ರತಿನಿಧಿಗಳ ಮುಂದೆ ಮಂಡಿಸಿದರು.

ನಾವು ಬೆಳವಣಿಗೆಯಾಗಿದ್ದೇವೆ ಮತ್ತು ಅಸಮಾನತೆ ವಿರುದ್ಧ ಹೋರಾಡಿದ್ದೇವೆ, ಮುಂದಿನ ದಿನಗಳಲ್ಲಿ ಜನವಿರೋಧಿ ನರಸಿಂಹರಾವ್ ಸರಕಾರದ ವಿರುದ್ಧ ಬಲಿಷ್ಠ ಚಳುವಳಿ ಮಾಡಬೇಕಾಗಿದೆ - ಇದು ಸಮ್ಮೇಳನದ ಕರೆ ಎನ್ನುತ್ತಾ ಮಹಮ್ಮದ್ ಸಲೀಂರವರು ಕೇಂದ್ರ ಕಾರ್ಯಕಾರಿ ಸಮಿತಿಯ ಪರವಾಗಿ ವರದಿಯನ್ನು ಮಂಡಿಸುತ್ತಾ ವಿವರಿಸಿದರು. ಅವರು ಅಂತರ್ರಾಷ್ಟ್ರೀಯ ಪರಿಸ್ಥಿತಿ ಮತ್ತು ರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸುತ್ತಾ ಸಾಮ್ರಾಜ್ಯಶಾಹಿ ಹಿಡಿತ ಬಲಗೊಳ್ಳುತ್ತಿದ್ದು ಅದರ ವಿರುದ್ಧ ನಿರಂತರ ಹೋರಾಟ ಮುಂದುವರಿಯುತ್ತದೆ ಎಂದರು. ಕೇಂದ್ರ ಸರಕಾರದ ತಪ್ಪು ಆರ್ಥಿಕ ನೀತಿಯಿಂದ ಭಾರತದ ಯುವಜನತೆ ಪಡಬೇಕಾದ ಪಾಡು ಅನಕ್ಷರತೆ, ನಿರುದ್ಯೋಗ, ಶಿಕ್ಷಣ, ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳ ವ್ಯಾಪಾರೀಕರಣ ಇತ್ಯಾದಿ ವಿಷಯಗಳನ್ನು ಬಿಡಿಬಿಡಿಯಾಗಿ ವಿವರಿಸುತ್ತಾ ಡಿವೈಎಫ್ಐ ಅದರ ವಿರುದ್ಧ ನಿರಂತರ ಧ್ವನಿ ಎತ್ತಿದೆ ಎಂದರು. ಡಿವೈಎಫ್ಐ ವರ್ಲ್ಡ್ ಫೆಡರೇಶನ್ ಆಫ್ ಡೆಮೊಕ್ರಾಟಿಕ್ ಯೂತ್ ಸಂಘಟನೆಯಲ್ಲಿ ಅವಿಭಾಜ್ಯ ಪಾತ್ರವನ್ನು ನಿರ್ವಹಿಸಿದೆ ಮಾತ್ರವಲ್ಲ ಕ್ಯೂಬಾ ಸೌಹಾರ್ದತೆಯನ್ನು ಬಲಗೊಳಿಸಲು ಉತ್ತಮ ಪಾತ್ರ ವಹಿಸಿದೆ ಎಂದರು. ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಲು ಡಿವೈಎಫ್ಐ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಬೇಕೆಂದರು. 60 ಮಂದಿ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ನಿರ್ಣಯಗಳು: ನಿರುದ್ಯೋಗ ಸಮಸ್ಯೆ ಬಗ್ಗೆ, ಮಾದಕ ದ್ರವ್ಯಗಳ ಬಗ್ಗೆ, ಕ್ರೀಡೆಗೆ ಎಲ್ಲಾ ಹಂತಗಳಲ್ಲಿ ಪ್ರೋತ್ಸಾಹ ನೀಡಬೇಕೆಂಬ ಬಗ್ಗೆ, ಶಹೀದ್ ಕರ್ತಾರ್ ಸಿಂಗ್ ಸರಬಾರವರ ಜನ್ಮ ಶತಾಬ್ದಿಯನ್ನು ಆಚರಿಸುವ ಬಗ್ಗೆ, ಮೀಸಲಾತಿ ಬಗ್ಗೆ, ಖಾಸಗೀಕರಣದ ವಿರುದ್ಧ, ಕೇರಳದ ವಿದ್ಯಾರ್ಥಿಗಳ ಹೋರಾಟಕ್ಕೆ ಸಂಪೂರ್ಣ ಬೆಂಬಲ, ಮಾಧ್ಯಮ ಮತ್ತು ಸಾಂಸ್ಕೃತಿಕ ವಿಷಯಗಳ ಬಗ್ಗೆ, ಇ.ಪಿ. ಜಯರಾಜನ್ ಮೇಲಿನ ಹಲ್ಲೆಯನ್ನು ಖಂಡಿಸುವ ನಿರ್ಣಯಗಳೊಂದಿಗೆ ಇನ್ನಿತರ ಮುಖ್ಯ ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿರುತ್ತದೆ.

ಸಂವಿಧಾನಕ್ಕೆ ತಿದ್ದುಪಡಿ: ಸಮ್ಮೇಳನವು ಸಂವಿಧಾನಕ್ಕೆ ತಿದ್ದುಪಡಿಯನ್ನು ಅಂಗೀಕರಿಸಿತು. ಸಂಘಟನೆಯ ಬಾವುಟಕ್ಕೆ ಮುಖ್ಯ ಬದಲಾವಣೆಯನ್ನು ತರಲಾಯಿತು. ಐದು ಮೂಲೆಯ ಕೆಂಪು ನಕ್ಷತ್ರ ಬಾವುಟದ ಮಧ್ಯದಲ್ಲಿ ಇದ್ದು, ಬಾವುಟದ ಕೋಲಿನ ಹತ್ತಿರ ಕೆಂಪು ಅಕ್ಷರದಲ್ಲಿ ಇಂಗ್ಲಿಷ್ ಅಥವಾ ಪ್ರಾದೇಶಿಕ ಭಾಷೆಗಳಲ್ಲಿ ಮೇಲಿಂದ ಕೆಳಗಡೆಗೆ ಡಿವೈಎಫ್ಐ ಎಂದು ಬರೆದಿರಬೇಕು. ಬಾವುಟ ಬಿಳಿ ಬಣ್ಣವನ್ನು ಹೊಂದಿರುತ್ತದೆ.

ಡಿವೈಎಫ್ಐನ 5ನೇ ಅಖಿಲ ಭಾರತ ಸಮ್ಮೇಳನ ಮುಕ್ತಾಯಗೊಳ್ಳುತ್ತಾ ನವಂಬರ್ 18ರ ಸಂಜೆಗೆ ಜನವಿರೋಧಿ ಕೇಂದ್ರ ಸರಕಾರದ ಆರ್ಥಿಕ ನೀತಿಯ ವಿರುದ್ಧವಾಗೂ ಕೋಮುವಾದಿ ಛಿದ್ರಕಾರಿ ಶಕ್ತಿಗಳ ವಿರುದ್ಧ ಯುವಜನ ಚಳುವಳಿಯನ್ನು ತೀವ್ರಗೊಳಿಸಬೇಕೆಂದು ಯುವಜನರಿಗೆ ಕರೆ ನೀಡಿತು. ಸಮ್ಮೇಳನವು ಡಿವೈಎಫ್ಐಯ ಇತ್ತೀಚಿನ ವರ್ಷಗಳ ಬೆಳವಣಿಗೆಯನ್ನು ಶ್ಲಾಘಿಸುತ್ತಾ, ಮುಂದಿನ ದಿನಗಳಲ್ಲಿ ಸಂಘಟನೆಯನ್ನು ಹೆಚ್ಚು ಬಲಿಷ್ಠಗೊಳಿಸಲು ಅವಕಾಶವಿದೆ ಎಂದು ಗುರುತಿಸಿತು.

ಪ್ರತಿನಿಧಿಗಳನ್ನು ಉದ್ದೇಶಿಸಿ ಸೀತಾರಾಂ ಯೆಚೂರಿ: ಎಸ್‌ಎಫ್‌ಐನ ಹಿಂದಿನ ಅಖಿಲ ಭಾರತ ಅಧ್ಯಕ್ಷರೂ, ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಸಮ್ಮೇಳನದ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಭಾರತ ದೇಶದ ವ್ಯವಸ್ಥೆಯನ್ನು ಸಮಗ್ರವಾಗಿ ಬದಲಾವಣೆ ಮಾಡುವ ಸಲುವಾಗಿ ಇಂದು ದೇಶವನ್ನು ಉಳಿಸಲು, ಬಲಿಷ್ಠ ಚಳುವಳಿಯನ್ನು ಯುವಜನರು ಸಂಘಟಿಸಬೇಕೆಂದರು. ಯೆಚೂರಿಯವರು ನಮ್ಮ ಮುಂದೆ ಇರುವ ಐದು ಅಪಾಯವನ್ನು ವಿಭಾಗೀಕರಿಸುತ್ತಾ, ಹೊಸ ಆರ್ಥಿಕ ನೀತಿಯ ದಾಳಿ, ಕೋಮುವಾದದ ದಾಳಿ, ಜಾತಿಯವಾದ, ಪ್ರತ್ಯೇಕತಾವಾದ ಮತ್ತು ದೇಶದ ಐಕ್ಯತೆ, ಸಮಗ್ರತೆಗೆ ಬಂದಿರುವ ಅಪಾಯವೆನ್ನುತ್ತಾ ಈ ಐದು ವಿಷಯಗಳಿಗೆ ಸಂಬಂಧಿಸಿ ನಡೆಯುವ ಹೋರಾಟ ನಮ್ಮ ದೇಶದ ಭವಿಷ್ಯದ ಫಲಿತಾಂಶವನ್ನು ನಿರ್ಧರಿಸುವುದು ಎಂದರು.

ಅವರು ಮುಂದುವರೆಯುತ್ತಾ ಮುಂದಿನ ಆರು ತಿಂಗಳಲ್ಲಿ ಮುಖ್ಯ ರಾಜಕೀಯ ಗುರಿಯು ಕಾಂಗ್ರೆಸ್(ಐ) ಮತ್ತು ಬಿಜೆಪಿಗಳೆರಡನ್ನು ಅಧಿಕಾರದಿಂದ ಹೊರಗುಳಿಸಬೇಕಾದ ರಾಜಕೀಯ ಕರ್ತವ್ಯದ ಚೌಕಟ್ಟನ್ನು ವಿವರಿಸಿದರು. ಮೂರನೆ ಪರ್ಯಾಯ ರಂಗ ಖಂಡಿತವಾಗಿ ಉದ್ಭವವಾಗುತ್ತದೆ. ಅದು ಉದ್ಭವಿಸುವುದು ಕೆಲವು ಶಕ್ತಿಗಳ ಪ್ರಯತ್ನದಿಂದ ಅಲ್ಲ, ಬದಲಿಗೆ ವಸ್ತುನಿಷ್ಠವಾದ ಪರಿಸ್ಥಿತಿ ಇದನ್ನು ನಿರ್ಮಾಣ ಮಾಡುತ್ತದೆ. ಈ ಪರ್ಯಾಯ ರಂಗವು ದೇಶದ ವಿವಿಧ ಪ್ರದೇಶದ ವಿವಿಧ ಬಣ್ಣವನ್ನು ಪ್ರತಿನಿಧಿಸುತ್ತದೆ. ಅವರು ಮುಂದುವರೆಯುತ್ತಾ ದೇಶದ ಆಳುವ ವರ್ಗವು, ವೈಯಕ್ತಿಕತೆಯನ್ನು ಹೆಚ್ಚಿಸಬೇಕೆನ್ನುವ ಇಚ್ಛೆಯನ್ನು ಬೆಳೆಸುವ ಹೊಸ ನೈತಿಕತೆಯನ್ನು ಯುವಜನರ ಮಧ್ಯೆ ಹುಟ್ಟಿಸುತ್ತಿದೆ. ಇದು ಕೊಳೆತು ನಾರುತ್ತಿರುವ ಬಂಡವಾಳವಾದದ ಸೂಚಕವಾಗಿದೆ. ಮಾತ್ರವಲ್ಲದೆ ಯುವಜನರನ್ನು ಚಳುವಳಿಯ ಮುಖಾಂತರ ಬದಲಾವಣೆಯ ಹೊಸ ಹಾದಿ ಹಿಡಿಯುವುದನ್ನು ತಪ್ಪಿಸುವ ಸುಲಭದ ದಾರಿ ಎಂದು ಅವರು ಅರಿತಿದ್ದಾರೆ. ಡಿವೈಎಫ್ಐ ವೈಜ್ಞಾನಿಕವಾಗಿ ಅಸಂಘಟಿತ ಯುವಜನರನ್ನು ಈ ವಾತಾವರಣದಿಂದ ಹೊರತರುವ ಪ್ರಯತ್ನ ಮಾಡಬೇಕು. ಇದು ಘೋಷಣೆ ಮಾಡುವುದರಿಂದ ಸಾಧ್ಯವಿಲ್ಲ, ಬದಲಿಗೆ ಎಲ್ಲಾ ಹಂತದ ಪ್ರದೇಶವಾರು ಯುವಜನರ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಡುವುದರ ಮುಖಾಂತರ ಸಾಧ್ಯವಿದೆ ಎಂದು ಅವರು ಕರೆ ನೀಡಿದರು.

ಅಖಿಲ ಭಾರತ ಸಮ್ಮೇಳನದ ಯುವ ಪ್ರತಿನಿಧಿಗಳು

ದೇಶದ ಮೂಲೆ-ಮೂಲೆಗಳಿಂದ ಪ.ಬಂಗಾಳದ ಕಲ್ಕತ್ತಾ ನಗರದಲ್ಲಿ ನಡೆದ ಡಿವೈಎಫ್ಐನ 5ನೇ ಅಖಿಲ ಭಾರತ ಸಮ್ಮೇಳನದಲ್ಲಿ ಯುವ ಪ್ರತಿನಿಧಿಗಳು ಭಾಗವಹಿಸಿದ್ದರು. 878 ಪ್ರತಿನಿಧಿಗಳಲ್ಲಿ 89.53% ಪುರುಷರು ಮತ್ತು 10.47% ಮಹಿಳೆಯರು. 534 ಮಂದಿ ಗ್ರಾಮಾಂತರ ಪ್ರದೇಶಗಳಿಂದ ಬಂದಿದ್ದರೆ 280 ಮಂದಿ ನಗರ ಪ್ರದೇಶಗಳಿಂದ ಭಾಗವಹಿಸಿದ್ದರು. ಹೆಚ್ಚಿನ ಯುವಜನರು 26ರಿಂದ 35 ವರ್ಷದೊಳಗಿನವರಾಗಿದ್ದರು. 119 ಮಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಂದ ಬಂದಿದ್ದರೆ 171 ಮಂದಿ ಚುನಾಯಿತ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. 331 ಮಂದಿ ಪದವೀಧರರಾಗಿದ್ದರೆ 226 ಮಂದಿ ಪದವಿಗಿಂತ ಕೆಳಮಟ್ಟದ ಶಿಕ್ಷಣ ಪಡೆದವರಾಗಿದ್ದರು. ಒಟ್ಟಾರೆಯಾಗಿ ಯುವ ಚಿಲುಮೆಗಳು ವಿದ್ಯಾವಂತ ಕ್ಷೇತ್ರಗಳಿಂದ ಬಂದಿದ್ದರು ಮಾತ್ರವಲ್ಲ ವಕೀಲರು, ವೈದ್ಯರು, ಇಂಜಿನಿಯರ್ ಗಳು, ಅಧ್ಯಾಪಕರು, ಕಾರ್ಮಿಕರು, ರೈತ ವಿಭಾಗಗಳಿಂದ ಬಂದಿರುವ ಯುವಕರು ಸಮ್ಮೇಳನಕ್ಕೆ ಇನ್ನಷ್ಟು ಮೆರಗು ನೀಡಿದರು.

ವಿದೇಶದಿಂದ ಸೌಹಾರ್ದ ಪ್ರತಿನಿಧಿಗಳು: ಏಶ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಿಂದ ಸೌಹಾರ್ದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿ ಅಂತರ್ರಾಷ್ಟ್ರೀಯ ಯುವ ಸಮುದಾಯದ ಸೌಹಾರ್ದವನ್ನು ವ್ಯಕ್ತಪಡಿಸಿದರು. ವಿಯೆಟ್ನಾಂನ ಟ್ರೂಬಾ ಬಿನ್ಹ್, ವರ್ಲ್ಡ್ ಫೆಡರೇಶನ್ ಆಫ್ ಡೆಮೊಕ್ರಾಟಿಕ್ ಯೂತ್(WFDY)ನ ಅಧ್ಯಕ್ಷರಾದ ಓಲಿವರ್ ಮಿಟರ್, ಸೋಶಿಯಲಿಸ್ಟ್ ವರ್ಕಿಂಗ್ ಯೂತ್ ಲೀಗ್ ಕೊರಿಯಾದಿಂದ ಜ್ಯೂ ಹೊನ್ ಡಾಕ್, ನೇಪಾಲ್ ಡೆಮೊಕ್ರಾಟಿಕ್ ನ್ಯಾಶನಲ್ ಯೂತ್ ಫೆಡರೇಶನ್‌ನ ಉದಯ ರಾಜ್ ಪಾಂಡೆ, ಆಲ್ ಚೈನಾ ಯೂತ್ ಫೆಡರೇಶನ್‌ನ ಯಾಂಗ್ ಲೂವಾ, ಸೂಡಾನ್‌ನಿಂದ ರಶೀದ್ ಅಲಿ, ಪೋರ್ಚುಗೀಸ್ ಕಮ್ಯುನಿಸ್ಟ್ ಯೂತ್ ಲೀಗ್‌ನಿಂದ ಅಂದ್ರೆ ಯಂ. ಕೊಯಿಲೋ, ಜಪಾನ್ ಲೀಗ್ ಆಫ್ ಸೋಶಿಯಲಿಸ್ಟ್ ಯೂತ್‌ನಿಂದ ಇಸ್ಕೋಫಿ ಇಟೋ, ಇರಾನ್‌ನ ತೊಟೇ ಯೂತ್ ಆರ್ಗನೈಸೇಶನ್‌ನ ಮಹಮ್ಮದ್ ಯುಸೂಫ್, ಕಮ್ಯುನಿಸ್ಟ್ ಯೂತ್ ಫೆಡರೇಶನ್ ಶ್ರೀಲಂಕಾದಿಂದ ರಾಜಾ ವ್ಯಕೀವಾ, ಬಾಂಗ್ಲಾದೇಶ್ ಯೂತ್ ಯೂನಿಯನ್‌ನಿಂದ ಸುಬ್ರತಾ ಚೌಧುರಿಯವರುಗಳು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರೆ, ಗ್ರೀಸ್, ಇಟಲಿ, ಜಪಾನ್ ಮತ್ತಿತರ ದೇಶಗಳ ಯುವಜನ ಸಂಘಟನೆಗಳು ಲಿಖಿತ ಸಂದೇಶವನ್ನು ಕಳುಹಿಸಿದ್ದರು.

ಹೊಸ ನಾಯಕತ್ವ

ಸಮ್ಮೇಳನವು ಹೊಸ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು. ಕೇರಳದ ನಮ್‌ಕುಲಮ್ ನಾರಾಯಣ್ ಕೃಷ್ಣದಾಸ್ ಅಧ್ಯಕ್ಷರಾಗಿ ಆಯ್ಕೆಗೊಂಡರು. ಪಶ್ಚಿಮ ಬಂಗಾಳದ ಮಹಮ್ಮದ್ ಸಲೀಂರವರು ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆಗೊಂಡರು. ಉಪಾಧ್ಯಕ್ಷರುಗಳಾಗಿ ಮೈನುಲ್ ಹಸನ್(ಪ.ಬಂಗಾಳ), ಡಿ.ರವೀಂದ್ರನ್(ತಮಿಳುನಾಡು), ಜಿತೀನ್ ಚೌಧುರಿ(ತ್ರಿಪುರ), ರಬಿನ್ ತಮೋಲಿ (ಅಸ್ಸಾಂ), ಸಿ.ಎನ್.ಮೋಹನನ್(ಕೇರಳ) ಆಯ್ಕೆಗೊಂಡರು. ಸಹಕಾರ್ಯದರ್ಶಿಗಳಾಗಿ ಮಾನಬ್ ಮುಖರ್ಜಿ (ಪ.ಬಂಗಾಳ), ಬಿ.ಸುರೇಂದ್ರ(ಆಂಧ್ರಪ್ರದೇಶ), ರಾಜು ಪರಾಂಜಪೆ(ಮಹಾರಾಷ್ಟ್ರ), ಬಾಬುಲ್ ಭದ್ರಾ(ತ್ರಿಪುರ)ರವರು ಆಯ್ಕೆಯಾದರೆ ಪ್ರಕಾಶ್ ಬಿಪ್ಲಬ (ಬಿಹಾರ್)ರವರು ಖಜಾಂಚಿಯಾಗಿ ಮರು ಆಯ್ಕೆಗೊಂಡರು. ಕೇಂದ್ರ ಕಾರ್ಯಕಾರಿ ಸಮಿತಿಯಲ್ಲಿ ಕರ್ನಾಟಕದಿಂದ ಎಸ್.ವೈ. ಗುರುಶಾಂತ್ ಮತ್ತು ಪೀಟರ್ ಲೋಬೋರವರುಆಯ್ಕೆಯಾದರು.

ಡಿವೈಎಫ್ಐ ಶ್ಲಾಘನೀಯ ಬೆಳವಣಿಗೆ; ಇನ್ನಷ್ಟು ಬಲಿಷ್ಟ ಚಳುವಳಿ ಬೆಳೆಸುವ ಸಾಧ್ಯ



ಆಕರ್ಷಕ ಬೃಹತ್ ರ್‍ಯಾಲಿ

ನವಂಬರ್ 18ರಂದು ಕಲ್ಕತ್ತ ಮಹಾನಗರದ ಬ್ರಿಗೇಡ್ ಪೆರೇಡ್ ಮೈದಾನದಲ್ಲಿ ಡಿವೈಎಫ್ಐನ 5ನೇ ಅಖಿಲ ಭಾರತ ಸಮ್ಮೇಳನದ ಸಮಾರೋಪ ಆಕರ್ಷಕ ಬೃಹತ್ ರ್‍ಯಾಲಿಯ ಮುಖಾಂತರ ನಡೆಯಿತು. ಪಶ್ಚಿಮ ಬಂಗಾಳದ ಬರೆ ಮೂರು, ನಾಲ್ಕು ಜಿಲ್ಲೆಗಳಿಂದ ಭಾಗವಹಿಸಿರುವ ಸುಮಾರು 6 ಲಕ್ಷ ಯುವಜನರನ್ನುದ್ದೇಶಿಸಿ ಡಿವೈಎಫ್ಐನ ಅಖಿಲ ಭಾರತ ನಾಯಕರು, ಪ.ಬಂಗಾಳ ರಾಜ್ಯ ಡಿವೈಎಫ್ಐನ ಮುಖಂಡರು, ಪ.ಬಂಗಾಳದ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಜ್ಯೋತಿ ಬಸುರವರು ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಹೊಸದಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಕಾಂ.ಎನ್.ಎನ್. ಕೃಷ್ಣದಾಸ್ ರವರು ವಹಿಸಿದ್ದರು.

ಬೆಳಿಗ್ಗಿನಿಂದಲೇ ಸಮ್ಮೇಳನದ ರ್‍ಯಾಲಿ ನಡೆಯುವ ಮಹಾನಗರ ಹಬ್ಬದ ವಾತಾವರಣವನ್ನು ತೋರಿಸುತ್ತಿತ್ತು. ಮನಮುಟ್ಟುವ ಘೋಷಣೆಗಳ ಸಾಲುಗಳು ಬ್ಯಾನರ್ ಗಳಲ್ಲಿ, ಗೋಡೆಗಳಲ್ಲಿ ಮೂಡಿದ್ದವೆ, ಒಂಭತ್ತು, ಹತ್ತು ಬಣ್ಣಗಳ ಆಕರ್ಷಕ ಬಾವುಟಗಳು ದೇಶದ ವಿವಿಧ ಭಾಷೆ, ಲಿಂಗ, ಗಡಿ, ರಾಜ್ಯಗಳನ್ನು ಪ್ರತಿನಿಧಿಸುತ್ತಾ ಬಿಳಿಯ ಬಾವುಟಗಳೊಂದಿಗೆ ಐಕ್ಯತೆ ಹೊಂದುವಂತೆ ಹೋಲಿಸಲಾಗಿತ್ತು. ಜನಸಾಗರದಂತೆ ಯುವಜನರು ಬ್ರಿಗೇಡ್ ಮೈದಾನದಲ್ಲಿ ಸೇರಿದ್ದ ಯುವಜನ ಸ್ಫೂರ್ತಿಯುತವಾಗಿ ನಗರದಲ್ಲಿ ಡಿವೈಎಫ್ಐ ಘೋಷಣೆಯನ್ನು, ಹಾಡುಗಳನ್ನು ಹಾಡಿ ಮುಂದಿನ ಗುರಿಯತ್ತ ಧಾವಿಸಿದರು. ರ್‍ಯಾಲಿಯಲ್ಲಿ 16ರಿಂದ 40 ವರ್ಷಗಳೊಳಗಿನ ಯುವಜನರೇ ಕಾಣುತ್ತಿದ್ದರು ಮಾತ್ರವಲ್ಲ ಸಾವಿರಾರು ಸಂಖ್ಯೆಯಲ್ಲಿ ಯುವತಿಯರು ರ್‍ಯಾಲಿಯಲ್ಲಿದ್ದರು.

ಪ.ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿ ಬಸುರವರು ಯುವಜನರನ್ನುದ್ದೇಶಿಸಿ ಮಾತನಾಡುತ್ತಾ ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆ ಸರಕಾರ ಯುವಜನರ ಭವಿಷ್ಯಕ್ಕೆ ಎಷ್ಟು ಅಪಾಯಕಾರಿ ಎನ್ನುತ್ತಾ, ಕಾಂಗ್ರೆ ಪಕ್ಷವು ಚುನಾವಣೆಯಿಂದ ಚುನಾಣೆಗೆ ಹಲವಾರು ಸುಳ್ಳು ಘೋಷಣೆಗಳನ್ನು ಭರವಸೆಗಳನ್ನು ನೀಡುತ್ತಿದೆ ವಿನಃ ಜ್ಯಾರಿಗೊಳಿಸಲು ಯಾವುದೇ ಪ್ರಯತ್ನ ನಡೆಸಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನೀಡಿರುವ ಭರವಸೆಗಳೆಲ್ಲಾ ಬರೀ ಸುಳ್ಳು ಎಂಬುದು ಸಾಬೀತಾಗಿರುತ್ತದೆ. ನಿರುದ್ಯೋಗಿ ಯುವಜನರಿಗೆ ಉದ್ಯೋಗ ನೀಡಿಲ್ಲ, ಲಕ್ಷಾಂತರ ಕೈಗಾರಿಕಾ ಘಟಕಗಳು ರೋಗಗ್ರಸ್ತವೆಂದು ಮುಚ್ಚಿಕೊಂಡಿವೆ. ಕಾಂಗ್ರೆ ಪಕ್ಷ ಮತ್ತು ಸರಕಾರ ಸಂಪೂರ್ಣವಾಗಿ ಭ್ರಷ್ಟವಾಗಿದ್ದು ಮುಂದಿನ ಜನಾಂಗಕ್ಕೆ ತಪ್ಪು ದಾರಿಯನ್ನು ತೋರಿಸುತ್ತಿದೆ. ಕಾಂಗ್ರೆ ಪಕ್ಷದೊಳಗಡೆ ನೈತಿಕತೆಯೇ ಉಳಿದಿಲ್ಲವೆಂದು ಅವರು ಹೇಳಿದರು.

ಅವರು ಮುಂದುವರೆಯುತ್ತ ಮುಂದಿನ ಚುನಾವಣೆಯೊಳಗಡೆ ಮೂರನೇ ಪರ್ಯಾಯ ಮೂಡಿ ಬರಬೇಕಾಗಿದೆ. ಇದು ಸಾಧ್ಯವಾಗದಿದ್ದರೆ ಜಾತ್ಯಾತೀತ, ಪ್ರಜಾಸತ್ತಾತ್ಮಕ ಪಕ್ಷಗಳು ಎಲ್ಲಾ ಪ್ರಶ್ನೆಗಳ ಬಗ್ಗೆ, ಸಾಮಾನ್ಯಜನರನ್ನು ಕಿತ್ತು ತಿನ್ನುವ ಸಮಸ್ಯೆಗಳನ್ನು ಎತ್ತಿಕೊಂಡು ಒಂದೇ ವೇದಿಕೆಯಲ್ಲಿ ಬರಬೇಕು. ಡಿವೈಎಫ್ಐ ಇತರ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೇರಿಕೊಂಡು ಜನ ವಿಭಾಗಗಳನ್ನು ಪ್ರಜಾಸತ್ತಾತ್ಮಕ ಬದಲಾವಣೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಒಳಗೊಳ್ಳುವ ಕೆಲಸ ಮಾಡಬೇಕೆಂದು ಅವರು ಕರೆ ನೀಡಿದರು.

ಡಿವೈಎಫ್ಐ ಪ್ರಧಾನ ಕಾರ್ಯದರ್ಶಿ ಕಾಂ. ಮಹಮದ್ ಸಲೀಂರವರು ಮಾತನಾಡುತ್ತಾ ಡಿವೈಎಫ್ಐ ಭಾರತ ದೇಶದ ಎಲ್ಲಾ ರಾಜ್ಯಗಳ ಯುವಜನರ ಪ್ರಜಾಸತ್ತಾತ್ಮಕ ಧ್ವನಿಯಾಗಿದ. ಯುವ ಕಾಂಗ್ರೆ ಮುಖಂಡರು ತಂದೂರು ಕೊಲೆ ಪ್ರಕರಣದಲ್ಲಿ ಮುಳುಗಿದ್ದಾರೆ ಮಾತ್ರವಲ್ಲ ಅದರ ಮುಖಂಡರು ಗೂಂಡಾಗಿರಿ, ಕ್ರಿಮಿನಲ್ ಕೃತ್ಯಗಳಲ್ಲಿ ತೊಡಗಿದ್ದಾರೆ.

ಡಿವೈಎಫ್ಐ ನಾಯಕತ್ವದಿಂದ ನಿವೃತ್ತರಾಗಿರುವ ಡಿವೈಎಫ್ಐ ಅಖಿಲ ಭಾರತ ಅಧ್ಯಕ್ಷ ಎಂ.ಎ. ಬೇಬಿಯವರು ಮಾತನಾಡುತ್ತಾ ಕಾಂಗ್ರೆ ಮತ್ತು ಬಿಜೆಪಿಗಳೆರಡನ್ನು ಅಧಿಕಾರದಿಂದ ಕಿತ್ತೆಸೆಯಲು ಯುವಜನರು ಮುಖ್ಯ ಪಾತ್ರ ವಹಿಸಬೇಕೆಂದರು. ಡಿವೈಎಫ್ಐ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಕಾರ್ಯದರ್ಶಿ ಮಾನಬ್ ಮುಖರ್ಜಿ ಮತ್ತು ಅಧ್ಯಕ್ಷರಾದ ಮೈನುಲ್ ಹಸನ್ ಮಾತನಾಡುತ್ತಾ ಅಖಿಲ ಭಾರತ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸಹಾಯ ನೀಡಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಕರ್ನಾಟಕ ಸುದ್ದಿ

ಹರಿಹರ: ಸಿಐಟಿಯುಗೆ ಜಯ

ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಕಳೆದ ಬಾರಿ ಕಾವಿ ಬಟ್ಟೆ ಪ್ರೇರಿತ ಬಿಎಂಎಸ್ ಸಂಘವು ಮಾನ್ಯತೆ ಪಡೆದಂತ ಸಂಘವಿದ್ದು ಈ ಸುತ್ತಮುತ್ತಲಿನ ಪ್ರದೇಶದಲ್ಲಿ ಕೆಂಬಾವುಟ ಇಲ್ಲದೇ ಮಾಡುತ್ತಿದ್ದೇವೆ ಎಂದೆಲ್ಲಾ ಕೊಚ್ಚಿಕೊಳ್ಳುತ್ತಿದ್ದ ಬಿಎಂಎಸ್ ಸಂಘಟನೆಯು ತನ್ನ ವರ್ಗ ವಿರೋಧಿ ನೀತಿಯಿಂದ ತಾ. 26.11.95ರಂದು ನಡೆದ ಸಹಕಾರಿ ಸಂಘದ ಚುನಾವಣೆಯಲ್ಲಿ ಸಿಐಟಿಯು ಅಭ್ಯರ್ಥಿಗಳು, ಕಾರ್ಮಿಕ ವಿಭಾಗದಿಂದ ಇರುವ 4 ಸ್ಥಾನಗಳನ್ನು ಮತ್ತು ಗುಮಾಸ್ತೆ ವಿಭಾಗದಿಂದಿರುವ 1(ಬೆಂಬಲಿತ ಅಬ್ಯರ್ಥಿ) ಜಯ ಗಳಿಸಿದ್ದಾರೆ. ಬಿಎಂಎಸ್ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದು ಕಾರ್ಮಿಕ ವರ್ಗದ ನೆಚ್ಚಿನ ಮಿತ್ರ ಎಂದು ಬಡಾಯಿಕೊಚ್ಚುತ್ತಾ ಚುನಾವಣೆ, ಅಧಿಕಾರದ ಸಂದರ್ಭದಲ್ಲಿ ಮಾತ್ರ ಮಂಚೂಣಿಗೆ ಬರುತ್ತಿದ್ದ ಎಐಟಿಯುಸಿ ಎರಡನೇ ಸ್ಥಾನಕ್ಕೆ ಬಂದಿದೆ.

ಮತದಾನದ ಪದ್ಧತಿಯನ್ನು ಪರಿಶೀಲಿಸಲಾಗಿ ಎಐಟಿಯುಸಿ ಮತ್ತು ಬಿಎಂಎಸ್ ಅಪವಿತ್ರ ಮೈತ್ರಿ ಮಾಡಿಕೊಂಡಿರುವುದು ಬಹಿರಂಗವಾಗಿ ಎದ್ದು ಕಾಣುತ್ತಿದೆ. ಏಕೆಂದರೆ ಬಿಎಂಎಸ್ ಅಭ್ಯರ್ಥಿಗಳಿಗೆ ಬಂದಿರುವ ಮತಗಳು ತೀರಾ ಕಮ್ಮಿಯಾದುದು ಹಾಗೂ ಎಐಟಿಯುಸಿ ಅಭ್ಯರ್ಥಿಗಳು ಪಡೆದ ಮತಗಳ ಅಂತರ ನೋಡಲಾಗಿ ಒಬ್ಬರಿಗೊಬ್ಬರು ಆತ್ಮಘಾತುಕ ಕೆಲಸ ನಡೆಸಿರುವುದು ನಿಚ್ಚಳವಾಗಿದೆ.

ವಿದ್ಯುತ್ ಕಡಿತ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ಕಡಿತವನ್ನು ವಿರೋಧಿಸಿ ಬೆಂಗಳೂರು ಜಿಲ್ಲಾ ಪವರ್ ಲೂಂ ಕಾರ್ಮಿಕರ ಸಂಘ(ಸಿಐಟಿಯು) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಬೆಂಗಳೂರು ಜಿಲ್ಲಾ ಸಮಿತಿಗಳು ಪ್ರತಿಭಟನಾ ಪ್ರದರ್ಶನವನ್ನು ಸಂಘಟಿಸಿದ್ದವು.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ವಿದ್ಯುತ್ ಕಡಿತ ಮಾಡಕೂಡದು, ವಿದ್ಯುತ್ ಕಳ್ಳತನ ತಡೆಯಬೇಕು, ಮತ್ತು ಬಳಕೆಯ ದರಗಳನ್ನು ಹೆಚ್ಚಿಸಕೂಡದು, ಕೊಜೆಂಟ್ರಿಕ್ಸ್‌ಗೆ ಅವಕಾಶ ಬೇಡ ಮುಂತಾದ ಬೇಡಿಕೆಗಳ ಆಧಾರದಲ್ಲಿ ಪ್ರತಿಭಟನಾ ಪ್ರದರ್ಶನ ಜರುಗಿತ್ತು.

ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್‌ಐನ ರಾಜ್ಯ ಅಧ್ಯಕ್ಷರಾದ ಎಸ್.ವೈ. ಗುರುಶಾಂತ್‌ರವರು 'ರಾಜ್ಯದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಸಮರ್ಪಕ ಬಳಕೆ ಹಾಗೂ ನೆನೆಗುದಿಗೆ ಬಿದ್ದಿರುವ ಯೋಜನೆಗಳನ್ನು ಜಾರಿಗೊಳಿಸಲು ದೃಢ ಕ್ರಮಗಳನ್ನು ಕೈಗೊಂಡರೆ ವಿದ್ಯುತ್ ಕೊರತೆ ನೀಗಬಹುದು. ಇದನ್ನು ಬಿಟ್ಟು ಕೊಜೆಂಟ್ರಿಕ್ಸ್‌ನಂತಹ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮೊರೆ ಹೋಗಲಾಗುತ್ತಿದೆ. ಸರ್ಕಾರದ ನಿರ್ಲಕ್ಷ್ಯತನವೂ ಸಹ ಅಭಾವದ ಸ್ಥಿತಿಗೆ ಕಾರಣವಾಗಿದೆ. ಇದನ್ನೇ ವಿದೇಶಿ ಕಂಪನಿಗಳಿಗೆ ಅವಕಾಶ ಕಲ್ಪಿಸಲು ಬಳಸವಾಗುತ್ತದೆಯೆಂದು ಶಂಕಿಸಿದರು. ವಿದ್ಯುತ್ ಕೊರತೆಯೆಂದರೆ ಉದ್ಯೋಗಕ್ಕೆ ಸಂಚಕಾರವೆಂದರ್ಥ ಇದು ಆಗಕೂಡದು ಎಂದರು. ಪವರ್‌ಲೂಂ ಕಾರ್ಮಿಕ ಸಂಘದ ಪ್ರಧಾನಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷರಾದ ಅಶೋಕನ್ ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕೆಇಬಿ ಉಪ ಕಾರ್ಯದರ್ಶಿಯವರು ಮನವಿ ಸ್ವೀಕರಿಸಿದರು. ಡಿಸೆಂಬರ್ 10ರಒಳಗೆ ಸಮಸ್ಯೆಯನ್ನು ಸರಿಪಡಿಸದಿದ್ದಲ್ಲಿ 11ರಿಂದ ಹೋರಾಟ ನಡೆಸುವ ನಿರ್ಧಾರ ಪ್ರಕಟಿಸಲಾಯಿತು.

ಸೈಕಲ್ ಜಾಥಾ

ರಾಜ್ಯದಲ್ಲಿ ತೀವ್ರರೀತಿಯ ವಿದ್ಯುತ್ ಅಭಾವ ಉಂಟಾಗಿದ್ದು ಸರ್ಕಾರ ತಕ್ಷಣವೇ ಅಗತ್ಯಕ್ರಮ ತೆಗೆದುಕೊಂಡು ವಿದ್ಯತ್ ಕಡಿತ ನಿಲ್ಲಿಸಬೇಕೆಂದು ಒತ್ತಾಯಿಸಿ ಡಿವೈಎಫ್‌ಐ ಚಿಕ್ಕಬೇಗೂರು ಗೇಟ್, ಕೂಡ್ಲು, ಪರಪ್ಪನಅಗ್ರಹಾರ ಘಟಕಗಳು ಚಿಕ್ಕಬೇಗೂರು ಗೇಟ್‌ನಿಂದ ಸೈಕಲ್ ಜಾಥಾ ನಡೆಸಿ ಕೆಇಬಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಸರ್ಕಾರವನ್ನು ಒತ್ತಾಯಿಸಿದರು.

ಜಿಲ್ಲಾ ಡಿವೈಎಫ್‌ಐ ಅಧ್ಯಕ್ಷರಾದ ಎಂ.ಅಶೋಕನ್ ಮಾತನಾಡಿ ವಿದ್ಯುತ್ ಅಭಾವ ತಡೆಗಟ್ಟಬೇಕು, ಕೆ.ಇ.ಬಿ. ಭ್ರಷ್ಟಾಚಾರ ತಡೆಗಟ್ಟಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಮಾತನಾಡಿ ವಿದ್ಯುತ್ ಅಭಾವಕ್ಕೆ ಹಿಂದಿನ ಕಾಂಗ್ರೆಸ್ ಪಕ್ಷ ಕಾರಣ ಎಂದು ಟೀಕಿಸಿದರು. ಕಾರ್ಮಿಕ ಮುಖಂಡರಾದ ಕಾಂ. ಶಾಮಣ್ಣ ರೆಡ್ಡಿ ಈ ಸಂದರ್ಭದಲ್ಲಿ ಮಾತನಾಡಿ ವಿದ್ಯುತ್ ಅಭಾವ ಪರಿಹರಿಸಬೇಕೆಂದು ಒತ್ತಾಯಿಸಿದರು.

ಸೈಕಲ್ ಜಾಥಾದ ನೇತೃತ್ವವನ್ನು ಚಿಕ್ಕಬೇಗೂರು ಗೇಟ್ ಡಿವೈಎಫ್‌ಐ ಘಟಕದ ಅಧ್ಯಕ್ಷರಾದ ಎಂ.ಎಸ್.ಆನಂದಕುಮಾರ್, ಕಾರ್ಯದರ್ಶಿ ಲಕ್ಷ್ಮಣ್ ವಹಿಸಿದ್ದರು. ಕೊನೆಯಲ್ಲಿ ಕೆ.ಇ.ಬಿ.ಅಧಿಕಾರಿಗಳಿಗೆ ಮನವಿ ಪತ್ರ ನೀಡಲಾಯಿತು.

ಪ್ರೆಸ್ ಕಾರ್ಮಿಕರ ಪಂಜಿನ ಮೆರವಣಿಗೆ

ಮಣಿಪಾಲ: ನಗರದ ಪ್ರೆಸ್ ಮಾಲಕರ ದಬ್ಬಾಳಿಕೆಯ ವಿರುದ್ಧ ಹೋರಾಟವನ್ನು ಆರಂಭಿಸಿದ್ದ ಉಡುಪಿ ತಾಲೂಕು ಪ್ರೆಸ್ ವರ್ಕರ್ಸ್ ಯೂನಿಯನ್ ಡಿಸೆಂಬರ್ 1ರಂದು ರಾತ್ರಿ ಮಣಿಪಾಲದಲ್ಲಿ ಆಕರ್ಷಕ ಬೃಹತ್ ಪಂಜಿನ ಮೆರವಣಿಗೆಯನ್ನು ನಡೆಸಿತು.

ಸುಮಾರು ನಾಲ್ಕು ನೂರು ಪ್ರೆಸ್ ಕಾರ್ಮಿಕರು ಉರಿಯುವ ದೀವಟಿಗೆಯನ್ನು ಹಿಡಿದು ಸ್ಥಾಯೀ ಆದೇಶ ಬದಲಾಗಬೇಕು, ದಬ್ಬಾಳಿಕೆ ನಿಲ್ಲಬೇಕು, ಎಲ್ಲಾ ಕಾರ್ಮಿಕರ ಅಮಾನತು ಹಿಂತೆಗೆಯಬೇಕು, ಎಲ್ಲಾ ಸಮಸ್ಯೆಗಳನ್ನು ಮಾಲಕರು ಯೂನಿಯನ್‌ನೊಂದಿಗೆ ಚರ್ಚಿಸಿ ಬಗೆಹರಿಸಬೇಕು ಇವೇ ಮೊದಲಾದ ಬೇಡಿಕೆಗಳ ಈಡೇರಿಕೆಗಾಗಿ ಮೆರವಣಿಗೆ ನಡೆಸಿದರು. ಮಣಿಪಾಲದ ನಾಗರಿಕರು ಈ ಆಕರ್ಷಕ ಮೆರವಣಿಗೆಯನ್ನು ಆಶ್ಚರ್ಯಚಕಿತರಾಗಿ ನೋಡುತ್ತಿದ್ದರು. ಒಂದೂವರೆ ಗಂಟೆಗಳ ಕಾಲ ಮಣಿಪಾಲದ ಮೂಲೆ ಮೂಲೆಗಳಲ್ಲಿ ಹಾಯ್ದು ಮೆರವಣಿಗೆ ಟೈಗರ್ ಸರ್ಕಲ್ ನಲ್ಲಿ ಮುಕ್ತಾಯವಾಯಿತು.

ಉಡುಪಿ ತಾಲೂಕು ಪ್ರೆಸ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷ ಶ್ರೀ ಪಿ. ವಿಶ್ವನಾಥರೈಯವರು ಮೆರವಣಿಗೆಯಲ್ಲಿ ಭಾಗವಹಿಸಿದ ಎಲ್ಲಾ ಕಾರ್ಮಿಕರನ್ನು ಅಭಿನಂದಿಸಿ ಮಾತನಾಡುತ್ತಾ ಈ ಮೆರವಣಿಗೆಯು ಮಣಿಪಾಲದ ಇತಿಹಾಸದಲ್ಲಿ ಪ್ರಥಮವಾಗಿ ನಡೆದ ಚರಿತ್ರಾರ್ಹ ಮೆರವಣಿಗೆಯಾಗಿದೆ ಎಂದರು.

ಸಂಘಟನೆಗಳ ಬೆಂಬಲ: ಮಣಿಪಾಲದ ಪ್ರೆಸ್ ಕಾರ್ಮಿಕರು ನಡೆಸುತ್ತಿರುವ ಈ ಹೋರಾಟಕ್ಕೆ ಬೆಂಬಲವಾಗಿ 22.11.95ರಂದು ಉಡುಪಿ ತಾಲೂಕಿನ ಸಿಐಟಿಯುಗೆ ಸೇರಿದ ಹೆಂಚಿನ ಕಾರ್ಮಿಕರು, ಗೋಡಂಬಿ ಕಾರ್ಮಿಕರು, ಬೀಡಿ ಕಾರ್ಮಿಕರು, ಪ್ಲೈವುಡ್ ಕಾರ್ಮಿಕರು, ಬ್ರಹ್ಮಾವರದ ರಿಕ್ಷಾಚಾಲಕರು ಮಣಿಪಾಲ ಪವರ್ ಪ್ರೆಸ್‌ನ ಎದುರು ಮತಪ್ರದರ್ಶನ ನಡೆಸಿದರು.

ಈ ಸಭೆಯನ್ನುದ್ದೇಶಿಸಿ ಮಾತನಾಡಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕೆ.ಮೂಸಬ್ಬ ಮತ್ತು ಕಾರ್ಯದರ್ಶಿ ಕೆ.ಶಂಕರ್ ಮಾತನಾಡುತ್ತಾ ಸಮಸ್ಯೆಗಳನ್ನು ಪರಿಹರಿಸಲು ಮಾಲಕರು ಮಾತುಕತೆಗೆ ಮುಂದೆ ಬಂದರೆ ನಾವೂ ಸಿದ್ಧರಾಗಿದ್ದೇವೆ ಎಂದರು. ಉಡುಪಿ ತಾಲೂಕು ಪ್ರೆಸ್ ವರ್ಕರ್ಸ್ ಯೂನಿಯನ್‌ನ ಕಾರ್ಯಕರ್ತರು, ಉಡುಪಿ ಬೀಡಿ ಎಂಡ್ ಟೊಬೇಕೋ ಲೇಬರ್ ಯೂನಿಯನ್, ಮಲ್ಪೆ ಪ್ರದೇಶಬೀಡಿ ಯೂನಿಯನ್, ಬ್ರಹ್ಮಾವರ ರಿಕ್ಷಾ ಚಾಲಕರ ಸಂಘ, ಹಂಗಾರಕಟ್ಟೆ ಪ್ಲೈವುಡ್ ಯೂನಿಯನ್, ಹಂಚಿನ ಕಾರ್ಮಿಕರ ಸಂಘ, ದ.ಕ. ಜಿಲ್ಲಾ ಬೀಡಿ ಯೂನಿಯನ್ ಮೊದಲಾದ ಸಂಘಟನೆಗಳು ತಮ್ಮ ಬೆಂಬಲವನ್ನು ಸೂಚಿಸಿವೆ.

ಡಾ.ಅಂಬೇಡ್ಕರ್ ಪ್ರತಿಮೆಗೆ ಅವಮಾನ: ಸ್ಥಾಪಿತ ಹಿತಾಸಕ್ತಿಗಳ ಸಂಚು

ಡಾ. ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿದ ಖಂಡನೀಯ ಪ್ರಕರಣವು ಒಂದು ವರ್ಗದ ವಿದ್ಯಾರ್ಥಿ-ಯುವಜನರಲ್ಲಿ ರಾಷ್ಟ್ರೀಯ ನಾಯಕರು, ರಾಷ್ಟ್ರೀಯ ಮೌಲ್ಯಗಳ ಬಗ್ಗೆ ಬೆಳೆಯುತ್ತಿರುವ ಅಸಹನೆ, ಬೇಜವಾಬ್ದಾರಿತನಗಳನ್ನು ತೋರಿಸುತ್ತಿದೆ. ಸಮಾಜದ ಸ್ವಾಸ್ಥ್ಯವನ್ನು ನಾಶಗೊಳಿಸಿ ತಮ್ಮ ಸಂಕುಚಿತ ರಾಜಕೀಯ ಹಿತಾಸಕ್ತಿಗಳಿಗೆ ಕೆಲವರು ಇದನ್ನೇ ಬಳಸುತ್ತಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಇದನ್ನು ತಡೆಯಲೇಬೇಕೆಂದು ಡಿವೈಎಫ್‌ಐನ ರಾಜ್ಯ ಸಮಿತಿಯ ಸಭೆಯು ಎಚ್ಚರಿಸಿದೆ.

ಯಾವುದೇ ಆದರ್ಶಗಳಿಲ್ಲದೇ ಶಿಕ್ಷಣ ರಂಗದಲ್ಲಿ ಡೊನೇಶನ್ ವಸೂಲಿಯಂತಹ ವ್ಯಾಪಾರೀ ಪದ್ಧತಿಯು ಹುಟ್ಟು ಹಾಕುತ್ತಿರುವ ಇಂತಹ ಮನೋಭಾವಗಳ ಬಗ್ಗೆ ಸರಕಾರ ತಕ್ಷಣವೇ ಕಡಿವಾಣ ಹಾಕದಿದ್ದಲ್ಲಿ ಪರಿಸ್ಥಿತಿಯು ಇನ್ನೂ ಆಸ್ಫೋಟನೆಯ ಹಂತಕ್ಕೆ ತಲುಪಲಿದೆ. ಹೀಗಾಗಿ ಇಡೀ ಶಿಕ್ಷಣ ಸಾಗುತ್ತಿರುವ ಅವನತಿಯ ಹಾದಿ, ನೀತಿಗಳ ಬಗ್ಗೆ ವಿಮರ್ಶೆ ಮತ್ತು ಬದಲಾವಣೆ ಕ್ರಮಗಳು ಅತೀ ಅಗತ್ಯವಾಗಿದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವವರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ಇದೇ ಸಂದರ್ಭದಲ್ಲಿ ರಾಷ್ಟ್ರದ ವಿವಿಧ ಕಡೆಗಳಲ್ಲಿ ನಡೆದ ಇಂತಹುದೇ ಘಟನೆಗಳನ್ನು ಪರಿಶೀಲಿಸಿದಾಗ ಕೆಲವು ಸ್ಥಾಪಿತ ಹಿತಾಸಕ್ತಿಗಳ ಸಂಚು ಇದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಶಕ್ತಿಗಳು ಸಮಾಜವನ್ನು ಒಡೆಯುವ ಕೆಲಸದಲ್ಲಿ ನಿರತವಾಗಿವೆ. ಮುಂದಿನ ಚುನಾವಣೆಯನ್ನು ಗಮನದಲ್ಲಿರಿಸಿ ಕಾಂಗ್ರೆ ಮತ್ತು ಬಿಜೆಪಿಗಳು ಇದನ್ನು ಬಳಸಲು ಸಕ್ರಿಯವಾಗಿದೆ. ಇದನ್ನು ದಲಿತ ಸಮೂಹ ಮತ್ತು ಸಂಘಟನೆಗಳು ಅರ್ಥ ಮಾಡಿಕೊಳ್ಳಲು ಡಿವೈಎಫ್‌ಐ ವಿನಂತಿಸಿದೆ.

ಎಸ್‌ಎಫ್‌ಐ ಬಳ್ಳಾರಿ ಜಿಲ್ಲಾ ಸಮ್ಮೇಳನ

ಬಳ್ಳಾರಿ: ಎಸ್‌ಎಫ್‌ಐನ 10ನೇ ಬಳ್ಳಾರಿ ಜಿಲ್ಲಾ ಸಮ್ಮೇಳನ ನವಂಬರ್ 25ರಂದು ನಡೆಯಿತು. ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಎಸ್‌ಎಫ್‌ಐನ ಜಿಲ್ಲಾಧ್ಯಕ್ಷರಾದ ಎಂ.ಮಂಜುನಾಥ್ ಮಾತನಾಡಿ ಹಡಗಲಿಯಲ್ಲಿ ಟಿಸಿಎಚ್ ಕಾಲೇಜನ್ನು ಆರಂಭಿಸಬೇಕು, ಜಿಂದಾಲ್ ಉಕ್ಕಿನ ಕಾರ್ಖಾನೆಯಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶಗಳು ಸಿಗಬೇಕು, ಹರಪನಹಳ್ಳಿ, ಹೊಸಪೇಟೆಯಲ್ಲಿ ಉದ್ಯೋಗ ವಿನಿಮಯ ಕೇಂದ್ರವನ್ನು ತೆರೆಯಬೇಕೆಂದು ಒತ್ತಾಯಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಜಿ.ಎಂ.ವೀರಸಂಗಯ್ಯನವರು ಇಂದಿನ ಸರಕಾರದ ವಿದ್ಯುತ್ ನೀತಿ ಮತ್ತು ಆರ್ಥಿಕ ನೀತಿಗಳು ಬಂಡವಾಳಶಾಹಿ ಪರವಾಗಿವೆ ಇದರ ವಿರುದ್ಧ ವಿದ್ಯಾರ್ಥಿಗಳು ಹೋರಾಟ ನಡೆಸಬೇಕೆಂದರು. ಆರಂಭದಲ್ಲಿ ರಹಮತ್ ಸ್ವಾಗತಿಸಿದರು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ.ಕೆ. ರಮೇಶ್ ವಹಿಸಿದ್ದರು.

ನೂತನ ಜಿಲ್ಲಾ ಸಮಿತಿ: ಅಧ್ಯಕ್ಷರಾಗಿ ಹೆಚ್.ರಹಮತ್, ಕಾರ್ಯದರ್ಶಿಯಾಗಿ ಕಾಂ.ಕೆ. ರಮೇಶ್, ಉಪಾಧ್ಯಕ್ಷರಾಗಿ ಕೆ.ಈರಣ್ಣ, ಎಂ.ಕೊಟ್ರೇಶ್, ಸಹ ಕಾರ್ಯದರ್ಶಿಗಳಾಗಿ ಗೋಪಾಲಕೃಷ್ಣ, ರಂಗಪ್ಪ ದಾಸರ, ಶ್ರೀನಿವಾಸ ಆಯ್ಕೆಯಾದರು.

ಟಿಸಿಎಚ್ ವಿದ್ಯಾರ್ಥಿಗಳ ಯಶಸ್ವೀ ಹೋರಾಟ

ಹರಪನಹಳ್ಳಿ: ಹರಪನಹಳ್ಳಿಯಲ್ಲಿರುವ ಟಿಎಂಎಇ ಸಂಸ್ಥೆಯ ಟಿಸಿಎಚ್ ಕಾಲೇಜಿನಲ್ಲಿ ಸರಕಾರದಿಂದ ಆಯ್ಕೆಯಾದ 90 ವಿದ್ಯಾರ್ಥಿಗಳಿಗೆ ಪ್ರವೇಶ ನೀಡದಿರುವುದನ್ನು ಪ್ರತಿಭಟಿಸಿ ಮುಷ್ಕರವನ್ನು ನಡೆಸಿದ ವಿದ್ಯಾರ್ಥಿಗಳು ಹೋರಾಟದಲ್ಲಿ ಯಶಸ್ವಿಯಾಗಿದ್ದಾರೆ.

ಈ ಶಿಕ್ಷಣ ಸಂಸ್ಥೆಯ ಅನೀತಿಗಳನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಎಸ್‌ಎಫ್‌ಐನ ನೇತೃತ್ವದಲ್ಲಿ ಆಕ್ಟೋಬರ್ 26ರಂದು ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ತಹಸೀಲ್ದಾರರಿಗೆ ಮನವಿ ಅರ್ಪಿಸಿದ್ದರು. ಈ ಸಂದರ್ಭದಲ್ಲಿ ಪ್ರವೇಶ ನೀಡಲು ಒಪ್ಪಿದ್ದ ಆಡಳಿತ ಮಂಡಳಿ ಪುನಃ ನಿರಾಕರಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಮತ್ತೆ ಆಕ್ಟೋಬರ್ 28ರಂದು ನಡೆದ ವಿದ್ಯಾರ್ಥಿಗಳ ಪ್ರತಿಭಟನೆಗೆ ಮಣಿದು ವಿದ್ಯಾರ್ಥಿಗಳ ಪ್ರವೇಶಕ್ಕೆ ಒಪ್ಪಿಗೆ ನೀಡಿತು.

ಈ ಹೋರಾಟದಲ್ಲಿ ಸಹಕರಿಸಿದ ಎಲ್ಲರಿಗೂ ಎಸ್‌ಎಫ್‌ಐ ಜಿಲ್ಲಾ ಸಮಿತಿ ಅಭಿನಂದನೆ ಸಲ್ಲಿಸಿದೆ.

ಸಿಪಿಐ(ಎಂ) ಅಭ್ಯರ್ಥಿಗಳಿಗೆ ಜಯ

ಇತ್ತೀಚಿಗೆ ಗೌರಿಬಿದನೂರು ತಾಲೂಕು ಮೇಳ್ಯ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದ ಪರವಾಗಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ. ಎಂ.ಎನ್. ಚಂದ್ರಪ್ಪನವರು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಗೌರಿಬಿದನೂರು ತಾಲೂಕು ವಾಟದಹೊಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಾಲ್ಕು ಜನ ಸಿಪಿಐ(ಎಂ) ಅಭ್ಯರ್ಥಿಗಳು ಜಯ ಗಳಿಸಿದ್ದಾರೆ. ಅಲ್ಲದೇ ಇದೇ ತಾಲೂಕಿನ ಕುರುಬರಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಡಿವೈಎಫ್‌ಐ ಬೆಂಬಲದಿಂದ ಕೆ.ಎನ್. ಶ್ರೀನಿವಾಸರೆಡ್ಡಿ, ಕೆ.ಎನ್.ನರಸಿಂಹರೆಡ್ಡಿ, ಅಂಜನಪ್ಪ, ಲಕ್ಷ್ಮಮ್ಮ ಈ ನಾಲ್ಕು ಜನ ನಿರ್ದೇಶಕರುಗಳಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕ್ಯೂಬಾ ಸೌಹಾರ್ದತಾ ದಿನಾಚರಣೆ

ದಾಂಡೇಲಿ: ನವಂಬರ್ 7ರ ಸಂಜೆ 7 ಗಂಟೆಗೆ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್(ಸಿಐಟಿಯು) ಆಫೀಸಿನ ಸಭಾಂಗಣದಲ್ಲಿ ಕ್ಯೂಬಾ ಸೌಹಾರ್ದತಾ ದಿನಾಚರಣೆಯನ್ನು ಆಚರಿಸಿತು. ನೂರಾರು ಸಿಐಟಿಯು ಕಾರ್ಯಕರ್ತರು ಭಾಗವಹಿಸಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಉತ್ತರ ಕನ್ನಡ ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಕಾಂ. ಹರೀಶ ನಾಯ್ಕರವರು ವಹಿಸಿದ್ದರು. ಸಭೆಯ ಪ್ರಾರಂಭದಲ್ಲಿ ಕಾಂ. ಭೀಮರಾವ್‌ರವರು ಮಾತನಾಡುತ್ತಾ ಕ್ಯೂಬಾದ ಇಂದಿನ ಪರಿಸ್ಥಿತಿ, ಅಮೇರಿಕಾ ಕ್ಯೂಬಾದ ವಿರುದ್ಧ ದಿಗ್ಬಂಧನ ವಿಧಿಸಿದ್ದನ್ನು ಖಂಡಿಸಿದರು. ನಂತರ ಕಾಂ. ಮಾಧವರವರು ಸಮಾಜವಾದಿ ಕ್ಯೂಬಾ ದೇಶದ ಅಭಿವೃದ್ಧಿ ಹೇಗೆ ಆಯಿತು. ಕ್ಯೂಬಾದ ಅಧ್ಯಕ್ಷರಾದ ಕಾಂ. ಫಿಡೆಲ್ ಕ್ಯಾಸ್ಟ್ರೋರವರ ಧೀರೋದಾತ್ತ ಹೋರಾಟವನ್ನು ಶ್ಲಾಘಿಸಿದರು. ಅಮೇರಿಕಾವು ವಿಧಿಸಿದ ದಿಗ್ಬಂಧನವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಠರಾವು ಮಾಡುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

ಮಾಧ್ಯಮ ಮತ್ತು ಮಹಿಳೆ- ವಿಚಾರ ಸಂಕಿರಣ

ಎಸ್.ಎಫ್.ಐ. ರಾಜ್ಯ ಸಮಿತಿ ಸಂಘಟಿಸಿದ್ದ ಪ್ರಪ್ರಥಮ ರಾಜ್ಯ ಮಟ್ಟದ ವಿದ್ಯಾರ್ಥಿನಿಯರ ಸಮಾವೇಶದ 2 ನೇ ದಿನ ಮಾಧ್ಯಮ ಮತ್ತು ಮಹಿಳೆ ಕುರಿತು ವಿಚಾರ ಸಂಕಿರಣ ನಡೆಸಲಾಯಿತು. ಈ ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ಬಂಡಾಯ ಸಾಹಿತಿಗಳಾದ ಡಾ.ಆರ್.ವಿ.ಬಂಡಾರಿಯವರು ಮಾತನಾಡುತ್ತಾ ಪತ್ರಿಕೆ, ಟಿ.ವಿ., ಸಿನಿಮಾ ಮುಂತಾದ ಮಾಧ್ಯಮಗಳು ಮಹಿಳೆಯನ್ನು ಅಧಃಪತನಕ್ಕೆ ಕೊಂಡೊಯ್ಯುವ ಕೆಲಸವನ್ನು ನಡೆಸುತ್ತಿವೆ. ವೇದ ಪಠಣ, ಸಂಧ್ಯಾವಂದನೆ, ಪೂಜೆ ಮುಂತಾದವುಗಳು ಪುರುಷರಿಗೆ ಮಾತ್ರ. ಮಹಿಳೆಯರಿಗೆ ಇದರಲ್ಲಿ ವಿನಾಯಿತಿ ನೀಡಿ ಅವರಿಗೆ ಸ್ವಾತಂತ್ರ್ಯವನ್ನು ನೀಡಲಾಗಿದೆ. ಮಹಿಳೆಯು ಬಾಲ್ಯದಲ್ಲಿ ತಂದೆಯ ರಕ್ಷಣೆ, ತಾರುಣ್ಯದಲ್ಲಿ ಗಂಡನ ರಕ್ಷಣೆ, ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲಿಬೇಕೆನ್ನುವ ಅಪಾಯಕಾರಿ ವಾದಗಳಿಗೆ ಇಂದು ಪತ್ರಿಕಾ ಮಾಧ್ಯಮದಲ್ಲಿ ಪ್ರಚಾರ ನೀಡುತ್ತಿರುವುದು ವಿಷಾದಕರ ಎಂದರು.

ಮಹಿಳೆಯ ದೈಹಿಕ ಸಂರಚನೆಯು ಪುರುಷನಿಗಿಂತ ಬಿನ್ನವಾಗಿದ್ದು, ಆಕೆ ಪುರುಷನೊಡನೆ ಸಮಾನತೆಯನ್ನು ನಿರೀಕ್ಷಿಸಬಾರದು. ಮಕ್ಕಳನ್ನು ಹೆರುವುದೇ ಆವಳ ಕೆಲಸ ಅನ್ನುವ ರೀತಿಯಲ್ಲಿ ಮಾತನಾಡುತ್ತಿರುವ ಬಿ.ಜೆ.ಪಿ.ಯ ರಾಷ್ಟ್ರೀಯ ವಕ್ತಾರೆ ಸುಷ್ಮಾ ಸ್ವರಾಜ್ ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ ಭಂಡಾರಿಯವರು ಸಾಂಸ್ಕೃತಿಕ ಅಧಃಪತನಕ್ಕೆ ಕಾರಣ ವಾಗುತ್ತಿರುವ ಉಪಗ್ರಹ ಚಾನೆಲ್ ಗಳೂ, ಕೀಳು ಸವಕಲು ವಿದೇಶಿ ಸಂಸ್ಕೃತಿಯನ್ನು ಪ್ರಚಾರ ಮಾಡುವ ಮಾಧ್ಯಮಗಳ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು.

ಜನವಾದಿ ಮಹಿಳಾ ಸಂಘಟನೆಯ (ಜೆಎಂಎಸ್) ರಾಜ್ಯ ಕಾರ್ಯದರ್ಶಿ ಕೆ.ಎಸ್.ವಿಮಲ ಅವರು ತಮ್ಮ ವಿಚಾರವನ್ನು ಮಂಡಿಸುತ್ತಾ ಭಾರತೀಯ ಸಂಸ್ಕೃತಿಯನ್ನು ವೈಭವೀಕರಿಸುವ ಬೊಬ್ಬೆಯ ಮಾತುಗಳು ಇಂದು ಹೆಚ್ಚು ಹೆಚ್ಚಾಗಿ ಕೇಳಿ ಬರುತ್ತಿವೆ. ನಮ್ಮ ಸಂಸ್ಕೃತಿಯಲ್ಲಿ ಎಲ್ಲವೂ ಒಳ್ಳೆಯದಿಲ್ಲ. ಮಹಿಳೆಯನ್ನು ಅಡಿಗೆಮನೆ ಮಿತಿಯಲ್ಲೇ ಬಂಧಿಸುವ ಪಾಳೆಗಾರಿ ಮೌಲ್ಯಗಳು ಇವೆ. ಅದೇ ಸಮಯದಲ್ಲಿ ಮಹಿಳೆಯನ್ನು ಲಾಭ ತರುವ ಸಾಧನದಂತೆ, ಭೋಗ ವಸ್ತುವಿನಂತೆ ನೋಡುವ ಪಾಶ್ಚಿಮಾತ್ಯ ಸಂಸ್ಕೃತಿ ದಾಳಿ ಇಡುತ್ತಿದೆ. ಹಲವಾರು ಪತ್ರಿಕೆಗಳು ಹೆಣ್ಣು ಮದುವೆಯಾಗಿ ಗಂಡ, ಅತಿಥಿಗಳ ಸೇವೆ ಮಾಡುತ್ತಾ, ಅಡಿಗೆ, ಅಲಂಕಾರ ಮಾಡಿಕೊಂಡು ಗಂಡಿಗೆ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಳ್ಳಬೇಕೆಂಬಂತಹ ರೀತಿಯ ಅಪಾಯಕಾರಿ ಪ್ರಚಾರ ಮಾಡುತ್ತಿವೆ. ಈ ಬಗ್ಗೆ ಎಚ್ಚರದಿಂದಿರಬೇಕೆಂದು ತಿಳಿಸಿದರು ಅಪಾಯಕಾರಿ ವಿಚಾರಗಳನ್ನು ವೈಭವೀಕರಿಸುವ ಸಿನಿಮಾಗಳ ಬಗ್ಗೆ ಅವರು ಎಚ್ಚರಿಸಿದರು.

ಎಸ್.ಎಫ್.ಐ.ನ ಅಖಿಲ ಭಾರತ ಉಪಾಧ್ಯಕ್ಷೆ ಮರಿಯಂ ಧವಳೆ ಮಾತನಾಡಿ ಸರಕಾರದ ಉದಾರೀಕರಣ ನೆಲೆಯಿಂದ ಮಾಧ್ಯಮ ನೀತಿಯಲ್ಲಿ ತೀವ್ರ ಬದಲಾವಣೆ ಬರುತ್ತಿದ್ದು, ಮಹಿಳೆಯನ್ನು ಲಾಭ ಮಾಡಿಕೊಳ್ಳುವ ಸಾಧನದಂತೆ ನೋಡುವ ಅಸಹ್ಯಕರ ಬಂಡವಾಳಶಾಹಿ ಪಾಶ್ಚಿಮಾತ್ಯ ಸಂಸ್ಕೃತಿ ಆಕ್ರಮಣದ ಅಪಾಯಕಾರಿ ಮನೋಭಾವವನ್ನು ವಿರೋಧಿಸಿ, ಇದರ ವಿರುದ್ಧ ವಿದ್ಯಾರ್ಥಿ ಚಳುವಳಿ ಬಲಿಷ್ಠಗೊಳಿಸಲು ಕರೆ ನೀಡಿದರು.

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಪ್ರಕಾಶ್.ಕೆ. ವಹಿಸಿದ್ದರು. ಎಸ್‌ಎಫ್‌ಐ ಉತ್ತರ ಕನ್ನಡ ಜಿಲ್ಲಾ ಅಧ್ಯಕ್ಷ ಜೋಸೆಫ್ ಥಾಮಸ್ ಸ್ವಾಗತ ಕೋರಿದರು. ಕೊನೆಯಲ್ಲಿ ರೇಣುಕಾ ನಾಯಕ ವಂದಿಸಿದರು.

1 ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು. ಈ ವ್ಯವಸ್ಥೆಯ ಮೂಲಕವೇ 14 ಅತ್ಯಾವಶ್ಯಕ ವಸ್ತುಗಳ್ನು ವಿತರಿಸುವುದು. ನ್ಯಾಯ ಬೆಲೆ ಅಂಗಡಿಗಳ ಮೂಲಕ ಆಹಾರ ಧಾನ್ಯವನ್ನು ಈಗಿನ ಅರ್ಧ ಬೆಲೆಗೆ ವಿತರಿಸಬೇಕು.

ನರಸಿಂಹರಾಯರ ಸರಕಾರದ ಆಡಳಿತ ಪ್ರಾರಂಭವಾದ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಹಲವು ಜನ ಉಪವಾಸ ಸತ್ತಿದ್ದಾರೆ. ಕೇಂದ್ರ ಸರಕಾರ ಇದು ಸ್ಥಳೀಯ ಕಾರಣಗಳಿಂದಾಗಿ ಆಗಿರುವುದು ಎನ್ನುತ್ತಿದೆ. ಆದರೆ ಈಗಾಗಲೇ ಸಮೀಕ್ಷೆಗಳು ಉದಾರೀಕರಣ ಬಂದಂದಿನಿಂದ ದೇಶದಲ್ಲಿ ಬಡತನ ಹೆಚ್ಚುತ್ತಿದೆ ಎಂಬುದನ್ನು ತೋರಿವೆ. ದೇಶದ ದುಡಿವ ಜನ ತಮ್ಮ ಆಹಾರದ ಕನಿಷ್ಠ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳಲಾರದಂತಹ ಪರಿಸ್ಥಿತಿಗೆ ದೂಡಲ್ಪಟ್ಟಿದ್ದಾರೆ.

ಒಂದು ಕಡೆ ಅವಶ್ಯ ವಸ್ತುಗಳ ಬೆಲೆಗಳು ಯದ್ವಾತದ್ವಾ ಏರುತ್ತಲೇ ಇವೆ. ಅದೇ ಸಮಯದಲ್ಲಿ ದುಡಿವ ಜನರ ಕೂಲಿ/ವೇತನ ಹೆಚ್ಚುತ್ತಿಲ್ಲ. ಹೀಗಿರುವಾಗ ಜನ ಆಹಾರದ ಮೇಲೇ ಹೆಚ್ಚು ಖರ್ಚು ಮಾಡಿದರೂ ಅವಶ್ಯವಿರುವಷ್ಟು ಆಹಾರ ಕೊಳ್ಳಲಾಗುತ್ತಿಲ್ಲ. ಪರಿಣಾಮ ಅರೆ ಹೊಟ್ಟೆ ಜನರಲ್ಲಿ ಪೌಷ್ಟಿಕಾಂಶಗಳ ತೀವ್ರ ಕೊರತೆ ರೋಗಗಳಿಗೆ ಸುಲಭವಾಗಿ ತುತ್ತು. ಉಪವಾಸದಿಂದಲೇ ಹಲವು ಸಾವು.

ಒಂದು ಸಮೀಕ್ಷೆಯ ಪ್ರಕಾರ ಉದಾರೀಕರಣ ಪ್ರಾರಂಭವಾದ ಮೊದಲೆರಡು ವರ್ಷಗಳಲ್ಲಿ ಆಹಾರ ಸೇವನೆ/ಬಳಕೆಯ ಪ್ರಮಾಣ ಕೆಳಗಿನ ಶೇ. 30ರಷ್ಟು ಜನತೆಯಲ್ಲಿ ಕುಸಿದಿದೆ. (ನಗರ ಪಟ್ಟಣಗಳೆರಡರಲ್ಲೂ) ಮಧ್ಯದ ಶೇ. 40ರಷ್ಟು ಜನತೆಯನ್ನು ನೋಡಿದರೆ ಗ್ರಾಮೀಣ ಪ್ರದೇಶದ ಜನರಲ್ಲಿ ಈ ಬಳಕೆ ಪ್ರಮಾಣ ಕುಸಿದಿದ್ದರೆ ನಗರ ಪ್ರದೇಶದಲ್ಲಿ ಅದು ಹಿಂದೆ ಇರುವಷ್ಟು ಇದೆ. ಉಳಿದ ಶೇ. 30ರಷ್ಟು ಜನರಲ್ಲಿ ಮಾತ್ರ ಈ ಬಳಕೆಯ ಪ್ರಮಾಣ ಹೆಚ್ಚಿದೆ.

ಗೋದಾಮುಗಳಲ್ಲಿ ಧಾನ್ಯವಿದೆ ಹೊಟ್ಟೆಗೆ ಮಾತ್ರ ಹಿಟ್ಟಿಲ್ಲ

ಇಂತಹ ವಿಷಮ ಪರಿಸ್ಥಿತಿಯಲ್ಲಿ ದೇಶದ ಜನಸಾಮಾನ್ಯರಿಗೆ ಸ್ವಲ್ಪವಾದರೂ ಪರಿಹಾರ ದೊರಕಬೇಕೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕಾಗುತ್ತದೆ. ಆಹಾರ ಧಾನ್ಯಗಳೂ ಸೇರಿದಂತೆ 14 ಅವಶ್ಯ ವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಿಸಬೇಕು.

ರೇಶನ್ ಅಂಗಡಿಗಳಿಂದ 1991-92ರಲ್ಲಿ ಶೇ. 86ರಷ್ಟು ಧಾನ್ಯ ಖರೀದಿಯಾಗುತ್ತಿದ್ದರೆ, 1994ರಲ್ಲಿ ಕೇವಲ ಶೇ. 43 ರಷ್ಟು ಮಾತ್ರ ಖರೀದಿಯಾಯಿತು. ಏಕೆ, ಜನಗಳಿಗೆ ರೇಶನ್ ಅಕ್ಕಿ, ಗೋಧಿ ಹಿಡಿಸಲಿಲ್ಲವೆಂದೇ? ಇಲ್ಲ, ರೇಶನ್ ಅಂಗಡಿಯಲ್ಲಿರುವ ಆಹಾರ ಧಾನ್ಯಗಳನ್ನು ಕೊಳ್ಳಲೂ ಹಣ ಇಲ್ಲವಾದ್ದರಿಂದ.

ಆದ್ದರಿಂದ ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಣೆಯಾಗುವ ಆಹಾರ ಧಾನ್ಯಗಳ ಬೆಲೆಯನ್ನು ಈಗಿರುವುದರ ಅರ್ಧಕ್ಕೆ ಇಳಿಸಬೇಕು. ಆದರೆ ಜನ ಉಪವಾಸದಿಂದ ನರಳಿ ನರಳಿ ಸಾಯುವುದನ್ನು ತಪ್ಪಿಸಲು ಈ ಬೆಲೆ ಕಡಿತ ತರಲೇಬೇಕು. ಸಿಪ, ಹೀಗೆ ಬೆಲೆ ಕಡಿತ ಮಾಡಲು ಸರಕಾರ ಸುಮಾರು 1600 ಕೋಟಿ ರೂಪಾಯಿಗಳ ಸಹಾಯ ಧನ ನೀಡಬೇಕಾಗುತ್ತದೆ. ಕೋಟಿ ಕೋಟಿ ಜನರ ಹಸಿವು ಹಿಂಗಿಸುವ ಇಂತಹ ಕಾರ್ಯಕ್ರಮಕ್ಕೆ ಈ ಪ್ರಮಾಣದ ಸಹಾಯ ಧನ ನೀಡುವುದು ಸಮರ್ಥನೀಯವೂ ಹೌದು. ಪಗರಣಗಳಲ್ಲಿ ಸಾವಿರ ಸಾವಿರ ಕೋಟಿ ರೂಪಾಯಿಗಳು ಮಾಯವಾಗುವುದಕ್ಕೆ ಬಿಡುವ ಸರಕಾರ, ಸಾವಿರ ಸಾವಿರ ಕೋಟಿ ಕಪ್ಪು ಹಣವನ್ನು ಹೊರಗೆಳೆಯದೇ ಬಿಡುವ ಸರಕಾರ, ಶ್ರೀಮಂತರಿಗೆ ಸಾವಿರಾರು ಕೋಟಿ ರೂಪಾಯಿಗಳ ರಿಯಾಯಿತಿ ನೀಡುವ ಸರಕಾರಕ್ಕೆ ದೇಶದ ಜನಸಾಮಾನ್ಯರಿಗಾಗಿ ಈ ಅಲ್ಪ ಮೊತ್ತದ ಖರ್ಚು ಮಾಡುವುದು ಕಷ್ಟದ ಕೆಲಸವೆಂದರೆ ಅದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೇನಿದೆ? ಇನ್ನೂ ನಾಚಿಕೇಗೇಡಿನ ಸಂಗತಿಯೆಂದರೆ ರೇಶನ್ ವ್ಯವಸ್ಥೆಯಲ್ಲಿನ ಆಹಾರ ಧಾನ್ಯಗಳ ಬೆಲೆಯಿಳಿಸಲು ನಿರಾಕರಿಸುವ ಈ ಸರಕಾರ ಗೋಧಿ ಉತ್ಪನ್ನಗಳನ್ನು ರಫ್ತು ಮಾಡುವ ಒಂದು ಉದ್ದಿಮೆ ಮಾಡರ್ನ್ ಫುಡ್ ಇಂಡಸ್ಟ್ರೀಸ್‌ಗೆ ಗೋಧಿಯನ್ನು ರೇಶನ್ ಬೆಲೆಗಿಂತ 100 ರೂ. ಕಮ್ಮಿ ಬೆಲೆಯಲ್ಲಿ ಮಾರಾಟ ಮಾಡಿದೆ.

2 ಗ್ರಾಮೀಣ ಪ್ರದೇಶಗಳಲ್ಲಿ "ಕೆಲಸಕ್ಕೆ ಬದಲಾಗಿ ಆಹಾರ" ಕಾರ್ಯಕ್ರಮಗಳಿಗೆ ಆಹಾರವನ್ನು ಬಿಡುಗಡೆಗೊಳಿಸಬೇಕು

ಸತತ ಏಳು ವರ್ಷಗಳ ಕಾಲ ದೇಶದಲ್ಲಿ ಮಳೆ ಬೆಳೆ ಬಹಳ ಚೆನ್ನಾಗಿ ಆಗಿದೆ. ಹೀಗೆ ಸತತವಾಗಿ ಒಳ್ಳೆ ಬೆಳೆ ಬಂದದ್ದರಿಂದಲೇ ಇಂದು ಸರಕಾರದ ಗೋದಾಮುಗಳಲ್ಲಿ 32 ದಶಲಕ್ಷ ಟನ್ನುಗಳಷ್ಟು ಆಹಾರ ಧಾನ್ಯ ಶೇಖರಿಸಲ್ಪಟ್ಟಿದೆ.

ಅಲ್ಲಿ ಗೋದಾಮುಗಳಲ್ಲಿ ಆಹಾರ ಧಾನ್ಯದ ಅಪಾರ ದಾಸ್ತಾನಿದೆ. ಆದರೆ ದೇಶದ ಜನಸಾಮಾನ್ಯರ ಹೊಟ್ಟೆ ಹಸಿದೇ ಇದೆ. ಯಾಕೆಂದರೆ ಈ ಮೇಲೆ ಹೇಳಿದಂತೆ ಆಹಾರ ಕೊಳ್ಳುವ ಸಾಮರ್ಥ್ಯ ಅವರಿಗಿಲ್ಲ.

ಕಳೆದ ನಾಲ್ಕು ವರ್ಷಗಳ ಉದಾರೀಕರಣ ನಿರುದ್ಯೋಗ, ಬಡತನವೆರಡನ್ನೂ ಹೆಚ್ಚಿಸಿದೆ. ಬೆಲೆಗಳು ವಿಪರೀತ ಹೆಚ್ಚಿವೆ. ಆದರೆ ಆದಾಯ ನಿಜದಲ್ಲಿ ಕಡಿಮೆ ಆಗಿದೆ. ಆಹಾರ ಕೊಳ್ಳುವುದುಹೇಗೆ? ಆದ್ದರಿಂದಲೇ ಜನ ಉಪವಾಸ ಸಾಯುತ್ತಿದ್ದಾರೆ.

ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಜನರ ನಿರುದ್ಯೋಗ ಹೋಗಲಾಡಿಸಬೇಕು. ಈ ಮೂಲಕ ಅವರ ಆದಾಯ ಹೆಚ್ಚಿಸಿ ಅವರ ಕೊಳ್ಳುವ ಸಾಮರ್ಥ್ಯ ಹೆಚ್ಚಿಸಬೇಕು. ಆದರೆ ಇದು ಒಮ್ಮೆಲೆ ಆಗುವಂತಹದ್ದಲ್ಲ.

ಆಹಾರವಿದೆ-ಆಹಾರ ಬೇಕು ಕೆಲಸ ಬೇಕು-ಮತ್ತೇಕೆ ಈ ಔದಾಸೀನ್ಯ

ಸರಕಾರದ ಗೋದಾಮುಗಳಲ್ಲಿ ಅಪಾರ ಆಹಾರ ಧಾನ್ಯವಿದೆ. ದುಡಿವ ಜನ ಕೆಲಸ ಕೇಳುತ್ತಿದ್ದಾರೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಇದೆ. ಹೀಗಿರುವಾಗ "ಕೆಲಸಕ್ಕೆ ಪ್ರತಿಫಲವಾಗಿ ಆಹಾರ ಧಾನ್ಯ" ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ಕಾರ್ಯಕ್ರಮಗಳಿಗಾಗಿ ಆಹಾರ ಧಾನ್ಯವನ್ನು ಬಿಡುಗಡೆ ಮಾಡಬೇಕು. ಪ್ರತಿ ಟನ್ ಆಹಾರ ಧಾನ್ಯವನ್ನು ಗೋದಾಮುಗಳಲ್ಲಿ ಇಟ್ಟುಕೊಳ್ಳಲು ಸರಕಾರ 1400 ರೂ. ಖರ್ಚು ಮಾಡಬೇಕಂತೆ. ಅಂದರೆ 32 ದಶಲಕ್ಷ ಟನ್ ದಾಸ್ತಾನು ಇಟ್ಟುಕೊಳ್ಳಲು 4480 ಕೋಟಿ ರೂ. ಖರ್ಚು ಮಾಡಲು ಸಿದ್ಧವಿರುವ ಸರಕಾರ ಅದೇ ಧಾನ್ಯವನ್ನು ಕೆಲಸ ಮಾಡಿಸಿಕೊಂಡು ಬಡ ಜನರಿಗೆ ನೀಡಲು ಏಕೆ ಯೋಚಿಸಲೊಲ್ಲದು?

3 ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟ ಮುಚ್ಚುವಿಕೆಯನ್ನು ನಿಲ್ಲಿಸಬೇಕು

ಹಣಕಾಸು ಕೊರತೆ ನೀಗಿಸುವ ನೆಪದಲ್ಲಿ ಮತ್ತು ಹಾನಿ ಮಾಡುತ್ತಿರುವ ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟ/ಮುಚ್ಚುವಿಕೆಯನ್ನು ಉದಾರೀಕರಣ ಬಂದಾಗಿನಿಂದ ಸರಕಾರ ನಡೆಸುತ್ತಿದೆ. ಇದು ದೇಶದ ಇಡೀ ಆರ್ಥಿಕದ ತಳಹದಿಯನ್ನೇ ಹಾಳುಗೆಡವುತ್ತಿದೆ. ದೇಶದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಉದ್ಯೋಗ ನೀಡುವ ಈ ಸಾರ್ವಜನಿಕ ವಲಯದ ಘಟಕಗಳು ಇತರ ವಾಣಿಜ್ಯ ಚಟುವಟಿಕೆಗಳಿಗೆ ನೆರವು ನೀಡುತ್ತಿವೆ. ದೇಶದ ಉತ್ಪಾದನೆಯನ್ನು ಭದ್ರ ತಳಹದಿಯ ಮೇಲೆ ನೆಲೆಗೊಳಿಸಿವೆ.

ಇಂತಹ ಸಾರ್ವಜನಿಕ ವಲಯದ ಘಟಕಗಳನ್ನು ಸರಕಾರ ಅವುಗಳ ಶೇರುಗಳನ್ನು ಮಾರುವ ಮೂಲಕ ಖಾಸಗಿಯವರ ಕೈಗೆ ದಾಟಿಸುತ್ತಿದೆ. ಹೀಗೆ ಮಾಡುವಾಗ ಅದು ಇಂತಹ ಸಾರ್ವಜನಿಕ ವಲಯದ ಘಟಕಗಳ ಆಸ್ತಿಗಳ ಪುನರ್ಮೌಲ್ಯೀಕರಣ ಮಾಡುವುದಿಲ್ಲ. ಇದರಿಂದ ಖಾಸಗಿಯವರಿಗೆ ಅಪಾರ ಲಾಭವಾದರೆ ದೇಶದ ಜನತೆಗೆ ಅಪಾರ ಹಾನಿಯಾಗುತ್ತದೆ. ಉದಾಹರಣೆಗೆ ಒಂದು ಸಾರ್ವಜನಿಕ ವಲಯದ ಆಸ್ತಿಗಳ ಮೂಲ ಬೆಲೆ ಹತ್ತು ಲಕ್ಷ ರೂಪಾಯಿಗಳು ಎಂದಿಟ್ಟುಕೊಳ್ಳೋಣ. ಆದರೆ ಹತ್ತೋ ಇಪ್ಪತ್ತು ವರ್ಷಗಳಾದ ನಂತರ ಇಂದು ಅದರ ಮಾರುಕಟ್ಟೆ ಬೆಲೆ ಹತ್ತು ಕೋಟಿ ರೂಪಾಯಿಗಳಾಗಿರುತ್ತದೆ. ಆದರೆ ಸರಕಾರ ಈ ಬೆಲೆ ನಿರ್ಧರಿಸಿ ಶೇರುಗಳ ಮಾರಾಟ ಮಾಡುವುದಿಲ್ಲ. ಬದಲಿಗೆ ಮೂಲ ಬೆಲೆಗೆ ಮಾರುತ್ತದೆ. ಇದರಿಂದ ದೇಶಕ್ಕೆ ಅಪಾರ ಹಾನಿಯಾಗುತ್ತದೆ. ಖಾಸಗಿಯವರು ಇಂತಹ ಘಟಕಗಳನ್ನು ಮನಬಂದಂತೆ ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಕಾರ್ಮಿಕರು ಬೀದಿ ಪಾಲಾಗುತ್ತಾರೆ. ಸಾರ್ವಜನಿಕ ವಲಯದ ಶೇರು ಮಾರಾಟ ಹಗರಣ ಈ ಸರಕಾರದ ಅವಧಿಯಲ್ಲಿ ಬಯಲುಗೊಂಡ ಹಗರಣಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ ಎಂಬುದು ಗಮನಾರ್ಹ. ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಹಾಗೂ ದೇಶದ ಮಹಾಲೆಕ್ಕ ಪರಿಶೋಧಕರಿಂದ ಸರಕಾರ ಈಗಾಗಲೇ ತೀವ್ರ ಟೀಕೆಗೊಳಗಾಗಿದೆ. ಆದರೂ ಸರಕಾರ ಸಾರ್ವಜನಿಕ ವಲಯದ ಮೂರನೇ ಒಂದು ಭಾಗದಷ್ಟು ಅಂದರೆ ಸುಮಾರು 17 ಸಾವಿರ ಕೋಟಿ ರೂಪಾಯಿಗಳಷ್ಟು ಈಗಾಗಲೇ ಮಾರಿತಿಂದಿದೆ.

ಆಹಾರವಿದೆ-ಆಹಾರ ಬೇಕು ಕೆಲಸ ಬೇಕು-ಮತ್ತೇಕೆ ಈ ಔದಾಸೀನ್ಯ

ಘಟಕಗಳನ್ನು ಮುಚ್ಚುವಾಗಲೂ ಇದೇ ನೀತಿ ಸರಕಾರದ್ದು. ಅಲ್ಪಸ್ವಲ್ಪ ಧನ ಸಹಾಯ ಮಾಡಿದರೆ ಸರಕಾರ ಈ ಘಟಕಗಳನ್ನು ಪುನರುಜ್ಜೀವನಗೊಳಿಸುವಂತಿರುತ್ತದೆ. ಆದರೆ ಸರಕಾರ ಆ ಹಣ ಒದಗಿಸುವುದಿಲ್ಲ. ಸಹಜವಾಗಿಯೇ ಈ ಘಟಕಗಳು ಸಾಯುತ್ತವೆ/ನಷ್ಟ ಅನುಭವಿಸುತ್ತವೆ. ಆಗ ಸರಕಾರ ಈ ಘಟಕಗಳನ್ನು ಮುಚ್ಚುತ್ತದೆ. ಈ ಘಟಕಗಳು ಸತ್ತ ಮೇಲೆ ಖಾಸಗಿಯವರು ಹದ್ದಿನಂತೆ ಕುಕ್ಕಿ ಕುಕ್ಕಿ ತಿನ್ನಲು ಹಾರಾಡತೊಡಗುತ್ತಾರೆ.

ಆದ್ದರಿಂದಲೇ ಈ ಅನ್ಯಾಯಕಾರಕವಾದ ಶೇರು ಮಾರಾಟ ಮತ್ತು ಮುಚ್ಚುವಿಕೆ ಎರಡೂ ನಿಲ್ಲಬೇಕು. ಖಾಸಗಿಯವರು ತಮ್ಮ ಬಂಡವಾಳ ತೊಡಗಿಸಲು ಹಿಂಜರಿಯುತ್ತಿರುವಾಗ ಜನರ ಹಣದಿಂದ, ಶ್ರಮದಿಂದ ಬೆಳೆಸಿದ ಸಾರ್ವಜನಿಕ ವಲಯವನ್ನು ಈಗ ಸರಕಾರ ತನ್ನ ತಪ್ಪು ನೀತಿಗಳಿಂದಾಗಿ ವಿಪರೀತ ಸಾಲ ಮಾಡಿ ಅದನ್ನು ತೀರಿಸಲು ಮಾರಾಟ ಮಾಡಲು, ಅದೇ ಖಾಸಗಿಯವರಿಗೆ ಮಾರಲು ಬಿಡಬೇಕೇ?

ಡಿ. 22-ಜ. 21 ರಾಜ್ಯವ್ಯಾಪಿ ಆಂದೋ

ಇದು ದೇಶದ ಜನಸಾಮಾನ್ಯರ ಒತ್ತಾಯ

4 ಭೂಮಿತಿಯನ್ನು ಮೀರಿ ಮಿಗುತೆ ಭೂ ಅದನ್ನು ವಶಪಡಿಸಿಕೊಂಡು ಭೂ ರಹಿ ಕೂಲಿಕಾರರಿಗೆ ಕೇಂದ್ರದಲ್ಲಿ ಕಾಯಿದೆ ತರಬ ಹೆಚ್ಚಿನ ಕೂಲಿಗಾಗಿ ಹೋರಾಟ ಪ್ರಾರಂಭಿಸ

ಭೂ ಸುಧಾರಣೆ ಸ್ವತಂತ್ರ ಭಾರತದಲ್ಲಿ ಪ್ರಾರಂಭವಾಯಿತಷ್ಟೇ. ಪೂರ್ಣಗೊಳ್ಳಲಿಲ್ಲ. ಎಡರಂಗ ಸರಕಾರಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮಾತ್ರ ಪ್ರಾಮಾಣಿಕ ಅನುಷ್ಠಾನ ಕಂಡಿರುವ ಭೂ ಸುಧಾರಣೆಗಳು ಇತರ ಕಡೆಗಳಲ್ಲಿ ಆಳುವ ವರ್ಗಗಳಿಗೆ ಅನುಕೂಲವಾಗುವಂತೆ ಇವೆ. ಇಲ್ಲಿ ಮಧ್ಯವರ್ತಿಗಳನ್ನು ಪೂರ್ಣವಾಗಿ ಕಿತ್ತುಹಾಕಬೇಕು. ಗೇಣಿ ಪದ್ಧತಿಯನ್ನು ಸುಧಾರಿಸಬೇಕು. ಪಾಲು ಬೆಳೆಗಾರರಿಗೂ ರಕ್ಷಣೆ ದೊರೆಯುವಂತಾಗಬೇಕು. ಮಿಗುತೆ ಭೂಮಿ, ಬಂಜರು ಅರಣ್ಯ ಭೂಮಿ, ಭೂ ದಾನದ ಭೂಮಿ, ಖರಾಬು ಭೂಮಿಯನ್ನು ಕೃಷಿ ಕೂಲಿಕಾರರು ಮತ್ತು ಬಡ ರೈತರಿಗೆ ಹಂಚಬೇಕು. ಭೂ ಸುಧಾರಣಾ ಕಾಯಿದೆಯಲ್ಲಿರುವ ನ್ಯೂನತೆಗಳನ್ನು ಕೂಡಲೇ ಸರಿಪಡಿಸಬೇಕು. ಈ ಸುಧಾರಣೆಗಳಿಗೆ ಸಂಬಂಧಪಟ್ಟ ಎಲ್ಲರ ಸಹಕಾರ ಪಡೆಯಬೇಕು. ಕೃಷಿ ಕೂಲಿಕಾರರಿಗೆ ಭೂಮಿ ನೀಡುವುದರ ಮೂಲಕ ಅವರ ಸಮಸ್ಯೆಗಳನ್ನು ಸರಿಪಡಿಸಲು ಕೂಡಲೇ ಅವುಗಳನ್ನು ಕೈಗೊಳ್ಳಬೇಕು. ಪ.ಬಂಗಾಳದಲ್ಲಿ ಇಂತಹ

ಭೂ ಸುಧಾರಣೆಯ ಬಗ್ ಏಕೆ ಈ ಮೌನ?

ಕ್ರಮಗಳಿಂದಾಗಿ ಗ್ರಾಮೀಣ ಬಡವರ ಜೀವನಮಟ್ಟ ಹೆಚ್ಚಿ ಅದು ತನ್ಮೂಲಕ ಕೈಗಾರಿಕಾ ಬೆಳವಣಿಗೆಗೂ ನೆರವಾಗಿದೆ. ಕೃಷಿ ಕೂಲಿಕಾರರಿಗೆ ಬದಲಿ ಉದ್ಯೋಗ ನೀಡುವಂತಹ ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಕೃಷಿ ಅವಲಂಬಿತ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು. ಕೈಗಾರಿಕಾ ಕಾರ್ಮಿಕರಿಗೆ ಇರುವಂತಹ ಸಾಮಾಜಿಕ ಭದ್ರತೆ ಕ್ರಮ ಕೂಲಿಕಾರರಿಗೆ ಇಲ್ಲ.

5 ವಿದ್ಯಾಭ್ಯಾಸದ ಖಾಸಗೀಕರಣ, ವಾಣಿಜ್ಯೀಕರಣವನ್ನು ನಿಲ್ಲಿಸಬೇಕು

ಶಿಕ್ಷಣ ಯಾವುದೇ ದೇಶ ಒಂದು ಬಲಿಷ್ಠ ಶಕ್ತಿಯಾಗಿ ಬೆಳೆಯಬೇಕಾದರೆ ಒಂದು ಮೂಲಾಧಾರ. 1960ರ ದಶಕದಿಂದಲೇ ಸರಕಾರ ಶಿಕ್ಷಣಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ. 6ರಷ್ಟನ್ನು ಖರ್ಚು ಮಾಡುವುದಾಗಿ ಹೇಳಿತ್ತು. ಇದು ವಾರ್ಷಿಕ ಬಜೆಟ್ಟಿನ ಶೇ. 20ರಷ್ಟಾಗುತ್ತದೆ. ಇಷ್ಟನ್ನು ವೆನೆಜುವೆಲಾದಂತಹ ಬಡದೇಶಗಳೂ ಖರ್ಚು ಮಾಡುತ್ತವೆ. ಆದರೆ ನಮ್ಮ ಸರಕಾರ ಖರ್ಚು ಮಾಡಿದ್ದು 1990-91ರಲ್ಲಿ ಶೇ. 4. ನರಸಿಂಹರಾಯರ 'ಸುಧಾರಣೆ'ಗಳ ಎರಡೇ ವರ್ಷಗಳಲ್ಲಿ ಅದು ಶೇ. 3.5 ಕ್ಕಿಳಿಯಿತು. ತನಗೆ ಸಾರ್ವಜನಿಕ ಶಿಕ್ಷಣ ಸರಕಾರದ ಜವಾಬ್ದಾರಿಯಿಲ್ಲವೆಂಬುದು ಈಗ ಸರಕಾರದ ನಿಲುವಾಗಿರುವಂತಿದೆ. ಇದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಇದು ಐಎಂಎಫ್ ವಿಶ್ವಬ್ಯಾಂಕುಗಳ ಸಲಹೆ - "ನಿಮ್ಮ ಆರ್ಥಿಕ ಶಕ್ತಿಯುತವಾಗಬೇಕಾದರೆ ನಿಮ್ಮ ಹಣಕಾಸು ಕೊರತೆ ಕಮ್ಮಿಯಾಗಬೇಕು. ಕೊರತೆ ಕಮ್ಮಿಯಾಗಬೇಕಾದರೆ ಸಾರ್ವಜನಿಕ ಖರ್ಚನ್ನು ಅಂದರೆ ಶಿಕ್ಷಣ, ಆರೋಗ್ಯ, ಆಹಾರ ಇತ್ಯಾದಿಗಳ ಮೇಲಿನ ಖರ್ಚನ್ನು ಕಮ್ಮಿ ಮಾಡಬೇಕು" ಇಂದು ಸಾಲಗಾರ ಸರಕಾರ ಈ 'ಸಲಹೆ'ಯನ್ನು ಶಿರಸಾವಹಿಸಿ ದೇಶದ ಸಂವಿಧಾನ ನಿರ್ದೇಶಿಸಿದ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ರಾಷ್ಟ್ರೀಯ ಸ್ಕಾಲರ್‌ಶಿಪ್‌ಗಳಲ್ಲಿ ಭಾರೀ ಕಡಿತ, ಶುಲ್ಕಗಳಲ್ಲಿ ಮೂರು-ನಾಲ್ಕು ಪಟ್ಟು ಹೆಚ್ಚಳ, ಶಿಕ್ಷಣವನ್ನು ಹೆಚ್ಚೆಚ್ಚು ಖಾಸಗಿಯವರಿಗೆ ವಹಿಸುತ್ತಿರುವುದು, ಶಿಕ್ಷಣವನ್ನು ಒಂದು ಸರಕಾಗಿ ಕಾಣುವ ಮಂದಿಯ 'ಶಿಕ್ಷಣದ ಅಂಗಡಿ'ಗಳು ಇದರಿಂದ ನಾಯಿಕೊಡೆಗಳಂತೆ ಹರಡುತ್ತಿರುವುದು, ಹಣವುಳ್ಳವರು ಲಕ್ಷಾಂತರ ಹಣ 'ವಂತಿಗೆ'ಯಾಗಿ ಸುರಿದು ಡಿಗ್ರಿಗಳನ್ನು ಖರೀದಿಸುವಂತಹ ಶಿಕ್ಷಣದ ವಾಣಿಜ್ಯೀಕರಣ, ಕ್ಯಾಪಿಟೇಶನ್ ಶುಲ್ಕಕ್ಕೆ ಸರಕಾರದ ಅನುಮತಿ ಇವೆಲ್ಲಾ ಮತ್ತೆ ಶಿಕ್ಷಣವನ್ನು ಉಳ್ಳವರ ಸೊತ್ತಾಗಿಸಿ ಬಿಡುತ್ತಿದೆ.

ಈಗಾಗಲೇ ಶಾಲೆಗೆ ಹೋಗುವ ಶೇ. 58ರಷ್ಟು ಮಕ್ಕಳು ಎಂಟನೇ ತರಗತಿಗೆ ಬರುವ ವೇಳೆಗೆ ಶಾಲೆ ಬಿಡುತ್ತಿವೆ. ಪರಿಶಿಷ್ಟ ಜಾತಿಗಳಲ್ಲಿ ಶೇ. 66ಮಕ್ಕಳು ಶಾಲೆ ಬಿಡುತ್ತಿವೆ. ಇದಕ್ಕೆ ಕಾರಣ ಬಡತನ. ಶಿಕ್ಷಣದ ಖಾಸಗೀಕರಣ, ವಾಣಿಜ್ಯೀಕರಣ ಇವನ್ನು ಇನ್ನಷ್ಟು ಉಲ್ಬಣಗೊ

6 ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಬೇಕು.

ಉದಾರೀಕರಣ ಬಂದಾಗಿನಿಂದ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹಣಕಾಸಿನ ಕಡಿತ ಮಾಡಲಾಗುತ್ತಿದೆ. ಇದರಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೂ ಒಂದು. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಎಂದರೆ ಬರೀ ಔಷಧಿಗಳು ಮತ್ತು ವೈದ್ಯಕೀಯ ನೆರವು ಮಾತ್ರವಲ್ಲ. ಸಾರ್ವಜನಿಕ ಶುಚಿತ್ವದ ವ್ಯವಸ್ಥೆ, ಸ್ವಚ್ಛ ಕುಡಿಯುವ ನೀರಿನ ವ್ಯವಸ್ಥೆ, ಮನೆ, ಆಹಾರ ಭದ್ರತೆ ಇವೆಲ್ಲಾ ಅದರಲ್ಲಿ ಒಳಗೊಂಡಿರಬೇಕಾಗುತ್ತದೆ. ಅಂಕಿ-ಅಂಶಗಳ ಪ್ರಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸರಕಾರ 1989-90ರಲ್ಲಿ 10.3 ಕೋಟಿರೂ. ಖರ್ಚು ಮಾಡುತ್ತಿತ್ತು. ಅದು 1992-93ರಲ್ಲಿ 9.4 ಕೋಟಿ ರೂ.ಗಳಿಗಿಳಿಯಿತು. ಅದೇ ರೀತಿ ರೋಗ ಹತೋಟಿಗೆ ನೀಡಿದ ಹಣ 103ರಿಂದ 83ಕ್ಕಿಳಿಯಿತು. ಒಟ್ಟು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲಿನ ಖರ್ಚು 199-91ರಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ. [illegible]ದ್ದು 1994ರಲ್ಲಿ 1.5 ಶೇ.ಕ್ಕಿಳಿಯಿತು.

ಕಳೆದ ವರ್ಷ ಪ್ಲೇಗ್ ಬಂದಾಗ ದೇಶದಲ್ಲಿನ ಆರೋಗ್ಯ ವ್ಯವಸ್ಥೆ ಎಷ್ಟು ಪೊಳ್ಳು ಎಂಬುದು ಗೊತ್ತಾಗಿಬಿಟ್ಟಿತು. ನರಸಿಂಹರಾವ್ 'ಸುಧಾರಣೆ'ಯ ಮೊದಲ ವರ್ಷದಲ್ಲೇ ಕಾಲರಾ ರೋಗ ಇಮ್ಮಡಿಯಾಯಿತು. ಕಾಲರಾದಿಂದ ಸಾವೂ ಕೂಡ ಇಮ್ಮಡಿಯಾಯಿತು. ಮಲೇರಿಯಾ, ಕ್ಷಯ ರೋಗ, ಕುಷ್ಠ ರೋಗ, ಇತ್ಯಾದಿ ರೋಗಗಳೆಲ್ಲ ದೊಡ್ಡ ಪ್ರಮಾಣದಲ್ಲಿ ದೇಶದೊಳಗೆ ಇವೆ. ಈಗ ಏಡ್ಸ್ ಎಂಬ ಭಯಂಕರ ರೋಗವೂ ಕಾಡುತ್ತಿದೆ. ಈಗ ವಿಶ್ವದ ಕಾಲಂಶ ಕ್ಷಯ ರೋಗಿಗಳು ಭಾರತದಲ್ಲೇ ಇದ್ದಾರೆ. ವಿಶ್ವದ ಕುಷ್ಠ ರೋಗಿಗಳಲ್ಲಿ 54 ಶೇ. ನಮ್ಮ ದೇಶದಲ್ಲಿದ್ದಾರೆ. ಕೇವಲ ಶೇ.10 ಜನರಿಗೆ ಸರಿಯಾದ ಶುಚಿತ್ವದ ವ್ಯವಸ್ಥೆಯಿದೆ. ಕೇವಲ ಮೂರನೇ ಒಂದರಷ್ಟು ಮಂದಿಗೆ ಮಾತ್ರ ಸರಿಯಾದ ಕುಡಿಯುವ ನೀರು! ಇವನ್ನೆಲ್ಲಾ ಸರಿಪಡಿಸಲು ಸರಕಾರ ಬಹಳ ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲ ಒದಗಿಸುವ ವ್ಯವಸ್ಥೆ ಮಾಡಬೇಕಾಗುತ್ತದೆ.

ಆದರೆ ಸರಕಾರ ವಿಶ್ವಬ್ಯಾಂಕಿನ ಆಣತಿಯಂತೆ ಹಿಂದೆ ಇದ್ದ ಹಣಕಾಸು ಖರ್ಚಿನ ವ್ಯವಸ್ಥೆಯನ್ನೇ ಬದಲಾಯಿಸಿಬಿಟ್ಟಿದೆ. ವೈದ್ಯಕೀಯ ನೆರವು ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಸರಿಯಾದ ಪ್ರಮಾಣದಲ್ಲಿ ಖರ್ಚು ಮಾಡಬೇಕು. ಆದರೆ ಅದು ಆಗುತ್ತಿಲ್ಲ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಖರ್ಚುಗಳೆಲ್ಲಾ

...ಕ ಬೇಡಿಕೆಗಳು



...ಹೊಂದಿರುವವರಿಂದ ... ನೀಡಬೇಕು. ಕೃಷಿ ... ಕೃಷಿ ಕೂಲಿಕಾರರಿಗೆ ...

...ಹಕ್ಕಿನ ರಜೆ, ಅನಾರೋಗ್ಯಕ್ಕೆ ನೀಡುವ ರಜೆ ...ಇಲ್ಲ. ಇವರು ಯಾವುದೇ ಒಬ್ಬ ಮಾಲೀ... ಕೆಲಸ ಮಾಡುವುದಿಲ್ಲವಾದ್ದರಿಂದ ಸಾಮಾ... ಭದ್ರತೆಯ ಖರ್ಚನ್ನು ಸರಕಾರವೇ ಭರಿಸ... ಕೇಂದ್ರ ಸರಕಾರ ಕೃಷಿ ಕೂಲಿ ಕಾರರಿಗೆ ...ಕೂಲಿ ನೀಡುವ ಮತ್ತು ಸಾಮಾಜಿಕ ಭದ್ರತೆ ...ದ ಕಾಯಿದೆಗಳನ್ನು ಜಾರಿಗೆ ತರಬೇಕು. ...ಹರಾಯರ ಸರಕಾರದ ನೀತಿಗಳು ತಂದ ...ರಿಕೆ ಅತೀ ಹೆಚ್ಚು ತಟ್ಟಿರುವುದು ಈ ಬಡ...ನ್ನು. ಆದರೆ ಅದರಿಂದ ಅತೀ ಕಡಿಮೆ ...ಪಡ ಇವರ ಪಾಲಿಗೆ!

...ಳದಲ್ಲಿ ಎಲ್.ಡಿ.ಎಫ್. ಸರಕಾರ ಇದ್ದಾಗ ...ಕಟ್ಟಿಗೆ ಶಾನ ತಂದದ್ದರಿಂದಾಗಿ ಕೆಲವು ...ಳನ್ನು ಪಡೆಯಲು ಅಲ್ಲಿ ಸಾಧ್ಯವಾಗಿದೆ. ...ಲ್ಲಿ ಇಂತಹ ಒಂದು ಶಾಸನ ಈಗ ಅತ್ಯಗತ್ಯ.

...ವೀಗ ಹಣವಂತರ ...ಸೊತ್ತು!

...ಇಂತಹ ಸನ್ನಿವೇಶದಲ್ಲಿ ಪ್ರಧಾನಮಂತ್ರಿಗಳು ...ಆರಂಭಿಸಿದ ಮಧ್ಯಾಹ್ನದ ಊಟದ ಕಾರ್ಯ...ದು ಚುನಾವಣಾ ಸ್ಟಂಟ್ ಅಲ್ಲದೆ ಬೇರೇನೂ ...ಅಂದರೆ ಕಳೆದ ನಾಲ್ಕು ವರ್ಷಗಳಲ್ಲಿ ಅವರ ...ಮಾಡುತ್ತಿದ್ದುದು ತದ್ವಿರುದ್ಧವಾದುದನ್ನೇ.

...ಕ್ಷ ಶಿಕ್ಷಣ ರಂಗದಲ್ಲೂ ಇದೇ ಸ್ಥಿತಿ. ವಿಶ್ವದ ...ಯಲ್ಲಿ ಭಾರತದ ಪಾಲು 16%. ಆದರೆ ...ಕ್ಷಣ ಪಡೆದ ವಿಶ್ವದ ಜನಸಂಖ್ಯೆಯಲ್ಲಿ ...ಪಾಲು 10%. ಈಗ ವಿಶ್ವವಿದ್ಯಾಲಯಗ...ದಾನ ನೀಡಲು ಸಾಧ್ಯವಿಲ್ಲ, ನಿಮ್ಮ ಹಣ ...ಸಗಿಯವರಿಂದ ಸಂಗ್ರಹಿಸಿ ಎಂದು ಅವಕ್ಕೆ ...ಹೇಳುತ್ತಿರುವುದರಿಂದ ಬಹಳಷ್ಟು ವಿಶ್ವವಿ...ಗಳು ಆರ್ಥಿಕ ದಿವಾಳಿಯತ್ತ ಸಾಗಬೇಕು. ...ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ...ಷ್ಟು ತೀವ್ರ ಇಳಿತವಾಗಲಿದೆ. ಇಂತಹ... ಮುಂದುವರಿಯಲು ಬಿಡಬಾರದು. ...ಖಾಸಗೀಕರಣ, ವಾಣಿಜ್ಯೀಕರಣವನ್ನು ನಿಲ್ಲಿ...ವಾದ ಒತ್ತಾಯ ತರಬೇಕು.

...ಗ್ಯವೂ ಒಂದು ಲಾಭ ...ರೆಗೊಳ್ಳುವ ಸರಕು!

...ವಾಗಿ ಕುಟುಂಬ ಯೋಜನೆಗೇ ಖರ್ಚಾಗಿ ...ನ್ನುಳಿದದ್ದಕ್ಕೆ ಬಹಳ ಅಲ್ಪ ಸಂಪನ್ಮೂಲ...ದೆ.

...ರೆಯಾಗಿ ಈ ಸಾರ್ವಜನಿಕ ಆರೋಗ್ಯ ...ಸಲಾಗಿಟ್ಟಿರುವ ಸಂಪನ್ಮೂಲವೇ ಅತ್ಯಲ್ಪ. ...ಬಹುತೇಕ ಭಾಗ ಕುಟುಂಬ ಯೋಜನಾ...ಗಳಿಗೆ ಹೋದರೆ ಸಾಂಕ್ರಾಮಿಕ ರೋಗ... ಹೋರಾಡಲು, ಶುದ್ಧ ಕುಡಿಯುವ ...ಗಿಸಲು, ಸಾರ್ವಜನಿಕ ಶುಚಿತ್ವ ಕಾಪಾ... ಎಲ್ಲಿಂದ ಬರಬೇಕು?

...ಹರಾಯರ 'ಸುಧಾರಣೆ'ಯಲ್ಲಿ ಆರೋ... ಒಂದು ಸರಕಾಗಿದೆ. ಹಣ ತೆರಬಲ್ಲ...ವೈದ್ಯಕೀಯ ಸೌಲಭ್ಯಗಳು. ಹಣವಿಲ್ಲದವ...ರೋಗ್ಯ ಭಾಗ್ಯ ಬೇಕಿಲ್ಲ ಎಂಬ ನಿಲುವು. ...ವರಿಗೆ ಜನಗಳ ಆರೋಗ್ಯವನ್ನು ಸರಾ...ಸೂರೆಗೊಳ್ಳಲು ಪ್ರೋತ್ಸಾಹ.

...ದಲೇ ಸಾರ್ವಜನಿಕ ಆರೋಗ್ಯ ವ್ಯವ... ಸಂಪನ್ಮೂಲಗಳನ್ನು ಒದಗಿಸಬೇಕಾದ ...ದೆ.

7 ಮಹಿಳೆಯರಿಗೆ ಸಮಾನ ಕೂಲಿ-ಮನೆ-ಆಧಾರಿತ ಕೆಲಸ ಮಾಡುವ ಮಹಿಳೆಯರಿಗೆ ಭದ್ರತೆ

ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಮತ್ತು ಅವರಿಗೆ ಉದ್ಯೋಗದ ಗ್ಯಾರಂಟಿ ಸಮಾನತೆಯ ಅತೀ ಅಗತ್ಯ ಅಂಶ ಎಂದೀಗ ಎಲ್ಲರೂ ಒಪ್ಪುತ್ತಾರೆ. ಬಹುಪಾಲು ಭಾರತೀಯ ಮಹಿಳೆಯರು ಸಾಮಾಜಿಕ ಮತ್ತು ಆರ್ಥಿಕ ಪಿರಮಿಡ್ಡಿನ ತಳದಲ್ಲೇ ಇದ್ದಾರೆ ಎಂದು ಎಲ್ಲರೂ ಒಪ್ಪುತ್ತಾರೆ. ನರಸಿಂಹರಾಯರ ನೀತಿಗಳು ಈ ಪರಿಸ್ಥಿತಿಯನ್ನು ಸುಧಾರಿಸುವ ಬದಲು ಮತ್ತಷ್ಟು ಉಲ್ಬಣಗೊಳಿಸಿವೆ. ಮಹಿಳೆಯರಲ್ಲಿ ಬಹುಪಾಲು, ಸುಮಾರು 90% ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಾರೆ, 76% ಕೃಷಿ ವಲಯದಲ್ಲಿ ಇದ್ದಾರೆ. 1991ರ ಜನಗಣತಿ ಪ್ರಕಾರ 2.83 ಕೋಟಿ ಮಹಿಳೆಯರು ಕೃಷಿ ಕೂಲಿಕಾರರಾಗಿ ಅತೀ ಕಮ್ಮಿ ಕೂಲಿಗೆ ಕೆಲಸ ಮಾಡುತ್ತಾರೆ. ಈ ಕೂಲಿಗೂ ಅವರಿಗೆ ವರ್ಷಕ್ಕೆ 100 ದಿನ ಮಾತ್ರ ಕೆಲಸ ದೊರೆಯುತ್ತದೆ. ಬಡ ಕುಟುಂಬಗಳಲ್ಲಿ 30-35 ಶೇ. ಕುಟುಂಬಗಳಲ್ಲಿ ಮಹಿಳೆಯರೇ ಮುಖ್ಯ ಆಧಾರ. ಅವು ಮಹಿಳೆಯರ ಅಲ್ಪ ಕೂಲಿಯ ಮೇಲೆಯೇ ಬದುಕಬೇಕು. 2.15 ಕೋಟಿ ಮಹಿಳೆಯರು 'ಕುಟುಂಬದ ಗದ್ದೆ'ಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಜನಗಣತಿ ಸಮರ್ಥಿಸುತ್ತದೆ - ಅಂದರೆ ತಮ್ಮ ಗಂಡಂದಿರ, ತಂದೆ ಅಥವಾ ಬಂಧು ಬಳಗದವರ ಗದ್ದೆಗಳಲ್ಲಿ ದುಡಿಯುವುದು. ಇದಕ್ಕೆ ಅವರಿಗೆ ಕೂಲಿ ದೊರೆಯುವುದಿಲ್ಲ.

ಹೊಸ ಆರ್ಥಿಕ ನೀತಿಗಳ ಮುಖ್ಯ ಪರಿಣಾಮವೆಂದರೆ ಮಹಿಳೆಯರಿಗೆ ಸಮಾನ ಕೂಲಿ/ಸಂಬಳ ಸಿಗುವ ಬದಲು, ಸ್ವಲ್ಪವಾದರೂ ಸಮಾನತೆ, ಕಾನೂನಿನ ರಕ್ಷಣೆ ಇರುವ ಸಂಘಟಿತ ವಲಯದಿಂದ ಅವರು ಹೆಚ್ಚೆಚ್ಚಾಗಿ ಅಸಂಘಟಿತ ವಲಯಕ್ಕೆ ತಳ್ಳಲ್ಪಡುತ್ತಿದ್ದಾರೆ.

ನಗರಗಳಲ್ಲಿ ಈಗ ಹೆಚ್ಚೆಚ್ಚು ಮಹಿಳೆಯರು, ಮಕ್ಕಳು, 'ಮನೆ ಕೆಲಸ' ಮಾಡುವುದು ಕಂಡುಬಂದಿದೆ. ಅಂದರೆ ಮನೆಯಲ್ಲೇ ಕುಳಿತು ಬೇರೆಯವರ ನೌಕರಿ ಮಾಡುವುದು. ಈಗ ಉದ್ದಿಮೆಗಳು ಕೆಲಸವನ್ನು 'ಹೊರಗೆ ನೀಡು'ತ್ತವೆ. ಅಂದರೆ ಮಹಿಳೆಯರು ತಮ್ಮ ಮನೆಯಲ್ಲೇ ಕೂತು ಪೀಸ್ ರೇಟ್ ಆಧಾರದಲ್ಲಿ ಈ ಉದ್ದಿಮೆಗಳು ಕೊಟ್ಟ ಕೆಲಸವನ್ನು ಪೂರೈಸಿಕೊಡಬೇಕು. ಕಾರ್ಮಿಕ ಶಾನಗಳಿಂದ ತಪ್ಪಿಸಿಕೊಳ್ಳಲು, ಆ ಮೂಲಕ ಕಮ್ಮಿ ಖರ್ಚಿನಲ್ಲಿ ತಮ್ಮ ಸರಕುಗಳನ್ನು ಉತ್ಪಾದಿಸಿ ಲಾಭದ ಪ್ರಮಾಣ ಹೆಚ್ಚಿಸಿಕೊಳ್ಳಲು ಈ ಉದ್ದಿಮೆಗಳಿಗೆ ಇದರಿಂದ ಅವಕಾಶವಾಗುತ್ತದೆ. ಗಾರ್ಮೆಂಟ್ ಉದ್ದಿಮೆ, ಚರ್ಮ, ಪಾದರಕ್ಷೆ ತಯಾರಿಕೆ ಉದ್ದಿಮೆ, ಈಗ ಇಲೆಕ್ಟ್ರಾನಿಕ್ ಉದ್ದಿಮೆಯಲ್ಲೂ ಈ ಮನೆಯಾಧಾರಿತ ಕೆಲಸದ ಪ್ರವೃತ್ತಿ ಹೆಚ್ಚುತ್ತಿದೆ. ಉದಾಹರಣೆಗೆ ಮುಂಬೈಯಲ್ಲಿ ಒಂದು ದೊಡ್ಡ ಉದ್ದಿಮೆ ಶರ್ಟುಗಳಿಗೆ ಬಟನ್ ಹಾಕಲು ಪ್ರತಿ ಬಟನ್‌ಗೆ ಒಂದರಿಂದ ಐದು ಪೈಸೆ ನೀಡುದೆ. ಅಂದರೆ 8-10 ಗಂಟೆಗಳಲ್ಲಿ ಒಬ್ಬ ಮಹಿಳೆ ಸುಮಾರು 12.50 ರೂ.ಗಳಿಸಬಹುದು. ಆದರೆ ಉದ್ದಿಮೆಯಲ್ಲಿನ ಕನಿಷ್ಟ ಕೂಲಿ 30 ರೂ. ಅಂದರೆ ಈ ರೀತಿ ಮನೆ-ಆಧಾರಿತ ಕೆಲಸಗಳಲ್ಲಿನ ಶೋಷಣೆಯ ಪ್ರಮಾಣ ಎಷ್ಟೆಂದು ತಿಳಿಯುತ್ತದೆ. ಬೇರೆ ಯಾವುದೇ ಸೌಲಭ್ಯಗಳನ್ನು ಮಾಲಕರು ಇಂತಹ ಕೆಲಸಗಾರರಿಗೆ ಕೊಡಬೇಕಾಗಿಲ್ಲ. ಏಕೆಂದರೆ ಇವರು ಅವರ 'ಕೆಲಸಗಾರ'ರಲ್ಲ. ಇಂತಹ ಕೆಲಸಗಳ ಬಗ್ಗೆ ಸೂಕ್ತವಾದ ಕಾನೂನುಗಳಿಲ್ಲವಾದ್ದರಿಂದ ಮಾಲಕರು ಸುಲಭವಾಗಿ ಎಲ್ಲಾ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಬಹುದು. ತಮಾಷೆಯೆಂದರೆ ಸರಕಾರವೇ ಸ್ವತಃ ಇಂತಹ ದುಡಿಮೆಯನ್ನು ಮಹಿಳೆಯರಿಗೊಂದು ಪರ್ಯಾಯ ಅವಕಾಶ ಎಂದು ಹೇಳುತ್ತಿದೆ. ಇಂತಹ ಮಹಿಳೆಯರಿಗೆ ಸಮಾನ ಕೂಲಿಯೊಂದಿಗೆ ಒಂದು ರಕ್ಷಣಾ ಕಾನೂನಿನ ಅಗತ್ಯದ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

8 ನೆರೆಬಾಧಿತ ರಾಜ್ಯಗಳಿಗೆ ಪೂರ್ಣ ಪರಿಹಾರ ಮತ್ತು ನೆರೆ ಸಂತ್ರಸ್ತರಿಗೆ ಪುನರ್ವಸತಿ

ಈ ಬಾರಿಯೂ ಮಳೆಗಾಲದಲ್ಲಿ ದೇಶದ ಹಲವೆಡೆ ನೆರೆಯಿಂದ ತೀವ್ರ ಹಾವಳಿಯುಂಟಾಗಿದೆ. ಇದು ಹಲವು ರಾಜ್ಯಗಳಲ್ಲಿ ಗಂಭೀರ ಪರಿಸ್ಥಿತಿ ಉಂಟು ಮಾಡಿದೆ. ಹರಿಯಾಣ, ಪಂಜಾಬ್, ರಾಜಸ್ತಾನ, ಹಿಮಾಚಲ ಪ್ರದೇಶ, ಅಸ್ಸಾಂ, ಪಶ್ಚಿಮ ಬಂಗಾಳಗಳಲ್ಲಿ ನೆರೆ ಬಹಳಷ್ಟು ಜನಗಳ ಜೀವಗಳಿಗೆ, ಕೋಟ್ಯಾಂತರ ರೂಪಾಯಿ ಬೆಳೆಗಳಿಗೆ, ಆಸ್ತಿ-ಪಾಸ್ತಿಗಳಿಗೆ ಹಾನಿಯುಂಟು ಮಾಡಿದೆ. ಸಾರಿಗೆ-ಸಂಪರ್ಕಕ್ಕೂ ತೀವ್ರ ವ್ಯತ್ಯಯ ಮಾಡಿದೆ.

ಮತ್ತೆ-ಮತ್ತೆ ಸಂಭವಿಸುವ ಈ ನೆರೆ ಹಾವಳಿಗೆ ಕಾರಣ ಸರಕಾರ ನೆರೆ-ಹತೋಟಿಯ ಕ್ರಮಗಳನ್ನು ಗಂಭೀರವಾಗಿ ಕೈಗೆತ್ತಿಕೊಳ್ಳದಿರುವುದು ಹಾಗೂ ನೀರಿನ ಸಂಪನ್ಮೂಲನದ ಯೋಜಿತ ನಿರ್ವಹಣೆ ನಡೆಸದಿರುವುದು.

ನೆರೆ ಹಾವಳಿಯ ನಂತರ ಬೃಹತ್ ಪ್ರಮಾಣದ ಮರು ವಸತಿ ಕೆಲಸ-ಕಾರ್ಯಗಳು ನಡೆಯಬೇಕಾಗುತ್ತದೆ. ಇಲ್ಲಿಯೂ ಕೇಂದ್ರ ಸರಕಾರದ ಜಡ ವರ್ತನೆ ಕಂಡು ಬರುತ್ತಿದೆ. ರಾಜ್ಯಗಳು ಕೇಳಿದಷ್ಟು ಹಣವನ್ನು ಮಂಜೂರು ಮಾಡುವುದಿಲ್ಲ. ಮಂಜೂರು ಮಾಡುವ ಹಣ ಎಳ್ಳಷ್ಟು ಸಾಲುವುದಿಲ್ಲ. ಸಂಬಂಧಪಟ್ಟ ರಾಜ್ಯಗಳ ಜನತೆ ಅದಕ್ಕೂ ಹೋರಾಟದ ದಾರಿ ಹಿಡಿಯಬೇಕಾಗುತ್ತದೆ.

9 ಚಂದ್ರಸ್ವಾಮಿಯನ್ನು ಬಂಧಿಸಬೇಕು, ಹವಾಲಾ ಹಗರಣದಲ್ಲಿ ಎಲ್ಲಾ ತಪ್ಪಿತಸ್ಥರನ್ನು ಶಿಕ್ಷಿಸಬೇಕು

ಕ್ರಿಮಿನಲ್ ಆರೋಪಿ ಓಂ ಪ್ರಕಾಶ್ ಶ್ರೀವಾಸ್ತವ ಎಂಬಾತ ಮುಂಬೈ ಸ್ಫೋಟದ ಮೊಕದ್ದಮೆಯಲ್ಲಿ ಪ್ರಧಾನ ವ್ಯಕ್ತಿಯೆಂದು ಶಂಕಿಸಲ್ಪಟ್ಟಿರುವ ದಾವೂದ್ ಇಬ್ರಾಹಿಂ ಮತ್ತು 'ದೇವಪುರುಷ' ಚಂದ್ರಾಸ್ವಾಮಿ ನಡುವೆ ನಿಕಟ ನಂಟು ಇದೆ ಎಂದು ಹೇಳಿದ ಮೇಲೂ ಚಂದ್ರಸ್ವಾಮಿಯನ್ನು ಬಂಧಿಸಲು ಕೇಂದ್ರ ಸರಕಾರ ಮುತುವರ್ಜಿ ತೋರಲಿಲ್ಲ. ಆ ಬಗ್ಗೆ ಮುತುವರ್ಜಿ ತೋರಿದ ಗೃಹ ಖಾತೆ ರಾಜ್ಯ ಮಂತ್ರಿ ರಾಜೇಶ್ ಪೈಲಟ್‌ರನ್ನೇ ಬೇರೆ ಖಾತೆಗೆ ಸಾಗಹಾಕಲಾಯಿತು. ಆಗ ರಾಜಕೀಯದ ಅಪರಾಧೀಕರಣದ ಬಗ್ಗೆ ಆಳುವ ಪಕ್ಷ ವ್ಯಕ್ತಪಡಿಸಿದ ಆತಂಕ ಮೊಸಳೆ ಕಣ್ಣೀರು ಎಂಬುದು ಸ್ಪಷ್ಟವಾಯಿತು.

ಹವಾಲಾ ಹಗರಣ ಕುರಿತಂತೆ ಚಂದ್ರಸ್ವಾಮಿ, ಆರಿಫ್ ಮೊಹಮ್ಮದ್ ಖಾನ್ ಹಾಗೂ ಬಬ್ಲೂ ಶ್ರೀವಾಸ್ತವರ ಬಾಯಿಂದ ಹೊರಬಂದಿರುವ ಮಾತುಗಳಿಂದ ಸ್ಪಷ್ಟವಾಗುವ ಒಂದು ಸಂಗತಿಯೆಂದರೆ ಎಲ್ಲಾ ಹಂತಗಳಲ್ಲೂ ಕಾಂಗ್ರೆಸ್ ಮುಖಂಡರಿಗೂ ಕ್ರಿಮಿನಲ್‌ಗಳಿಗೂ ಇರುವ ನಂಟು.

ಹವಾಲಾ ಅಂದರೆ ವಿದೇಶೀ ವಿನಿಮಯದ ಕಾನೂನು ಬಾಹಿರ ವ್ಯವಹಾರದಲ್ಲಿ ತೊಡಗಿದ್ದ ಜೈನ್ ಸೋದರರ ಡೈರಿಯಿಂದ ಅವರು ಹಲವು ಬಹುರಾಷ್ಟ್ರೀಯ ಕಂಪೆನಿಗಳ ಏಜೆಂಟಾಗಿಯೂ ಕೆಲಸ ಮಾಡುತ್ತಿದ್ದ ಈ ಕಂಪನಿಗಳು ನಮ್ಮ ದೇಶದಲ್ಲಿ ಕೆಲವು ಪ್ರಾಜೆಕ್ಟ್‌ಗಳನ್ನು ಪಡೆಯಲು ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ತಂತ್ರಜ್ಞರಿಗೆ 'ಕಮಿಶನ್' ನೀಡಿದ ಸುಳಿವು ದೊರೆಯಿತು. ಈ ಪಟ್ಟಿಯಲ್ಲಿ ರಾಜೀವ್ ಗಾಂಧಿ, ನರಸಿಂಹರಾಯರಂತಹ ಆಳುವ ಪಕ್ಷಗಳ ಘಟಾನುಘಟಿಗಳ ಹೆಸರುಗಳಿವೆ. ಅಷ್ಟೇ ಅಲ್ಲ ತಾನೇ ನೈತಿಕತೆಯ ಮೂರ್ತರೂಪ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಬಿಜೆಪಿಯ ಅಡ್ವಾಣಿ, ವಾಜಪೇಯಿಯವರ ಹೆಸರುಗಳೂ ಇವೆ. ಜನತಾದಳದ ಮುಖಂಡರ ಹೆಸರುಗಳು ಇವೆ. ಈ [illegible]ಲ್ಲಿ ಇಲ್ಲದಿರುವುದು ಎಡಪಕ್ಷಗಳ ಮುಖಂಡರ ಹೆಸರುಗಳು ಮಾತ್ರ ಎಂಬುದನ್ನು ಹಲವು ಪತ್ರಿಕೆಗಳು ವಿಶೇಷವಾಗಿ ಗಮನಿಸಿವೆ.

ಸಿಬಿಐ ತನಿಖೆಯಲ್ಲಿ ಆಳುವ ವರ್ಗ ರಾಜಕೀಯದ ಪ್ರಭಾವ ಹೇಗೆ ಕೆಲಸ ಮಾಡುತ್ತಿದೆ ಎಂದೂ ಈ ಪ್ರಕರಣದಲ್ಲಿ ಮತ್ತೊಮ್ಮೆ ಗಮನಕ್ಕೆ ಬಂತು. 1991ರಲ್ಲಿ ಈ ಹಗರಣ ಬೆಳಕಿಗೆ ಬಂದರೂ 1993ರ ನಂತರವೇ, ಪತ್ರಕರ್ತರು ಸುಪ್ರೀಂಕೋರ್ಟಿಗೆ ಮನವಿ ಸಲ್ಲಿಸಿದ ಮೇಲೆಯೇ ಹಗರಣದ ತನಿಖೆ ಆರಂಭಗೊಂಡದ್ದು. ಈ ನಡುವೆ ಇದರಲ್ಲಿ ಸಿಬಿಐನ ಒಬ್ಬ ಹಿರಿಯ ಅಧಿಕಾರಿ ಲಂಚ ಪಡೆಯುವಾಗ ಸಿಕ್ಕಿಬಿದ್ದ.


ಹವಾಲಾ ಪಟ್ಟಿಯಂತೆ ಚಂದ್ರಸ್ವಾಮಿಯ 'ಶಿಷ್ಯ'ರ ಪಟ್ಟಿಯೂ ಕುತೂಹಲಕಾರಿ. ನರಸಿಂಹರಾಯರು, ಎಸ್.ಬಿ.ಚವ್ಹಾಣರಲ್ಲದೆ ಬಿಜೆಪಿಯ ವಿಜಯರಾಜೇ ಸಿಂಧ್ಯಾ ಮತ್ತಿತರ ಮುಖಂಡರ ಹೆಸರುಗಳೂ ಈ ಪಟ್ಟಿಯಲ್ಲಿದೆ. ತಾನು ಸಕಲ ಸದ್ಗುಣ ಸಂಪನ್ನ ಎಂದು ಎಲ್ಲರಿಗೂ, ಎಲ್ಲಾ ವಿಷಯದಲ್ಲೂ ಉಪದೇಶ ನೀಡುತ್ತಾ ತಿರುಗಿದ ಟಿ.ಎನ್. ಶೇಷನ್ ಹೆಸರೂ ಇದೆ. ಚಂದ್ರಾಸ್ವಾಮಿಯ ಇಂತಹ ಸಂಪರ್ಕಗಳಿಂದಾಗಿಯೇ ಆತನ ಅವ್ಯವಹಾರಗಳ ಬಗ್ಗೆ ಹಲವು ವರ್ಷಗಳ ಹಿಂದೆಯೇ ತಿಳಿದಿದ್ದರೂ ಇದುವರೆಗೂ ಕಾನೂನಿನ ಅಳವಿಗೆ ಆತ ಬಂದಿರಲಿಲ್ಲ. ಈಗಲೂ ಅದೇ ಪ್ರಯತ್ನ ನಡೆಯುತ್ತಿದೆ.

ಸಮಾಜದಲ್ಲಿ ಅಪರಾಧೀಕರಣ ಹೆಚ್ಚುತ್ತಿರುವುದು ಕೇವಲ ರಾಜಕಾರಣಿಗಳು ಮತ್ತು ಕ್ರಿಮಿನಲ್‌ಗಳ ನಂಟಿನಿಂದ ಎಂದು ನಂಬಿಸಲು ಹಾಗೂ ಅದರಿಂದಾಗಿ ಎಲ್ಲಾ ರಾಜಕೀಯ ಪಕ್ಷಗಳೂ ಇದಕ್ಕೆ ಹೊಣೆ ಎಂದು ಬಿಂಬಿಸುವ ಪ್ರಯತ್ನ ಎಂತಹ ವಂಚನೆಯೆಂಬುದು ಈ ಎರಡು ಪ್ರಕರಣಗಳಿಂದ ಸ್ಪಷ್ಟವಾಗುತ್ತದೆ. ಭ್ರಷ್ಟ ರಾಜಕಾರಣಿಗಳ, ಸಿವಿಲ್ ಅಧಿಕಾರಿಗಳ, ಪೋಲೀಸ್ ಅಧಿಕಾರಿಗಳ, ಕಂಟ್ರಾಕ್ಟರುಗಳ ಕೂಟ ರಚಿಸುವವರು ಆಳುವ ವರ್ಗಗಳ ಮಂದಿ. ಅಪರಾಧೀಕರಣದ ಮೂಲ ಇದೇ.

ಚಂದ್ರಸ್ವಾಮಿ ವ್ಯವಹಾರ, ಹವಾಲಾ ಹಗರಣ ಅಪರಾಧೀಕರಣ ಮತ್ತು ಭ್ರಷ್ಟಾಚಾರದ ಪ್ರಕರಣಗಳು, ಆಳುವ ವರ್ಗಗಳ ರಾಜಕೀಯಗಳು ಹಾಗೂ ಕ್ರಿಮಿನಲ್‌ಗಳು ನಂಟಿನ ಪ್ರತೀಕಗಳು ಇವನ್ನು ಮುಚ್ಚಿ ಹಾಕಲು ಬಿಡಬಾರದು.

ಗ್ರಾಮೀಣ ಜನರು ಕೃಷಿಯಿಂದ ಬೀದಿಗೆ! 5

ಗ್ರಾಮೀಣ ಪ್ರದೇಶ ಮತ್ತು ನಗರಗಳ ನಡುವೆ ಸಮಾನತೆ ಬೇಕು ಎನ್ನುವವರಂತೆ ನಮ್ಮ ಕೇಂದ್ರ ಹಣಕಾಸು ಮಂತ್ರಿ ಡಾ.ಮನಮೋಹನ ಸಿಂಗರು! ಕೃಷಿ ಮತ್ತು ಕೈಗಾರಿಕೆಗಳ ನಡುವೆ ಕೃಷಿ ಉತ್ಪನ್ನಗಳ ಸಂಸ್ಕರಣದ ಕೊಂಡಿಯನ್ನು ಬಲವಾಗಿಸಿ ಇದನ್ನು ಸಾಧಿಸಬೇಕು ಎಂದು ಅವರು ಹೇಳುತ್ತಾರೆ. ಭೂಮಿ ಕಡಿಮೆ ಪ್ರಮಾಣದಲ್ಲಿರುವುದರಿಂದ ಅದರ ಮೇಲ ಒತ್ತಡ ಹೆಚ್ಚಾಗಿದೆ. ಈ ಒತ್ತಡವನ್ನು ಕಡಿಮೆ ಮಾಡಲು ಜನ ಕೃಷಿಯಿಂದ ಹೊರಬರುವಂತೆ ಮಾಡಬೇಕು ಎಂದಿದ್ದಾರೆ.



ನರಸಿಂಹರಾವ್ ಸರಕಾರದ 54ನೇ ತಿಂಗಳಲ್ಲಿ

ಕಳೆದ ನಾಲ್ಕೂವರೆ ವರ್ಷಗಳಲ್ಲಿ ಉದಾರೀಕರಣದ ಮೂಲಕ ಇದನ್ನು ಮಾಡಿಯೂ ತೋರಿಸಿದ್ದಾರೆ ಅವರು. ಆದರೆ ಕೃಷಿಯಿಂದ ಹೊರಬಂಧ ಜನ ಏನಾಗಿದ್ದಾರೆ? ಬೀದಿಪಾಲಾಗಿದ್ದಾರೆ. ಅದೇ ಮನಮೋಹನರ ಸಾಧನೆ.

ರೈತರು ಅವರಲ್ಲೂ ಶ್ರೀಮಂತ ರೈತರು ಮತ್ತು ಜಮೀನುದಾರರು ಜನರಿಗೆ ದಿನನಿತ್ಯದ ಅವಶ್ಯಕತೆಯಾದ ಅನ್ನ ಬೆಳೆವ ಬದಲು ಹಣದ ಕೊಪ್ಪರಿಗೆ ತಂದುಕೊಡಬಲ್ಲ ವಾಣಿಜ್ಯ, ರಫ್ತು ಬೆಳೆಗಳನ್ನೇ ಬೆಳೆಯುತ್ತಿದ್ದಾರೆ.

ಇದರಿಂದ ಒಟ್ಟಾರೆ ಕೃಷಿ ಉತ್ಪಾದನ ರೀತಿಯಲ್ಲೇ ಏರುಪೇರಾಗುವ ಪರಿಸ್ಥಿತಿ ಈಗ ಉಂಟಾಗಿದೆ. ಕಳೆದ ಆರೇಳು ವರ್ಷಗಳಲ್ಲಿ ಸತತವಾಗಿ ಚೆನ್ನಾಗಿ ಬಂದ ಮಳೆಯಿಂದಾಗಿ ಆಹಾರಧಾನ್ಯದ ಪ್ರಮಾಣ ಉತ್ಪಾದನಾ ಪ್ರಮಾಣ ಅಂತಹ ಸಮಸ್ಯೆಯೇನನ್ನೂ ತಂದಿಲ್ಲ ಎಂದಿಟ್ಟುಕೊಳ್ಳೋಣ. ಆದರೆ ಜನ ಅದರಲ್ಲೂ ಕೆಳಸ್ತರದ ಜನ ಹೊಟ್ಟೆ ತುಂಬಾ ಉಣ್ಣುವುದನ್ನೂ ಬಿಟ್ಟು ಬಿಟ್ಟಿದ್ದಾರೆ. ಆದ್ದರಿಂದಲೇ ಸರ್ಕಾರೀ ಗೋದಾಮುಗಳಲ್ಲಿ ಆಹಾ ಧಾನ್ಯದ ದಾಸ್ತಾನು ಹೆಚ್ಚುತ್ತಲೇ ಇದೆ.

ಇನ್ನು ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಗಳ ಸಮಾನತೆ ಸಾಧಿಸುವ ಬಗ್ಗೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಈ ಸಮಾನತೆ ತೀವ್ರವಾಗಿ ಕದಡಿ ಹೋಗಿದೆ ಎಂಬುದನ್ನು ಸರ್ಕಾರದ ಯೋಜನಾ ಆಯೋಗ ಮತ್ತಿತರ ಸಮೀಕ್ಷಾ ಸಂಸ್ಥೆಗಳು ಅಂಕಿ ಸಂಖ್ಯೆಗಳ ಮೂಲಕ ವಿವರಿಸಿವೆ. ಕೃಷಿ ಹೆಚ್ಚೆಚ್ಚು ಲಾಭದಾಯಕವಾಗುವ ಬದಲು ಹಿಡುವಳಿಗಳ ಬೆಲೆ ಏರಿಕೆ, ಅದಕ್ಕೆ ತಕ್ಕನಾಗಿ ಉತ್ಪನ್ನಗಳ ಬೆಲೆ ಏರದೇ ಇರುವುದು, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಸಮರ್ಥತೆ, ಆರೋಗ್ಯ ವ್ಯವಸ್ಥೆಗೆ ಹಣಕಾಸಿನ ಕೊರತೆ ಇತ್ಯಾದಿ ಹಲವಾರು ಸಮಸ್ಯೆಗಳಿಂದಾಗಿ ಗ್ರಾಮೀಣ ಜನಜೀವನಕ್ಕೆ ನಗರ ಜನಜೀವನಕ್ಕಿಂತ ಹೆಚ್ಚಿನ ಹೊಡೆತ ಬಿದ್ದಿದೆ. ವಾಸ್ತವ ಪರಿಸ್ಥಿತಿ ಹೀಗಿರುವಾಗ ಕೇಂದ್ರ ಅರ್ಥಮಂತ್ರಿಗಳು ಜನರಿಗೆ ಒಳ್ಳೆಯದನ್ನೇ ಮಾಡುವ ಪ್ರಯತ್ನ ನಮ್ಮದು ಎಂದು ಹೇಳಿದರೆ ನಂಬುವಿರಾ?

ಧಣಿಗಳ ಮುನಿಸು

ಐ.ಎಂ.ಎಫ್ ಧಣಿ ಬೇರೆ ಬೇರೆ ದೇಶಗಳ ಸಂಸ್ಥೆಗಳನ್ನು ಹೋಲಿಸಿ ನೋಡುತ್ತಲೇ ಇರುತ್ತದೆ. ಸಾಲ ನೀಡಿದರೆ ಯಾವ ದೇಶದ ಸಂಸ್ಥೆಗಳು ತನಗೆ ಹೆಚ್ಚು ಅನುಕೂಲಕರವಾಗಿರುತ್ತವೆ ಎಂಬುದನ್ನು ನೋಡುವುದೇ ಅದರ ಉದ್ದೇಶ. ಆಗ ಸಾಲ ನೀಡುವಾಗ ಷರತ್ತುಗಳನ್ನು ಅದು ಹೇರಬಹುದಲ್ಲ.

ಈಗ ಒಂದು ಸಮೀಕ್ಷೆಯಲ್ಲಿ ಅದು ಹಲವು ದೇಶಗಳ ಕೇಂದ್ರಿಯ ಬ್ಯಾಂಕುಗಳ ಕಾನೂನು ಸ್ವಾಯತ್ತತೆಯನ್ನು ಹೋಲಿಸಿ ಭಾರತದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಎಪ್ಪತ್ತು ದೇಶಗಳ ಕೇಂದ್ರೀಯ ಬ್ಯಾಂಕ್‌ಗಳಿಗಿಂತ ನಂತರ ಬರುತ್ತದೆ ಈ ವಿಷಯದಲ್ಲಿ ಎಂದಿದೆ. ಅಂದರೆ ಅಷ್ಟರ ಮಟ್ಟಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಸಾಕಷ್ಟು ಸ್ವಾಯತ್ತವಾಗಿಲ್ಲ. ಇದೂ ಹೆಚ್ಚಿನ ಸ್ವಾಯತ್ತತೆ ನೀಡಬೇಕಾದ ಅವಶ್ಯಕತೆ ಇದೆ ಎಂದು ನರಸಿಂಹರಾಯರ ಸರ್ಕಾರದ ಧಣಿಗಳ ಭಾವನೆ ಇರಬಹುದು

ಇಲ್ಲಿ ಭಾರತ ಸರ್ಕಾರವೂ ಸಾಲಗಳಿಗಾಗಿ ಭಾರತೀಯ ರಿಸರ್ವ ಬ್ಯಾಂಕಿನ ಮೇಲೆ ಅವಲಂಬಿಸುತ್ತಿರುವುದು ಬೇರೆ ಕಡೆಯಿಂದ ಕಡಿಮೆ ಬಡ್ಡಿ ದರದಲ್ಲಿ ಸರ್ಕಾರ ಸಾಲ ಪಡೆಯಲು ವಿಫಲವಾಗಿರುವುದು ಸರ್ಕಾರೀ ಖರ್ಚುಗಳಿಗಾಗಿ ಹಣಕಾಸಿನ ಅವಶ್ಯಕತೆ ಕೇಂದ್ರ ಸರ್ಕಾರಕ್ಕೆ ತೀವ್ರವಾಗಿರುವುದು ಇತ್ಯಾದಿಗಳನ್ನು ಅದು ಎತ್ತಿ ತೋರಿಸಿದೆ.

ಹಣಕಾಸು ಕೊರತೆಯನ್ನು ಕಡಿಮೆ ಮಾಡಬೇಕಾದ ಷರತ್ತನ್ನು ಭಾರತ ಸರ್ಕಾರದ ಮೇಲೆ ಹೇರಿರುವ ಐಎಂಎಫ್ ಭಾರತೀಯ ರಿಸರ್ವ್‌ಬ್ಯಾಂಕ್ ಇನ್ನೂ ಸ್ವಾಯತ್ತವಾಗಿರಬೇಕು ಎಂದು ಬಯಸಿರಬಹುದು. ಹಾಗೆಯೇ ಮಾರುಕಟ್ಟೆಯಲ್ಲಿ ಏರುಪೇರಾದಾಗ ಈ ಕೇಂದ್ರೀಯ ಬ್ಯಾಂಕ್ ಮಧ್ಯ ಪ್ರವೇಶಿಸಕೂಡದು ಎಂಬುದೂ ಅದರ ಒಳಮರ್ಮವಿರಬಹುದು.

ಆದರೆ ಕೆಲವು ದಿನಗಳ ಹಿಂದೆ ಆದ ರೂಪಾಯಿ ಬೆಲೆ ಕುಸಿತ ಮತ್ತು ಹಣಕಾಸು ಮಾರುಕಟ್ಟೆಯಲ್ಲಿ ಬಡ್ಡಿದರದ ಯದ್ವಾತದ್ವಾ ಏರುಪೇರಿ ತಡೆಯಲು ಭಾರತೀಯ ರಿಸರ್ವ್‌ಬ್ಯಾಂಕ್ ಮಧ್ಯೆ ಪ್ರವೇಶಿಸದಿದ್ದರೆ ಏನಾಗುತ್ತಿತ್ತು. ಖಂಡಿತವಾಗಿಯೂ ಮೆಕ್ಸಿಕೊದಂತಹ ಆರ್ಥಿಕ ಬಿಕ್ಕಟ್ಟು ಉಂಟಾಗುತ್ತಿತ್ತು. ಐಎಂಎಫ್ ನಂತಹ ಸಂಸ್ಥೆಗಳಿಗೆ ಮತ್ತ ಹೆಚ್ಚೆಚ್ಚು ಸಾಲ ನೀಡಿ ಷರತ್ತುಗಳನ್ನು ಹೇರಲು ಅನುಕೂಲವಾಗುತ್ತಿತ್ತು ಅಲ್ಲವೆ?

ತನ್ನ ಮಾತನ್ನು ಉಳಿಸಿಕೊಳ್ಳದ ಕೇಂದ್ರ ಅರ್ಥ ಮಂತ್ರಿ

ಕೇಂದ್ರಹಣಕಾಸು ಮಂತ್ರಿ ಡಾ.ಮನಮೋಹನಸಿಂಗರ ಬಗ್ಗೆ ಮಾತನಾಡಿ. ನಮ್ಮ ಪತ್ರಿಕಾ ಪ್ರಿಯ ಮಧ್ಯಮ ವರ್ಗ ಮತ್ತು ಮೇಲ್ವರ್ಗದ ಜನರೆಲ್ಲ ಆತ ಬಹಳ ಪ್ರಾಮಾಣಿಕ ಎಂದೆಲ್ಲ ಹೊಗಳತೊಡಗುತ್ತಾರೆ. ಆದರೆ ಈ ಪ್ರಾಮಾಣಿಕ ಮುಖವಾಡದ ಹಿಂದೆ ಎಂತಹ ಅಪ್ರಾಮಾಣಿಕತೆ ಅಡಗಿದೆ ಎಂಬುದನ್ನು ಈ ಕೆಳಗಿನ ಒಂದು ನಿದರ್ಶನದಿಂದ ನೀವು ತಿಳಿದುಕೊಳ್ಳಬಹುದು.

ಸಂಸತ್ತಿನಲ್ಲಿ ಹಲವು ವಿಷಯಗಳ ಬಗ್ಗೆ ಆಳವಾಗಿ ಅಧ್ಯಯನಮಾಡಲು ಸಂಸತ್ ಸಮಾಲೋಚನಾ ಸಮಿತಿಯನ್ನು ನೇಮಿಸವಾಗುತ್ತದೆ. ಇದು ಸಂಸತ್ತಿನಷ್ಟೇ ಮುಖ್ಯವಾದದ್ದು. ಯಾಕೆಂದರೆ ವಿವಿಧ ಪಕ್ಷಗಳ ಸದಸ್ಯರಿರುವ ಈ ಸಮಿತಿ ಒಂದು ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಸಂಸತ್ತಿನಲ್ಲಿ ವರದಿ ಮಂಡಿಸುತ್ತದೆ.

ಕಳೆದ ಆಗಸ್ಟ 24 ರಂದು ಡಾ.ಮನಮೋಹನ ಸಿಂಗರ ಅರ್ಥ ಖಾತೆಯ ಮೇಲಿನ ಸಮಾಲೋಚನಾ ಸಮಿತಿಯ ಸಭೆ ನಡೆಯಿತು. ಅದರಲ್ಲಿ ಸಿಪಿಐ(ಎಂ)ನ ಸಂಸದರಾದ ಡಾ.ಅಶೋಕ ಮಿತ್ರರಿಗೆ ಡಾ.ಸಿಂಗರು ಬ್ಯಾಂಕುಗಳ ಸುಸ್ತಿದಾರರ ಪಟ್ಟಿ ಮತ್ತು ಆಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕಿನ ವರದಿ ನೀಡುವುದಾಗಿ ಭರವಸೆ ನೀಡಿದರು. ಡಾ.ಸಿಂಗರ ಈ ತೀರ್ಮಾನಕ್ಕಾಗಿ ಅವರ ಪಕ್ಷದ (ಕಾಂಗ್ರೆಸ) ಸಂಸದರೂ ಸೇರಿದಂತೆ ಎಲ್ಲರೂ ಪ್ರಶಂಸೆ ಮಾಡಿದರು.

ಆದರೆ ಈ ವರದಿ ಬಿಡುಗಡೆ ಆಗಲೇ ಇಲ್ಲ. ಆಗಸ್ಟ 24 ರ ಸಭೆಯ ನಡವಳಿಕೆಗಳು ಬಂದಾಗ ಅದರಲ್ಲೂ ಡಾ.ಸಿಂಗರ ಈ ಭರವಸೆಯ ಬಗ್ಗೆ ಉಲೇಖವೇ ಇರಲಿಲ್ಲ. ಎಡಪಕ್ಷದ ಸಂಸದರು ಈ ಬಗ್ಗೆ ಪತ್ರ ಬರೆದರೆ ಅದಕ್ಕೆ ಉತ್ತರವೂ ಬರಲಿಲ್ಲ. ನವೆಂಬರ್ 14 ರಂದು ಕ್ರಿಯಾವರದಿ ಬಂದು ಅದರಲ್ಲಿ ಭಾರತೀಯ ರಿಸರ್ವ ಬ್ಯಾಂಕಿನ ವರದಿ ಬಿಡುಗಡೆಯ ಬಗ್ಗೆ ವಿಚಾರಿಸಲಾಗುವುದು ಎಂದಿತ್ತು.

ನಂತರ ನಡೆದ ಸಮಾಲೋಚನಾ ಸಮಿತಿಯ ಸಭೆಯಲ್ಲಿ ಡಾ.ಸಿಂಗರು ಇನ್ನೂ ದೊಡ್ಡ ನಾಟಕವಾಡಿದರು. "ಆಗಸ್ಟ್ 24 ರ ಸಭೆಯಲ್ಲಿ ನಾನು ಏನು ಹೇಳಿದೆನೊ ನನಗೆ ಸರಿಯಾಗಿ ನೆನಪಿಲ್ಲ" ಎಂದರು. ಅನಂತರ ಡಾ.ಮಿತ್ರರ ನೆನಪು ಸರಿಯಿರಬಹುದು. ಬಹುಶ: ನಾನು ಆ ಗಳಿಗೆಯಲ್ಲಿ ವಿಚಾರ ಮಾಡದೇ ಅಂತಹ ಭರವಸೆ ನೀಡಿರಬಹುದು. ಆದರೆ ಈಗ ಫನವಿಮರ್ಶೆ ಮಾಡಿ ಈ ವರದಿ ಬಿಡುಗಡೆ ಮಾಡಬಾರದೆಂದು ತೀರ್ಮಾನಿಸಿದ್ದೇನೆ" ಎಂದರು! ಅನಂತರ ಅವರು ಆಗಸ್ಟ್ 24 ರಂದು ನೀಡಿದ ಮಾತಿನಂತೆ ನಡೆದುಕೊಳ್ಳದ್ದಕ್ಕೆ ಕ್ಷಮೆ ಕೋರಿದರಂತೆ. ಅದು ಬೇರೆ ಮಾತು.

ಆದರೆ ಅಪ್ಪಟ್ಟ ಪ್ರಮಾಣಿಕ ಪೋಸು ನೀಡುವ ಮನಮೋಹನಸಿಂಗರಿಗೆ ಈ ಅಪ್ರಾಮಾಣಿಕತೆಯ ಆಶ್ರಯ ಇಷ್ಟೊಂದು ಬೇಕಾಯಿತೆ? ಹೌದು. ವಿಫಲತೆಯನ್ನು ಮುಚ್ಚಿಕೊಳ್ಳಲು, ತನ್ನ ವರ್ಗ ಮಿತ್ರರನ್ನು ಬಚಾವ್ ಮಾಡಲು!

ಫೆಲ್‌ನ ಕುಕೃತ್ಯಗಳು

ಫೆಲ್ ಎಂಬ ಆಂಗ್ಲೊಡಚ್ ಬಹುರಾಷ್ಟ್ರೀಯ ಕಂಪನಿಯೊಂದಿದೆ. ಈ ಕಂಪನಿ ಮೊನ್ನೆ ಮೊನ್ನೆ ನೈಜೀರಿಯಾದ ಪರಿಸರವಾದಿ ಅಲ್ಲಿನ ಒಗೋನಿ ಅಲ್ಪಸಂಖ್ಯಾತ ಕೋಮಿನ ಹೋರಾಟಗಾರ ಕೆ... ಸಾರೋವಿವಾನನ್ನು 'ನ್ಯಾಯಾತ್ಮಕ' ಕೊಲೆ ಮಾ...ವಲ್ಲಿ ದೊಡ್ಡ ಪಾತ್ರ ವಹಿಸಿತು ಎನ್ನಲಾ...

ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳೆರಡೂ ... ಬಹುರಾಷ್ಟ್ರೀಯ ಕಂಪನಿಯನ್ನು ಭಾರತದಿಂದ ಹೊರಕ್ಕೆ ಹಾಗಬೇಕೆಂದು ತೀವ್ರ ಒತ್ತಾಯ ಮಾಡಿವೆ.

ಫೆಲ್ ತಾನಿರುವ ದೇಶಗಳಲ್ಲೆಲ್ಲ ಇಂತಹ ಶೋಷಣಾತ್ಮಕ, ಕೊಲೆ ಸುಲಿಗೆಗಳನ್ನು ಬಹಳ ನಾಜೂಕುತನದಿಂದ ಮಾಡಿಸುತ್ತಿದೆ ಎನ್ನಲಾಗುತ್ತಿದೆ. ಆದ್ದರಿಂದಲೇ ಎಲ್ಲ ದೇಶಗಳಲ್ಲೂ ಈ ಕಂಪನಿಯ ವಿರುದ್ಧ ಧ್ವನಿಗಳು ಕೇಳಿಬರುತ್ತಿವೆ. ನರಸಿಂಹರಾಯರ ಸರ್ಕಾರ ಕಂಪನಿಯನ್ನು ಭಾರತದಿಂದ ಒದ್ದೋಡಿಸೀತೆ?



ಚಂಡೀಗಢದಲ್ಲಿ ಕೃಷಿ ಕೂಲಿಕಾರರ ಮತ ಪ್ರದರ್ಶನ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಹಾಗೂ ಬಿ.ಕೆ.ಎಂ.ಯು.ನ ಪಂಜಾಬ್ ರಾಜ್ಯ ಘಟಕಗಳ ನೇತೃತ್ವದಲ್ಲಿ ನವಂಬರ್ 29ರಂದು ಚಂಡೀಗಢದಲ್ಲಿ ನಡೆದ ಕೃಷಿ ಕೂಲಿಕಾರರ ಒಂದು ಜಂಟಿ ರ್‍ಯಾಲಿ ರಾಜ್ಯದ ಗಮನ ಸೆಳೆಯಿತು. ಕಳೆದ ಚುನಾವಣೆಗಳ ವೇಳೆ ಪಂಜಾಬ್‌ನ ಕಾಂಗ್ರೆಸ್ ಪಕ್ಷ 5000 ರೂ.ವರೆಗಿನ ಬ್ಯಾಂಕ್ ಸಾಲಗಳನ್ನು ರದ್ದು ಮಾಡುವ ಭರವಸೆ ನೀಡಿತ್ತು. ಇದುವರೆಗೂ ಅದನ್ನು ಈಡೇರಿಸದೆ ಅದರಿಂದ ತಪ್ಪಿಸಿಕೊಳ್ಳುತ್ತಿರುವ ಪಂಜಾಬ್ ಕಾಂಗ್ರೆಸ್ ಸರಕಾರಕ್ಕೆ ಎಚ್ಚರಿಕೆ ನೀಡಲು ಈ ರ್‍ಯಾಲಿ ನಡೆಯಿತು. ಅಷ್ಟೇ ಅಲ್ಲ, ಈಗಿನ ಮುಖ್ಯಮಂತ್ರಿ ಒಂದೆಡೆ ಒಂದು ಲಕ್ಷ ಎಕ್ರೆಗೂ ಹೆಚ್ಚಿರುವ ಭೂಮಿಯನ್ನು ಹಂಚುವ ಮಾತನ್ನು ಮರೆತು ಕಾನೂನುಬಾಹಿರವಾಗಿ ನೂರು ಎಕ್ರೆಗಿಂತ ಹೆಚ್ಚು ಜಮೀನು ಹೊಂದಿರುವ ಭೂಮಾಲಕರನ್ನು ಮುಟ್ಟುವುದಿಲ್ಲ ಎಂಬ ಇಂಗಿತ ನೀಡಿದ್ದಾರೆ. ಈ ರ್‍ಯಾಲಿ ಈ ವಚನಭಂಗವನ್ನು ಪ್ರತಿಭಟಿಸಿತು. ಅಕ್ಟೋಬರ್ 4ರಂದು ಜಾಲಂಧರ್ ನಲ್ಲಿ ನಡೆದ ರಾಜ್ಯ ಮಟ್ಟದ ಕೃಷಿ ಕೂಲಿಕಾರರ ಸಮಾವೇಶದ ಕರೆಯ ಮೇರೆಗೆ ಈ ರ್‍ಯಾಲಿ ನಡೆಯಿತು. ಈ ಸಮಾವೇಶ ಪಂಜಾಬಿನಲ್ಲಿ ಕೃಷಿ ಕೂಲಿಕಾರರ ದುಸ್ಥಿತಿಯನ್ನು ಎತ್ತಿ ತೋರಿಸಿತ್ತು.

ದೂರದ ಪ್ರದೇಶಗಳಾದ ಅಬೋಹರ್, ಅಮೃತಸರ, ಫರೀದ್‌ಕೋಟ್ ಹಾಗೂ ಭಾಟಿಂಡಾದಿಂದಲೂ ಕೃಷಿಕೂಲಿಕಾರರು ಬಂದಿದ್ದರು. ಎರಡೂ ಸಂಘಟನೆಗಳ ಅಧ್ಯಕ್ಷರುಗಳಾದ ಚಾಂದ್ ಸಿಂಗ್ ಚೋಪ್ರಾ ಹಾಗೂ ಭಾನ್ ಸಿಂಗ್ ಚೌರಾರ ಅಧ್ಯಕ್ಷತೆಯಲ್ಲಿ ರ್‍ಯಾಲಿ ನಡೆಯಿತು. ಈ ಸಂಘಟನೆಗಳ ರಾಜ್ಯ ಕಾರ್ಯದರ್ಶಿಗಳಾದ ಶೇರ್ ಸಿಂಗ್ ಫರ್‍ವಾಲಿ ಹಾಗೂ ಗುಲ್ಜಾರ್ ಸಿಂಗ್ ಗೋರಿಯಾ ಕೃಷಿ ಕೂಲಿಕಾರರ ಬೇಡಿಕೆಯ ಪಟ್ಟಿಯನ್ನು ಮಂಡಿಸಿದರು.

ಬೇಡಿಕೆಗಳ ವಿವರ ನೀಡುತ್ತಾ ಫರ್‍ವಾಲಿಯವರು ಹೇಗೆ ಕೇಂದ್ರದ ಹೊಸ ಆರ್ಥಿಕ ನೀತಿಗಳು ಮತ್ತು ಕೃಷಿ ನೀತಿಗಳು ಕೆಲಸದ ದಿನಗಳಲ್ಲಿ ಕಡಿತ ತಂದಿವೆಯಷ್ಟೇ ಅಲ್ಲ, ಬೆಲೆಯೇರಿಕೆಯಾಗಿ ಜನಸಮೂಹಗಳ ಕೊಳ್ಳುವ ಸಾಮರ್ಥ್ಯವನ್ನು ಹೇಗೆ ಹ್ರಾಸಗೊಳಿಸಿವೆ, ಅದೇ ವೇಳೆಗೆ ಸಾಲಗಳು ಹೇಗೆ ಹೊರಲಾರದ ಹೊರೆಯಾಗುತ್ತಿವೆ ಎಂದು ವಿವರಿಸಿದರು. 5000 ರೂ.ವರೆಗಿನ ಸಾಲದ ಮನ್ನಾ, 58 ವರ್ಷ ಮೀರಿದವರಿಗೆ ವೃದ್ಧಾಪ್ಯ ವೇತನ, ಪರಿಶಿಷ್ಟ ಜಾತಿ/ಜನಾಂಗಗಳ ಮಕ್ಕಳಿಗೆ 30 ರೂ.ನಿಂದ 250 ರೂ.ವರೆಗೆ ಸ್ಕಾಲರ್‌ಶಿಪ್, ಗರ್ಭಿಣಿ ಕೂಲಿಕಾರ ಮಹಿಳೆಯರಿಗೆ ಮೂರು ತಿಂಗಳ ನೆರವು, ಮಗು ಹುಟ್ಟಿದಾಗ 1000 ರೂ. ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕಾದ ಅಗತ್ಯವನ್ನು ವಿವರಿಸಿರು. ಈ ಬೇಡಿಕೆಗಳನ್ನು ಹಿಂದಿನ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದರೂ ಹೋರಾಟವಿಲ್ಲದೆ ಅವುಗಳ ಅನುಷ್ಠಾನ ಸಾಧ್ಯವಾಗುವುದಿಲ್ಲ ಎಂದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಉಪಾಧ್ಯಕ್ಷ ಧನ್ ಪತ್ ರಾಯ್ ನಾಹರ್ ಬಡವರ ಬೇಡಿಕೆಗಳನ್ನು ಈಡೇರಿಸದೆ ಶ್ರೀಮಂತರಿಗೆ ನಾಚಿಕೆಯಿಲ್ಲದೆ ರಿಯಾಯ್ತಿ ನೀಡುತ್ತಿರುವ ಸರಕಾರದ ವರ್ಗಗಳಿಗೂ ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದರು. ಕೃಷಿ ಕೂಲಿಕಾರರ ಸಾಧ್ಯವಾದಷ್ಟು ವ್ಯಾಪಕವಾದ ಐಕ್ಯತೆ ಈಗಿನ ತುರ್ತು ಅವಶ್ಯಕತೆಯೆಂದು ನಾಹರ್ ಪಂಜಾಬಿನಲ್ಲಿ ಈ ಎರಡು ಸಂಘಟನೆಗಳ ನಡುವೆ ಮೂಡಿರುವ ಐಕ್ಯತೆ ಇದಕ್ಕೊಂದು ಉತ್ತಮ ಆಧಾರ ಎಂದರು.

ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಶಾಸನದ ಅಗತ್ಯವನ್ನು ವಿವರಿಸುತ್ತಾ AIAWU ಜಂಟಿ ಕಾರ್ಯದರ್ಶಿ ವಿಜಯರಾಘವನ್ ಕೇರಳದಲ್ಲಿ ಇಂತಹುದೊಂದು ಶಾಸನದಿಂದಾಗಿ ಕೂಲಿಯ ಹೆಚ್ಚಳ, ಭದ್ರತೆ, ವೃದ್ಧಾಪ್ಯ ವೇತನ ಹಾಗೂ ಕಲ್ಯಾಣ ನಿಧಿ ಆರಂಭವಾಗುವಂತಾಗಿದೆ ಎಂದರು. ಇಂತಹದೊಂದು ಶಾಸನಕ್ಕಾಗಿ ಹೋರಾಟ ನಡೆಸಬೇಕು ಎಂದರು.

ತಮ್ಮ ಸಮಸ್ಯೆಗಳ ಪರಿಹಾರಕ್ಕೆ ನಿರಂತರ ಹೋರಾಟ ನಡೆಸಬೇಕು ಎಂದು ಇನ್ನೊಬ್ಬ ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ ಕರೆ ನೀಡಿದರು. ಫರೀದ್ ಕೋಟ್ ಜಿಲ್ಲೆಯ ಒಂದು ಗ್ರಾಮದಲ್ಲಿ ಒಬ್ಬ ಕ್ರಿಮಿನಲ್ ಭೂ ಮಾಲೀಕ ಜಸ್ವಾರ್ ಸಿಂಗ್ ಒಬ್ಬ ಕೃಷಿ ಕೂಲಿಕಾರರ ಯು... ತಿಯನ್ನು ಅಮಾನುಷವಾಗಿ ಕೊಲೆ ಮಾಡಿಸಿದ. ಆದರೆ ಜಸ್ವಾರ್ ಸಿಂಗ್ ತಪ್ಪಿಸಿಕೊಂಡ, ಆತನ ಬಡ ಭಂಟರಿಗೆ ಮಾತ್ರ ಜೈಲು ಶಿಕ್ಷೆಯಾಯಿತು. ಈ ರೀತಿಯ 'ನ್ಯಾಯ' ನೀಡಿಕೆಯನ್ನು ಜನ... ಪ್ರತಿಭಟಿಸುತ್ತಾರೆ ಎಂದರು. ಕನಿಷ್ಟ ಕೂಲಿಜ್ಯಾರಿ, ... ರೇಶನ್ ವ್ಯವಸ್ಥೆ, ಹೆಚ್ಚುವರಿ ಭೂಮಿಯ ವಿತರಣೆಗೆ ಬ್ಲಾಕ್ ಹಾಗೂ ತಹಸೀಲು ಮಟ್ಟದ... ಚಳುವಳಿಗಳನ್ನು ನಡೆಸಬೇಕು ಎಂದು ಅವರು... ಕರೆ ನೀಡಿದರು. ನಿರೀಕ್ಷೆಗಿಂತ ಇಮ್ಮಡಿ ಜನ... ಭಾಗವಹಿಸಿದ ಈ ರ್‍ಯಾಲಿ ನಂತರ ವಿಧಾನಸಭೆಯ ಕಡೆಗೆ ಮೆರವಣಿಗೆ ಹೊರಟು ಅಲ್ಲಿ... ಜ್ಯಾರಿಯಲ್ಲಿದ್ದ 144ನೇ ಸೆಕ್ಷನನ್ನು ಮುರಿಯಲು... ಸಿದ್ಧವಾಯಿತು. ಅಷ್ಟರಲ್ಲಿ ಸರಕಾರದ ಮುಖ್ಯ... ಕಾರ್ಯದರ್ಶಿಯೇ ಬಂದು ಕೃಷಿ ಕೂಲಿಕಾರರ... ಮನವಿ ಪತ್ರವನ್ನು ಸ್ವೀಕರಿಸಿದರು.

ಅಸ್ಸಾಂ: ಒಂದು ಮಹತ್ವಪೂರ್ಣ ಜಂಟಿ ಸಮಾವೇಶ

ನವಂಬರ್ 27ರಂದು ಅಸ್ಸಾಂನ ನಾಲ್ಕು ಪ್ರಮುಖ ವಿರೋಧ ಪಕ್ಷಗಳ ಸಮಾವೇಶವೊಂದು ರಾಜಧಾನಿ ಗುವಾಹಟಿಯಲ್ಲಿ ನಡೆಯಿತು. ಕಾಂಗ್ರೆಸ್(ಐ) ಸರಕಾರದ ದುರಾಡಳಿತ, ದುಷ್ಕೃತ್ಯಗಳು ಹಾಗೂ ಲಂಗುಲಗಾಮಿಲ್ಲದ ಭ್ರಷ್ಟಾಚಾರದ ವಿರುದ್ಧ ಹಾಗೂ ಬಿಜೆಪಿಯ ಫ್ಯಾಸಿಸ್ಟ್ ತಂತ್ರಗಳನ್ನು ಸೋಲಿಸಲು ಸಾಮೂಹಿಕ ಪ್ರಕ್ಷೋಭೆಗಳನ್ನು ನಡೆಸಬೇಕೆಂದು ಸಮಾವೇಶ ನಿರ್ಧರಿಸಿತು. ಸಿಪಿಐ(ಎಂ), ಸಿಪಿಐ, ಎಜಿಪಿ ಹಾಗೂ ಬೋಡೋಲ್ಯಾಂಡ್ ಪೀಪಲ್ಸ್ ಪಾರ್ಟಿ ಈ ಸಮಾವೇಶವನ್ನು ಸಂಘಟಿಸಿದ್ದವು.

ಗುವಾಹಟಿ ಜಿಲ್ಲಾ ಗ್ರಂಥಭಂಡಾರ ಸಭಾಂಗಣದಲ್ಲಿ ಜನ ಕಿಕ್ಕಿರಿದು ನೆರೆದಿದ್ದರು. ವಿರೋಧ ಪಕ್ಷಗಳ ಈ ಐಕ್ಯತೆಯ ಪ್ರಯತ್ನವನ್ನು ವಿಫಲಗೊಳಿಸುವ ಕೆಲವು ಪಟ್ಟಭದ್ರರ ಸಂಚನ್ನು ವಿಫಲಗೊಳಿಸಿ ಈ ಸಮಾವೇಶ ನಡೆಯಿತು.

ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಹಾಗೂ ಬಿಜೆಪಿಯನ್ನು ಸೋಲಿಸುವಂತಹ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ಒಂದು ಚುನಾವಣಾ ಹೊಂದಾಣಿಕೆ ಬೆಸೆಯುವಲ್ಲಿ ಐಕ್ಯತೆ ಸಾಧಿಸುವಲ್ಲಿ ಇದೊಂದು ಹೆಜ್ಜೆ ಎಂದು ಭಾವಿಸಲಾಗಿದೆ. ಸಿಪಿಐ(ಎಂ) ನಂದೇಶ್ವರ ತಾಲೂಕ್‌ದಾರ್, ಅಸ್ಸಾಂ ಗಣಪರಿಷತ್ತಿನ ಪ್ರಫುಲ್ಲ ಕುಮಾರ್ ಮಹಂತ, ಸಿಪಿಐನ ಘಿಯಾಸುದ್ದೀನ್ ಅಹ್ಮದ್ ಹಾಗೂ ಬಿಪಿಪಿಯ ದರ್ ಹಂಗ್ರಾ ಮೇಶಾಹಾರಿಯವರಿದ್ದ ಅಧ್ಯಕ್ಷ ಮಂಡಳಿ ಸಮಾವೇಶವನ್ನು ನಡೆಸಿಕೊಟ್ಟಿತು.

ಹತ್ತು ಅಂಶಗಳ ಬೇಡಿಕೆ ಪಟ್ಟಿಯನ್ನು ಅಂಗೀಕರಿಸಿದ ಸಮಾವೇಶ ಈ ಕೆಳಗಿನ ಪ್ರಶ್ನೆಗಳ ಮೇಲೆ ಸಾಮೂಹಿಕ ಪ್ರಚಾರ-ಪ್ರಕ್ಷೋಭೆ ನಡೆಸಲು ನಿರ್ಧರಿಸಿತು - ಕೊಲೆ, ಅಪಹರಣ, ಹಣ ಕೀಳುವುದು ಮತ್ತಿತರ ಸಮಾಜ-ವಿರೋಧಿ ಕೃತ್ಯಗಳನ್ನು ನಿಲ್ಲಿಸಬೇಕು, ಯುಎಫ್‌ಎ ಮತ್ತು ಬೋಡೋ ಸೆಕ್ಯುರಟಿ ಫೋರ್ಸ್ ಜತೆ ಮಾತುಕತೆ ಆರಂಭಿಸಬೇಕು, ಬುಡಕಟ್ಟುಗಳಿಗೆ ಸ್ವಾಯತ್ತತೆ ಹಾಗೂ ಸ್ವಾಯತ್ತ ಪ್ರದೇಶಗಳ ಇತರರಿಗೆ ರಕ್ಷಣೆ ಮತ್ತು ಬೋಡೋ ಮತ್ತು ಕಾರ್ಬಿ ಒಪ್ಪಂದಗಳ ಅನುಷ್ಠಾನ, ಎಲ್‌ಒಸಿ ಹಗರಣದ ಬಗ್ಗೆ ತನಿಖೆ ನಡೆಸಲು ಒಂದು ಸದನ ಸಮಿತಿ ರಚನೆ, ನೆರೆ ಹತೋಟಿಗೆ ಬ್ರಹ್ಮಪುತ್ರಾ ಮಂಡಳಿಯಿಂದ ಯೋಜನೆಗಳ ಜ್ಯಾರಿ, ಬೆಲೆಯೇರಿಕೆ ತಡೆಯಲು ಕ್ರಮಗಳು, ಅಸ್ಸಾಂ ಒಪ್ಪಂದದ ಆಧಾರದ ಮೇಲೆ 1971ನ್ನು ಆಧಾರ ವರ್ಷವಾಗಿ ತಗೊಂಡು ವಿದೇಶೀ ನಾಗರಿಕರನ್ನು ಹೊರಕಳಿಸಬೇಕು ಹಾಗೂ ಮುಳ್ಳು ತಂತಿಗಳಿಂದ ಗಡಿಗೋಡೆಗಳನ್ನು ರಚಿಸಬೇಕು, ಸಾರ್ವಜನಿಕ ವಲಯದ ಶೇರುಗಳ ಮಾರಾಟದ ಬಗ್ಗೆ ಉಚ್ಚ ಮಟ್ಟದ ನ್ಯಾಯಾಂಗ ತನಿಖೆ, ಕರಾಳ ಶಾಸನಗಳು ಹಾಗೂ 144ನೇ ಸೆಕ್ಷನ್‌ನ ವಾಪಸಾತೀ ಹಾಗೂ ರಾಜ್ಯಗಳಿಗೆ ಹೆಚ್ಚಿನ ರಾಜಕೀಯ ಮತ್ತು ಹಣಕಾಸು ಅಧಿಕಾರಗಳು.

ಮುಂಬೈ: ಕಾವಿಪಡೆಗಳ ಹೇಡಿತನದ ಪ್ರದರ್ಶನ

ನವಂಬರ್ 24. ದಲಿತ ಕ್ರಿಶ್ಚಿಯನ್... ರಿಗೂ ಮೀಸಲಾತಿ ಅನ್ವಯವಾಗಬೇಕೆಂದು... ಒತ್ತಾಯಿಸಿ ಸುಮಾರು ನೂರು ಮಂದಿ... ಮುಂಬೈಯ ಹುತಾತ್ಮ ಚೌಕದೆದುರು ಧರಣಿ... ಕೂತಿದ್ದರು. ಇದ್ದಕ್ಕಿದ್ದಂತೆ 150ಕ್ಕೂ ಹೆಚ್ಚು... ಬಜರಂಗ ದಳದ 150 ಗೂಂಡಾಗಳು ಕಾಣಿ... ಸಿಕೊಂಡರು. ಧರಣಿ ಕೂತವರನ್ನು ಥಳಿಸಿ... ದರು. ಹಲವರಿಗೆ ಗಾಯಗಳಾದವು. ಇಬ್ಬ... ರಿಗೆ ತೀವ್ರ ಗಾಯಗಳಾದವು.

ಹರಿಜನರ ಗುಡಿಸಲು ನಾಶ: ಚಂಪಾರಣ್ ಜಿಲ್ಲೆಯಲ್ಲಿ ಸತತ ಪ್ರತಿಭಟನೆ

ಬಿಹಾರದ ಚಂಪಾರಣ್ ಜಿಲ್ಲೆಯ ಮೋತಿಹಾರಿನಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಹರಿಜನರ ಗುಡಿಸಲುಗಳನ್ನು ಸುಟ್ಟು ಹಾಕಿದ್ದನ್ನು ಪ್ರತಿಭಟಿಸಿ ಸತತವಾಗಿ ಧರಣಿಗಳು ನಡೆಯುತ್ತಿವೆ. ಮೂರು ತಿಂಗಳ ಹಿಂದೆ ಸ್ಥಳೀಯ ವ್ಯಾಪಾರಿಯೊಬ್ಬನ ಬಾಡಿಗೆ ಗೂಂಡಾಗಳು ಬಡ ಹರಿಜನರ ಇಡೀ ಕೇರಿಯೊಂದಕ್ಕೆ ಬೆಂಕಿ ಹಚ್ಚಿದರು.

ನವಂಬರ್ 5ರಂದು ಮೋತಿಹಾರಿ ನಗರದ "ಪ್ರಮೋದ್‌ದಾಸ್‌ಗುಪ್ತಾ ನಗರ"ದಲ್ಲಿ ವಾಸವಾಗಿದ್ದ 22 ಹರಿಜನ ಕುಟುಂಬಗಳಿಗೆ ಸೇರಿದ 33 ಮನೆಗಳನ್ನು ಮಾಧವ ಪ್ರಸಾದ್ ಎಂಬಾತನ ಕುಮ್ಮಕ್ಕಿನಿಂದ 200 ಗೂಂಡಾಗಳು ಬೆಂಕಿ ಹಚ್ಚಿ ನೆಲಸಮ ಮಾಡಿದರು. ರೈಫಲ್‌ಗಳು, ನಾಡಬಾಂಬ್‌ಗಳು ಮತ್ತಿತರ ಅಸ್ತ್ರಗಳೊಂದಿಗೆ ಕಾಲನಿಗೆ ನುಗ್ಗಿದ ಗೂಂಡಾ ಪಡೆ ಹಾಡು ಹಗಲಿನಲ್ಲೇ ಇಡೀ ಕೇರಿಯಲ್ಲಿ ಕೇಕೆ ಹಾಕಿಕೊಂಡು ಬೆಂಕಿ ಹಚ್ಚಿದರು.

ಇಲ್ಲಿ ವಾಸಿಸುವ ಬಹಳ ಮಂದಿ ರಿಕ್ಷಾ ಎಳೆಯುವವರು, ಮೊಟ್ಟೆ ಮಾರುವುದು ಮತ್ತಿತರ ಚಿಕ್ಕಪುಟ್ಟ ಕೆಲಸಗಳನ್ನು ಮಾಡಿಕೊಂಡು ಹೊಟ್ಟೆ ಹೊರೆಯುವವರು. 15 ವರ್ಷಗಳ ಹಿಂದೆ ಒಬ್ಬ ಭೂ ಮಾಲಕ ಕಾನೂನುಬಾಹಿರವಾಗಿ ಆಕ್ರಮಿಸಿದ್ದ ಜಮೀನಿನಲ್ಲಿ ಸಿಪಿಐ(ಎಂ) ಕಾರ್ಯಕರ್ತರ ನೆರವಿನಿಂದ ಈ ಬಡಜನ ತಮ್ಮ ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಆ ಭೂಮಾಲಕ ನಂತರ ಆ ಜಮೀನನ್ನು ಮಾಧವ್ ಪ್ರಸಾದ್‌ಗೆ ಮಾರಿದ ನಂತೆ.

ಈ ಕೇರಿಯ ಪಕ್ಕದಲ್ಲೇ ಈ ವ್ಯಕ್ತಿಯ ಒಡೆತನದ ಸಿನೆಮಾ ಟಾಕೀಸ್ ಇದ್ದು ತನ್ನ ಹಣ ಮತ್ತು ರಾಜಕೀಯ ಬೆಂಬಲದಿಂದ ಈ ಬಡ ಜನರನ್ನು ಓಡಿಸಿ ಜಮೀನನ್ನು ತನ್ನ ವಶ ಮಾಡಿಕೊಳ್ಳಬಹುದೆಂದು ಅವನ ಲೆಕ್ಕಾಚಾರವಾಗಿತ್ತು. ಸ್ಥಳೀಯ ಸಿಪಿಐ(ಎಂ) ಮುಖಂಡರೆಲ್ಲಾ ರಾಜ್ಯ ಕಿಸಾನ್ ಸಮ್ಮೇಳನದಲ್ಲಿ ಭಾಗವಹಿಸಲು ಕಟಿಹಾರ್‌ಗೆ ಹೋಗಿದ ಸಂದರ್ಭವನ್ನು ಉಪಯೋಗಿಸಿಕೊಂಡು ಮಾಧವ ಪ್ರಸಾದ್ ತನ್ನ ಗೂಂಡಾಗಳನ್ನು ಹರಿಯಬಿಟ್ಟ.

ಗೂಂಡಾಗಳು ವಿನಾಶ ಲೀಲೆಯಲ್ಲಿ ತೊಡಗಿದ್ದಾಗ ಸ್ಥಳಕ್ಕೆ ಧಾವಿಸಿದ ಸ್ಥಳೀಯ ಪೋಲೀಸ್ ಠಾಣೆಯ ಮುಖ್ಯಸ್ಥ 41 ಜನರನ್ನು ಸ್ಥಳದಲ್ಲೇ ಬಂಧಿಸಿದರು. ಬಿಹಾರ ಸರಕಾರದ ಮಂತ್ರಿಯೊಬ್ಬ ನಗರದಲ್ಲಿದ್ದಾಗ ಈ ಘಟನೆ ನಡೆದಿದೆ. ಈತ ಸಿನೆಮಾ ಟಾಕೀಸ್ ಮಾಲಿಕನೊಂದಿಗೆ ನಿಕಟ ಸಂಪರ್ಕ ಇಟ್ಟಿರುವ ವ್ಯಕ್ತಿ. ಈ ಮಂತ್ರಿ ಫೋನಿನ ಮೂಲಕ ಬಂಧಿತರನ್ನು ಬಿಡುಗಡೆ ಮಾಡಲು ತಾಕೀತು ಮಾಡಿದ್ದಲ್ಲದೆ ಪೋಲೀಸ್ ಠಾಣೆಗೂ ಭೇಟಿ ನೀಡಿದ. ಆದರೆ ಅಲ್ಲಿ ನೆರೆದಿದ್ದ ಪ್ರತಿಭಟನಾಕಾರರನ್ನು ನೋಡಿ ಪೋಲೀಸ್ ಠಾಣೆಯನ್ನು ಪ್ರವೇಶಿಸಲಿಲ್ಲ.

ಈ ಬೆಂಕಿ ಪ್ರಕರಣದಲ್ಲಿ ಮನೆ ಕಳಕೊಂಡ ಕುಟುಂಬಗಳಿಗೆ ಪರಿಹಾರ ನೀಡಲು ಏನೂ ಮಾಡಿಲ್ಲ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಈ ಘಟನೆಯನ್ನು ಬಲವಾಗಿ ಖಂಡಿಸಿ, ಬಿಹಾರ ಸರಕಾರದ ಮಂತ್ರಿಯ ದುಷ್ಟ ಪಾತ್ರವನ್ನು ಖಂಡಿಸಿದೆ. ನೆಲೆ ಕಳಕೊಂಡ ಕುಟುಂಬಗಳಿಗೆ ಸಾಕಷ್ಟು ಪರಿಹಾರ ನೀಡಬೇಕು, ಅವರ ಗುಡಿಸಲುಗಳಿದ್ದ ಜಾಗದಲ್ಲೇ ಪಕ್ಕಾ ಮನೆಗಳನ್ನು ಕಟ್ಟಿಸಿಕೊಡಲು ವ್ಯವಸ್ಥೆ ಮಾಡಬೇಕು ಹಾಗೂ ಈ ಅಪರಾಧ ನಡೆಸಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಅಗರ್ತಲಾ ನಗರಸಭೆಯ ಎರಡು ವಿಶಿಷ್ಠ ಯೋಜನೆಗಳು

ತ್ರಿಪುರಾದ ರಾಜಧಾನಿ ಅಗರ್ತಲಾ... ಮುನಿಸಿಪಲ್ ಮಂಡಳಿ ಎರಡು ಕಲ್ಯಾಣ... ಕಾರ್ಯಕ್ರಮಗಳನ್ನು ರೂಪಿಸಿದೆ - ಒಂದು... ದಿನಗೂಲಿಗಳಿಗೊಂದು ವಿಶ್ರಾಂತಿಧಾಮ... ಹಾಗೂ ಇನ್ನೊಂದು ಕಸ-ಕಶ್ಮಲ ನಿವಾರಣೆಯ ವ್ಯವಸ್ಥೆಯನ್ನು ಚುರುಕುಗೊಳಿಸಲು... ಸುಲಭ್ ಇಂಟರ್ ನ್ಯಾಶನಲ್ ಎಂಬ ಒಂದು... ಸಾಮಾಜಿಕ ಪ್ರಯತ್ನವೂ ಆಗಿರುವ ವ್ಯಾಪಾರ... ಸಂಘಟನೆ ನಗರಕ್ಕೆ ಪ್ರತಿದಿನ ಸುತ್ತಮುತ್ತಲ... ಊರುಗಳಿಂದ ಹೊಟ್ಟೆಪಾಡಿಗಾಗಿ ರಿಕ್ಷಾ ಎಳೆಯುವವರು ಮತ್ತಿತರ ದಿನಗೂಲಿಗಳಿಗೆ ರಾತ್ರಿ ಕಳೆಯಲು ಹಾಗೂ ಸ್ನಾನ ಮತ್ತು ವಿಶ್ರಾಂತಿಯ ಸೌಕರ್ಯವನ್ನು ಸುಲಭ ವೆಚ್ಚದಲ್ಲಿ ಒದಗಿಸುವ 20 ಲಕ್ಷ ರೂ. ವೆಚ್ಚದ ವಿಶ್ರಾಂತಿಧಾಮವನ್ನು ಕಟ್ಟಲಿದೆ. ಈ ವಿಷಯವನ್ನು ತಿಳಿಸಿದ ನಗರಾಭಿವೃದ್ಧಿ ಮಂತ್ರಿ ಖಿಮಲಾ... ಸಿನ್ಹಾ ಕಸ-ಕಶ್ಮಲಗಳನ್ನು ಕೂಡಿ ಹಾಕಲು... ಮನೆಗಳಿಗೆ ಚೀಲಗಳನ್ನು ಒದಗಿಸಿ ಅದನ್ನು... ಮುನಿಸಿಪಲ್ ಮಂಡಳಿ ನೇಮಿಸಿದ ವ್ಯಕ್ತಿಗಳು ಸಂಗ್ರಹಿಸುವ ಒಂದು ಯೋಜನೆಯ... ಬಗ್ಗೆಯೂ ತಿಳಿಸಿದರು. ಮುಂದಿನ ತಿಂಗಳು... ನಗರದ ಕೆಲವೆಡೆ ಪ್ರಾಯೋಗಿಕವಾಗಿ ಇದು... ಕಾರ್‍ಯಾರಂಭಗೊಳ್ಳುತ್ತಿದೆ.

ದಿಲ್ಲಿಯಲ್ಲಿ ಮಕ್ಕಳ ಮೇಲೆ ಲೈಂಗಿಕ ದುರಾಚಾರದ ವಿರುದ್ಧ ಪ್ರತಿಭಟನೆ

ದಿಲ್ಲಿಯ ಸಾವಿರಾರು ಜನ, ಅವರಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕ ವರ್ಗ ಪ್ರದೇಶದ ಮಹಿಳೆಯರು, ಪುರುಷರು, ನವಂಬರ್ 30ರಂದು 'ಸಂಸತ್ ಚಲೋ' ನಡೆಸಿ ಮಕ್ಕಳ ಮೇಲಿನ ಲೈಂಗಿಕ ಕಿರುಕುಳದ ವಿರುದ್ಧ ಪ್ರತಿಭಟನೆಯ ದನಿಯೆತ್ತಿ ಈ ಹೀನ ಅಪರಾಧ ನಡೆಸುವವರ ವಿರುದ್ಧ ತೀವ್ರ ಕ್ರಮ ಸಾಧ್ಯವಾಗುವಂತೆ ಕಾನೂನುಗಳನ್ನು ಬದಲಿಸಬೇಕೆಂದು ಒತ್ತಾಯಿಸಿದರು. 'ಮಕ್ಕಳ ಮೇಲೆ ಲೈಂಗಿಕ ದುರಾಚಾರದ ವಿರುದ್ಧ ಜನತಾ ವೇದಿಕೆ' ಈ ಪ್ರತಿಭಟನೆಯನ್ನು ಸಂಘಟಿಸಿದ್ದವು. ದೇಶದ ರಾಜಧಾನಿಯಲ್ಲಿ ಇತ್ತೀಚೆಗೆ ಹಲವು ವರ್ಷಗಳಿಂದ ಹೆಚ್ಚುತ್ತಿರುವ ಮಕ್ಕಳ ಮೇಲಿನ ಲೈಂಗಿಕ ದುರಾಚಾರ, ಅತ್ಯಾಚಾರದ ವಿರುದ್ಧ ಜನಜಾಗೃತಿ ಮೂಡಿಸುವ ಒಂದು ತಿಂಗಳ ಪ್ರಚಾರ ಕಾರ್ಯಕ್ರಮದ ನಂತರ ಈ ಪ್ರತಿಭಟನೆ ನಡೆಯಿತು.

ಶಾಲಾ-ಕಾಲೇಜುಗಳಲ್ಲಿ, ಬೀದಿ ಮೂಲೆಗಳಲ್ಲಿ ಸಭೆಗಳು ನಡೆದವು. ಲಕ್ಷಾಂತರ ಕರಪತ್ರಗಳನ್ನು ಹಂಚಲಾಯಿತು. ಈ ಪ್ರಚಾರದ ಮೂಲಕ ಈ ಹೀನ ಕೃತ್ಯ ಎಷ್ಟು ವ್ಯಾಪಕವಾಗಿದೆ ಎಂಬುದರ ಮೇಲೆ ಬೆಳಕು ಚೆಲ್ಲಲು ಸಾಧ್ಯವಾಯಿತು. ದಿಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು, ಎಲ್ಲಾ ಮಹಾನಗರಗಳನ್ನು ಮೀರಿಸುವ ಮಹಾ ನಗರ - ಮಕ್ಕಳೂ ಕೂಡಾ ಈ ನಗರದಲ್ಲಿ ಸುರಕ್ಷಿತರಲ್ಲ ಏಕೆಂದರೆ ಪ್ರತಿದಿನ ಈ ನಗರದಿಂದ ಮಕ್ಕಳ ಮೇಲೆ ಲೈಂಗಿಕ ದುರಾಚಾರದ ವರದಿಗಳು ಬರುತ್ತಲೇ ಇರುತ್ತವೆ.

ಎಲ್ಲಾರಂಗದ ನಾಗರೀಕರಿರುವ ಈ ವೇದಿಕೆ ಈ ಹೀನ ಅಪರಾಧವನ್ನು ಎದುರಿಸಲು ಸಾಕಷ್ಟು ಕಾನೂನುಗಳಿಲ್ಲ, ಹಾಗೂ ಪೋಲೀಸರು ಮತ್ತು ನ್ಯಾಯಾಂಗ ಈ ಅಪರಾಧಕ್ಕೆ ಬಲಿಯಾದವರೊಂದಿಗೆ ಒರಟಾಗಿ ವರ್ತಿಸುವ ಬಗ್ಗೆ ಸಗಮನ ಸೆಳೆಯಲು ಪ್ರಯತ್ನಿಸಿ ಯಶಸ್ವಿಯಾಗಿದೆ. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಕಾನೂನು, ಈ ಅಪರಾಧಕ್ಕೊಳಗಾದ ಕುಟುಂಬಗಳಿಗೆ ಸೂಕ್ತ ಮರುವಸತಿ ಹಾಗೂ ಸಲಹೆ, ಈ ಅಪರಾಧದ ಬಗ್ಗೆ ಪೋಲೀಸರ ನಡವಳಿಕೆ ಬದಲಿಸಲು ಕ್ರಮ, ಈ ಅಪರಾಧಕ್ಕೆ ಬಲಿಯಾದವರಿಗೆ ಸಮುದಾಯದ ನೆರವು, ದುಡಿಯುವ ಮಹಿಳೆಯರ ಮಕ್ಕಳಿಗೆ ಕ್ರಶ್ ವ್ಯವಸ್ಥೆಯ ಮೂಲಕ ಮಕ್ಕಳ ಸುರಕ್ಷಿತತೆ ಹೆಚ್ಚಿಸುವುದು ಈ ವೇದಿಕೆ ಮುಂದಿಟ್ಟಿರುವ ಬೇಡಿಕೆಗಳು.

ಸಂಸತ್ ಮಾರ್ಗದಲ್ಲಿ ನಡೆದ ಸಭೆಯಲ್ಲಿ ಭಾಷಣಕಾರರು ಈ ಹೀನ ಕೃತ್ಯಗಳನ್ನು ಕಂಡು ಮೌನವಾಗಿರದೆ ತಮ್ಮ ದನಿಯನ್ನು ಎತ್ತಬೇಕು ಎಂದು ಕರೆ ನೀಡಿದರು. ಈ ವೇದಿಕೆಯ ಒಬ್ಬ ಪ್ರಮುಖ ಸಂಘಟಕರಾದ ಏಐಡಿಡಬ್ಲ್ಯುಎನ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ 'ಹಿಂಸೆಗೊಳಗಾದ ಮಕ್ಕಳ ಕೂಗನ್ನು ಮುಚ್ಚಿ ಹಾಕುವ ಮೌನವನ್ನೀಗ ಮುರಿಯಬೇಕಾಗಿದೆ' ಎಂದರು. ಬೇರೆಯವರ ಮನೆಯಲ್ಲೇನಾಗುತ್ತಿದೆ ಎಂಬ ಬಗ್ಗೆನಾವು ತಲೆಕೆಡಿಸಿಕೊಳ್ಳಬಾರದೆಂಬ ಹಳೆಯ ಸಂಪ್ರದಾಯವನ್ನೀಗ ಬಿಡಬೇಕಾಗಿದೆ ಎಂದರು.

ದಿಲ್ಲಿ ಬಿಜೆಪಿ ಸರಕಾರದ ಕಾರ್ಮಿಕ-ವಿರೋಧಿ ನೀತಿಗಳ ವಿರುದ್ಧ ಯಶಸ್ವಿ ಮುಷ್ಕರ

ನವಂಬರ್ 23ರಂದು ದಿಲ್ಲಿ ಮತ್ತು ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳ ಹಲವು ಲಕ್ಷ ಕಾರ್ಮಿಕರು ಕೆಲಸ ನಿಲ್ಲಿಸಿ ದಿಲ್ಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ಬಿಜೆಪಿ ಸರಕಾರದ ಕಾರ್ಮಿಕ-ವಿರೋಧಿ ನೀತಿಗಳ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು. ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಎಐಸಿಸಿಟಿಯು, ಯುಟಿಯುಸಿ(ಲೆನಿನ್ ಸರಣಿ), ಯುಟಿಯುಸಿ ಹಾಗೂ ಐಎಫ್‌ಟಿಯು ಜಂಟಿಯಾಗಿ ಈ ಮುಷ್ಕರಕ್ಕೆ ಕರೆ ನೀಡಿದ್ದವು. ಕಾರ್ಮಿಕರಿಗೆ ನ್ಯಾಯವಾಗಿ ಸಲ್ಲಬೇಕಾದ ತುಟ್ಟಿಭತ್ತೆಯನ್ನು ವಂಚಿಸುವ ಪ್ರಯತ್ನಗಳ ವಿರುದ್ಧ ಅವರು ಪ್ರತಿಭಟಿಸುತ್ತಿದ್ದರು. ಕನಿಷ್ಠ ನಾಗರಿಕ ಸೌಲಭ್ಯಗಳನ್ನು ಕುರಿತಾದ ಕಾನೂನುಗಳನ್ನು ಪಾಲಿಸಬೇಕು ಎಂದೂ ಅವರು ಒತ್ತಾಯಿಸುತ್ತಿದ್ದರು.

ದೊಡ್ಡ ಕೈಗಾರಿಕಾ ಪ್ರದೇಶಗಳಲ್ಲಿ ಚಟುವಟಿಕೆಗಳು ಸಂಪೂರ್ಣ ಸ್ತಬ್ಧವಾಗಿದ್ದವು. ಸಣ್ಣ ಹೋಟೆಲುಗಳು, ರೆಸ್ಟೋರೆಂಟುಗಳು, ಸಾರಿಗೆ ಕಚೇರಿಗಳು ಬಾಗಿಲು ಹಾಕಿದ್ದವು. ಕಾರ್ಮಿಕರು ತೋರ್ಪಡಿಸಿರುವ ಈ ತೀವ್ರ ಅತೃಪ್ತಿಯನ್ನು ಗಮನಕ್ಕೆ ತೆಗೆದುಕೊಂಡು ಅವರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಸಿಐಟಿಯು ಮದನ್ ಲಾಲ್ ಖುರಾನಾ ಸರಕಾರವನ್ನು ಆಗ್ರಹಪಡಿಸಿದೆ.

ಬಂಡವಾಳಶಾಹೀ ಆಳರಸರನ್ನು ನಡುಗಿಸುತ್ತಿರುವ
ಫ್ರೆಂಚ್ ಕಾರ್ಮಿಕರ ಶಕ್ತಿ ಪ್ರದರ್ಶನ

ನವಂಬರ್ 28. ಫ್ರಾನ್ಸ್‌ನ ಆರ್ಥಿಕ ಚಟುವಟಿಕೆ ಸಂಪೂರ್ಣ ಸ್ತಬ್ಧಗೊಂಡಿತು. ದೇಶದ ಪ್ರಮುಖ ಕಾರ್ಮಿಕ ಸಂಘಗಳು ನೀಡಿದ ಕರೆಗೆ ಓಗೊಟ್ಟು ಸಾರ್ವಜನಿಕ ಮತ್ತು ಖಾಸಗೀ ವಲಯದ ಉದ್ದಿಮೆಗಳ ನೌಕರರು, ಕಾರ್ಮಿಕರು ಸಾರ್ವತ್ರಿಕ ಮುಷ್ಕರ ಆರಂಭಿಸಿದರು. ನಾಲ್ಕೇ ದಿನಗಳ ಹಿಂದೆ ನವಂಬರ್ 24ರಂದು ಬೃಹತ್ ಮುಷ್ಕರಗಳು ದೇಶಾದ್ಯಂತ ನಡೆದವು. ಇತ್ತೀಚಿನ ದಿನಗಳಲ್ಲಿ ಫ್ರಾನ್ಸ್ ದೇಶದ ಕಾರ್ಮಿಕರು ಮತ್ತು ಅವರೊಡನೆ ವಿದ್ಯಾರ್ಥಿಗಳೂ ನಡೆಸಿರುವ ಹಲವಾರು ಯಶಸ್ವೀ ಮುಷ್ಕರಗಳು ಚಿರಾಕ್ ಸರಕಾರದ ಬಲಪಂಥೀಯ ಧಾಳಿಗೆ ಸವಾಲೊಡ್ಡಿವೆ ಮಾತ್ರವಲ್ಲ ಫ್ರಾನ್ಸಿನ ಮತ್ತು ಮುಂದುವರಿದ ಬಂಡವಾಳಶಾಹೀ ದೇಶಗಳ ಆಳರಸರನ್ನು ನಡುಗಿಸುತ್ತಿದೆ. ವಿದ್ಯಾರ್ಥಿಗಳು ಶಿಕ್ಷಣಕ್ಕೆ ನೀಡುವ ಹಣದಲ್ಲಿ ದೊಡ್ಡ ಕಡಿತ ಮಾಡಿರುವುದರ ವಿರುದ್ಧ ಬೀದಿಗಿಳಿದಿದ್ದಾರೆ. ನವಂಬರ್ 30ರಂದು ಫ್ರಾನ್ಸಿನಾದ್ಯಂತ ವಿದ್ಯಾರ್ಥಿಗಳ ಮತಪ್ರದರ್ಶನಗಳು ನಡೆದವು.

ಈ ಹೋರಾಟಗಳ ಪ್ರಸ್ತುತ ಘಟ್ಟ ಅಕ್ಟೋಬರ್ 10ರಂದು ಆರಂಭವಾಯಿತು. ಅಂದು ಸಾರ್ವಜನಿಕ ವಲಯದ ನೌಕರರು ವೇತನ ಸ್ತಂಭನ, ಪೆನ್ಶನ್ ಸ್ತಂಭನ ಹಾಗೂ ಸಾರ್ವಜನಿಕ ಕಲ್ಯಾಣ ಸೌಲಭ್ಯಗಳಲ್ಲಿ ಕಡಿತ ಮಾಡುವ ಚಿರಾಕ್ ಸರಕಾರದ ಪ್ರಯತ್ನಗಳ ವಿರುದ್ಧ ಮುಷ್ಕರ ನಡೆಸಿದರು.

ನವಂಬರ್ 24ರ ಮುಷ್ಕರ ಇನ್ನೂ ವ್ಯಾಪಕವಾಗಿ ನಡೆಯಿತು. ಖಾಸಗೀ ವಲಯದ ಕಾರ್ಮಿಕರೂ ಸಾರ್ವಜನಿಕ ವಲಯದ ಕಾರ್ಮಿಕರೊಂದಿಗೆ ಸೇರಿ ಮುಷ್ಕರ ನಡೆಸಿದರು. ರೈಲು, ವಿಮಾನ, ರಸ್ತೆ ಸಾರಿಗೆ ಎಲ್ಲವೂ ಅಸ್ತವ್ಯಸ್ತಗೊಂಡವು. ಬ್ಯಾಂಕುಗಳು, ಅಂಚೆ ಕಚೇರಿಗಳು, ಆಸ್ಪತ್ರೆಗಳು, ಸರಕಾರೀ ಕಚೇರಿಗಳು, ಶಾಲೆಗಳು ಎಲ್ಲವೂ ಮುಚ್ಚಿದ್ದವು. ಮಿಲಿಯಾಂತರ ಕಾರ್ಮಿಕರು, ನೌಕರರು ಈ ಮುಷ್ಕರದಲ್ಲಿ ಭಾಗವಹಿಸಿದ್ದರು.

ಪೋಲೀಸ್ ಅಂದಾಜಿನ ಪ್ರಕಾರ 2.3 ಲಕ್ಷ ಮಂದಿ ಸರಕಾರದ ಖಾಸಗೀಕರಣದ ನೀತಿಗಳು, ಕಾರ್ಮಿಕರ ಸೌಲಭ್ಯಗಳನ್ನು ಕಡಿತ ಮಾಡುವ ಧೋರಣೆಗಳ ವಿರುದ್ಧ ಮತಪ್ರದರ್ಶನದಲ್ಲಿ ಪಾಲ್ಗೊಂಡರು. ರಾಜಧಾನಿ ಪ್ಯಾರಿಸಿನಲ್ಲಿ 50 ಸಾವಿರ ಮಂದಿ ನಗರದ ಕೇಂದ್ರ ಭಾಗದಲ್ಲಿ ಕಲೆತು ಅಧ್ಯಕ್ಷ ಚಿರಾಕ್ ಹಾಗೂ ಪ್ರಧಾನಮಂತ್ರಿ ಜುಪ್ಪೆಯವರ ಕ್ರಮಗಳ ವಿರುದ್ಧ ಹೋರಾಡುವ ದೃಢ ನಿರ್ಧಾರವನ್ನು ವ್ಯಕ್ತಗೊಳಿಸಿದರು. "ಬಜೆಟ್ ಕೊರತೆ ಕಮ್ಮಿ ಮಾಡುವುದಕ್ಕೆ ನನ್ನ ಆದ್ಯತೆ" ಎಂದು ಅಧ್ಯಕ್ಷ ಚಿರಾಕ್ ಹೇಳಿದ್ದರು. ಪ್ರಧಾನಮಂತ್ರಿಯಾಗಿ ನೇಮಕಗೊಂಡ ಕೂಡಲೇ ಜುಪ್ಪೆಯವರು ಈ ಆದ್ಯತೆಯನ್ನು ಜ್ಯಾರಿಗೊಳಿಸಲು 'ಸುಧಾರಣೆ'ಗಳನ್ನು ಆರಂಭಿಸಿಯೂ ಬಿಟ್ಟರು. ಬಂಡವಾಳಶಾಹೀ ಆಳರಸರ ಶಬ್ದಕೋಶದಲ್ಲಿ ಬಜೆಟ್ ಕೊರತೆ ಕಡಿತ ಮಾಡಲು ಇರುವ ಏಕೈಕ 'ಸುಧಾರಣೆ'ಯೆಂದರೆ ಸಾಮಾಜಿಕ ಖರ್ಚುಗಳ ಅಂದರೆ ಜನಸಾಮಾನ್ಯರಿಗೆ ನೀಡುವ ಸೌಲಭ್ಯಗಳಲ್ಲಿ ಕಡಿತ. ವೇತನ ಸ್ತಂಭನ, ಕೆಲವು ಸಾಮಾಜಿಕ ಭದ್ರತಾ ಕ್ರಮಗಳಿಗೆ ಕಾರ್ಮಿಕರು ನೀಡಬೇಕಾದ ಪಾಲನ್ನು ಹೆಚ್ಚಿಸುವುದು ಮತ್ತಿತರ ಕ್ರಮಗಳನ್ನು ಪ್ರಧಾನ ಮಂತ್ರಿ ಜುಪ್ಪೆ ಪ್ರಕಟಗೊಳಿಸಿದರು. ಫ್ರೆಂಚ್ ಕಾರ್ಮಿಕರು ಈಗ ಹೋರಾಟದ ಕಣಕ್ಕಿಳಿದಿರುವುದು ಈ ನೀತಿಗಳ ವಿರುದ್ಧ.

ಈ ಹೋರಾಟ, "ನವಂಬರ್ 24ರ ಮತಪ್ರದರ್ಶನ ಅತ್ಯಂತ ಅರ್ಥಪೂರ್ಣವಾದದ್ದು. ಏಕೆಂದರೆ ಇದರಲ್ಲಿ ಫ್ರೆಂಚ್ ಜನತೆಗೆ ಬಹಳ ಮಹತ್ವದ್ದಾದ ಸಾಮಾಜಿಕ ಭದ್ರತಾ ವ್ಯವಸ್ಥೆಯ ರಕ್ಷಣೆಯ ಪ್ರಶ್ನೆ ಅಡಕವಾಗಿದೆ" ಎನ್ನುತ್ತಾರೆ ಕಮ್ಯುನಿಸ್ಟ್ ನೇತೃತ್ವದ ಸಾರಿಗೆ ಕಾರ್ಮಿಕರ ಒಕ್ಕೂಟ(CGT)ದ ಮುಖಂಡ ಲೂಯಿವಿಯೆನೆಟ್.

ರೈಲು ಮುಷ್ಕರ: ನವಂಬರ್ 24ರಿಂದ ಫ್ರಾನ್ಸಿನ ರೈಲು ಕಾರ್ಮಿಕರು, ಸತತ ಮುಷ್ಕರದಲ್ಲಿದ್ದಾರೆ. ವೇತನ ಸ್ತಂಭನ, ಕಾರ್ಮಿಕರ ರಿಟ್ರೆಂಚ್ ಮೆಂಟ್ ಹಾಗೂ 'ಲಾಭಕರ'ವಲ್ಲದ ರೈಲು ಮಾರ್ಗಗಳನ್ನು ರದ್ದು ಮಾಡುವ ಸರಕಾರದ ಪ್ರಯತ್ನಗಳ ವಿರುದ್ಧ ಈ ಮುಷ್ಕರ. ರೈಲ್ವೇ ಆಡಳಿತ ನವಂಬರ್ 26ರಂದು ರೈಲ್ವೇ ಕಾರ್ಮಿಕ ಸಂಘಗಳೊಡನೆ ಮಾತುಕತೆ ಆರಂಭಿಸಿದರೂ ಕೆಲಸದ ಭದ್ರತೆ ಹಾಗೂ ಪೆನ್ಶನ್ ರಕ್ಷಣೆಯ ಭರವಸೆ ಆಡಳಿತದಿಂದ ದೊರೆಯದ್ದರಿಂದ ಮುಷ್ಕರ ಮುಂದುವರೆಯುತ್ತಿದೆ.

ವಿದ್ಯಾರ್ಥಿಗಳ ಮುಷ್ಕರ: ಕಳೆದ ಕೆಲವು ತಿಂಗಳಿಂದ ವಿದ್ಯಾರ್ಥಿಗಳೂ ದೇಶಾದ್ಯಂತ ಬೀದಿಗಿಳಿದಿದ್ದಾರೆ. ಫ್ರಾನ್ಸಿನ ಈಗಿನ ಬಲಪಂಥೀಯ ಆಳರಸರ ನೀತಿಗಳಿಂದಾಗಿ ಹಾಗೂ ಕಾಲೇಜುಗಳಿಗೆ ಹೆಚ್ಚು ಹಣ ನೀಡಬೇಕು, ಅಧ್ಯಾಪಕರನ್ನು ನೀಡಬೇಕು ಎಂದು ಅವರು ಒತ್ತಾಯಿಸುತ್ತಿದ್ದಾರೆ. ಅರವತ್ತರ ದಶಕದಲ್ಲಿ ಫ್ರಾನ್ಸನ್ನು ನಡುಗಿಸಿದ ವಿದ್ಯಾರ್ಥಿ ಆಂದೋಲನದ ನಂತರ ಮೊದಲ ಬಾರಿಗೆ ದೇಶದ 90 ವಿಶ್ವವಿದ್ಯಾಲಯಗಳಲ್ಲಿ ಅತ್ಯಂತ ದೊಡ್ಡ ವಿದ್ಯಾರ್ಥಿ ಮತಪ್ರದರ್ಶನಗಳು ನಡೆಯುತ್ತಿವೆ.

ಈ ಬಾರಿಯ ಕಾರ್ಮಿಕರ ಹಾಗೂ ವಿದ್ಯಾರ್ಥಿಗಳ ಹೋರಾಟದ ಒಂದು ಗಮನಾರ್ಹ ಸಂಗತಿಯೆಂದರೆ ಸಾರ್ವಜನಿಕರಿಂದ ಅದಕ್ಕೆ ದೊರೆಯುತ್ತಿರುವ ಬೆಂಬಲ. ಮುಷ್ಕರಗಳಿಂದ ಅನಾನುಕೂಲವಾಗಿದ್ದರೂ ಒಟ್ಟಾರೆಯಾಗಿ ದೇಶದ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಕಳಚಿ ಹಾಕುವ ಪ್ರಯತ್ನಗಳ ವಿರುದ್ಧ ಈ ಹೋರಾಟವನ್ನು ಬೆಂಬಲಿಸಿರುವುದು ಅಭಿಪ್ರಾಯ ಸಂಗ್ರಹಣೆಗಳಿಂದ ಕಂಡು ಬಂದಿದೆ.

ಆದರೆ ಫ್ರೆಂಚ್ ಸರಕಾರ ಇನ್ನೂ ಮೊಂಡುತನ ಪ್ರದರ್ಶಿಸುತ್ತಿದೆ. ಇದಕ್ಕೆ ಒಂದು ಕಾರಣ ಯುರೋಪಿಯನ್ ಸಂಘ ಹಾಗೂ ಅಮೇರಿಕಾದ ಒತ್ತಡ. 1999ರಲ್ಲಿ ಏಕೈಕ ಯುರೋಪಿಯನ್ ನಾಣ್ಯ ವ್ಯವಸ್ಥೆಯಲ್ಲಿ ಫ್ರಾನ್ಸ್ ಪಾಲ್ಗೊಳ್ಳಬೇಕಾದರೆ ಬಜೆಟ್ ಕೊರತೆಗಳನ್ನು ಕಮ್ಮಿ ಮಾಡುತ್ತೇನೆಂಬ ತನ್ನ ಆಶ್ವಾಸನೆಯನ್ನು ಫ್ರೆಂಚ್ ಸರಕಾರ ಈಡೇರಿಸಬೇಕೆಂದು ಇವು ಒತ್ತಡ ಹಾಕುತ್ತಿವೆ. ಹಿಂದೆ ಜರ್ಮನಿ ಮತ್ತು ಬ್ರಿಟನ್ ಮಾಡಿದಂತೆ ತಾನೂ ಬಜೆಟ್ ಕೊರತೆಯನ್ನು ಕಡಿತ ಮಾಡಲು ಪ್ರಯತ್ನ ಮುಂದುವರೆಸುವುದಾಗಿ ಚಿರಾಕ್ ಹೇಳಿದ್ದಾರೆ. ಸೋವಿಯತ್ ಒಕ್ಕೂಟ ಕಳಚಿಬಿದ್ದ ನಂತರ ಬೇರೆಲ್ಲಾ ಮುಂದುವರಿದ ಬಂಡವಾಳಶಾಹಿ ದೇಶಗಳು ಮಾಡಿದಂತೆ ಫ್ರೆಂಚ್ ಆಳರಸರು ಕೂಡಾ ಶ್ರೀಮಂತರ ಮೇಲಿನ ತೆರಿಗೆಯನ್ನು ಹೆಚ್ಚಿಸಿ ಬಜೆಟ್ ಕೊರತೆ ತಗ್ಗಿಸುವ ಬದಲು ಬಡವರ ಜೀವನಮಟ್ಟದ ಮೇಲೆ ಧಾಳಿ ಮಾಡಿ ಈ ಕೊರತೆ ತಗ್ಗಿಸುವ ಸಲಹೆಯನ್ನೇ ಸ್ವೀಕರಿಸಿದೆ. ಆದರೆ ಫ್ರಾನ್ಸಿನಲ್ಲಿ ಕಾರ್ಮಿಕ ಆಂದೋಲನದ ಗಟ್ಟಿ ನೆಲೆಯ ಹಿನ್ನೆಲೆಯಲ್ಲಿ ಫ್ರಾನ್ಸಿನ ಸಾಮಾಜಿಕ ಕಲ್ಯಾಣ ವ್ಯವಸ್ಥೆಯನ್ನು ಕಳಚಿ ಹಾಕುವುದು ಅಷ್ಟು ಸುಲಭವೇನಲ್ಲ.

ಟರ್ಕಿಯಲ್ಲೂ ಶಿಕ್ಷಣ ಖಾಸಗೀಕರಣದ ರೋಗ - ವಿದ್ಯಾರ್ಥಿಗಳ ಪ್ರತಿಭಟನೆ

ಭಾರತದಂತೆ ಟರ್ಕಿಯಲ್ಲೂ ಶಿಕ್ಷಣ ವ್ಯವಸ್ಥೆ ಖಾಸಗೀಕರಣದ ಶಕ್ತಿಗಳ ಆಕ್ರಮಣ ಎದುರಿಸುತ್ತಿದೆ. ವಿದ್ಯಾರ್ಥಿಗಳು ದೇಶಾದ್ಯಂತ ಅದರ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಅಲ್ಲಿಯ ಪ್ರಗತಿಪರ ಶಕ್ತಿಗಳಿಂದ ದೊರೆತ ವರದಿಗಳ ಪ್ರಕಾರ ಕಳೆದ ಕೆಲವು ವಾರಗಳಲ್ಲಿ ರಾಜಧಾನಿ ಅಂಕಾರಾ, ಇಸ್ತಾಂಬುಲ್ ಮತ್ತಿತರ ನಗರಗಳ ವಿಶ್ವವಿದ್ಯಾಲಯ, ಕಾಲೇಜುಗಳು ಹಾಗೂ ಶಾಲೆಗಳಲ್ಲಿ ವಿದ್ಯಾರ್ಥಿ ಪ್ರತಿಭಟನೆಗಳು ನಡೆದಿವೆ.

ಖಾಸಗೀಕರಣದ ಭಾಗವಾಗಿ ಕಳೆದ ವರ್ಷ ಟರ್ಕಿ ಸರಕಾರ "ಶಿಕ್ಷಣಕ್ಕೆ ನೆರವು" ಎಂಬ ವ್ಯವಸ್ಥೆ ಆರಂಭಿಸಿತು. ಇದರರ್ಥ ಶಿಕ್ಷಣದ ಖರ್ಚಿಗೆ ವಿದ್ಯಾರ್ಥಿಗಳಿಂದ ಹಣ ಕೇಳುವುದು. ಈ ದೇಶದ ಸಂವಿಧಾನ ಶಿಕ್ಷಣ ಹಕ್ಕಿನ ಭರವಸೆ ನೀಡಿದೆಯಾದರೂ ಶಿಕ್ಷಣ ನೀಡಬೇಕಾದ ಸರಕಾರಿ ವಿದ್ಯಾಸಂಸ್ಥೆಗಳಲ್ಲೂ ವಿದ್ಯಾರ್ಥಿಗಳು ಬಹಳ ಹಣ ತೆರಬೇಕಾಗಿದೆ. ಈ ವರ್ಷ ಅದನ್ನು 350% ಹೆಚ್ಚಿಸಲಾಯಿತು. ಇದರಿಂದ ಕಾರ್ಮಿಕ ವರ್ಗದ ಹಿನ್ನೆಲೆಯ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯುವುದೇ ಅಸಾಧ್ಯವಾಗಿ ಬಿಟ್ಟಿದೆ.

ನವಂಬರ್ 11ರಂದು ಇಝ್ಮಿರ್ ನ ಇಗೆ ವಿಶ್ವವಿದ್ಯಾಲಯದಲ್ಲಿ ಖಾಸಗೀಕರಣದ ವಿರುದ್ಧ ಮೊದಲ ಪ್ರತಿಭಟನೆ ನಡೆಯಿತು. ಎಸ್.ಐ.ಪಿ(ಸಮಾಜವಾದಿ ಶಕ್ತಿಯ ಪಕ್ಷ) ಹಾಗೂ ಇತರ ಪ್ರಗತಿಪರ ಸಂಘಟನೆಗಳ ಬೆಂಬಲದಿಂದ ಇತರ ವಿಶ್ವವಿದ್ಯಾಲಯ, ಕಾಲೇಜು, ಶಾಲೆಗಳಲ್ಲೂ "ಶಿಕ್ಷಣಕ್ಕೆ ಹಣ ತೆರಬೇಡಿ" ಘೋಷಣೆಯೊಂದಿಗೆ ಹೋರಾಟ ಹರಡುತ್ತಿದೆ.

ಮತಪ್ರದರ್ಶನಗಳ ವೇಳೆಯೂ ಅಂಕುರಾ ಮತ್ತು ಇಸ್ತಾಂಬುಲ್ ನಲ್ಲಿ ಪೋಲೀಸರು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದುದರ ಪರಿಣಾಮವಾಗಿ 150 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. 70 ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಬೋಸ್ಫೋರಸ್ ವಿಶ್ವವಿದ್ಯಾಲಯ, ಇಸ್ತಾಂಬುಲ್ ವಿಶ್ವವಿದ್ಯಾಲಯ, ಇಸ್ತಾಂಬುಲ್ ತಾಂತ್ರಿಕ ವಿಶ್ವವಿದ್ಯಾಲಯ, ಮಧ್ಯ-ಪೂರ್ವ ತಾಂತ್ರಿಕ ವಿಶ್ವವಿದ್ಯಾಲಯಗಳಲ್ಲೂ ಪ್ರತಿಭಟನಾ ಸಭೆಗಳು ನಡೆದಿವೆ. ಇದರ ಜತೆ ಜತೆಗೇ ಪಠ್ಯ ಪುಸ್ತಕಗಳ ವಿಪರೀತ ಬೆಲೆಗಳ ವಿರುದ್ಧವೂ ಪ್ರತಿಭಟನೆಗಳು ನಡೆಯುತ್ತಿವೆ. ಪುಸ್ತಕ ಕೊಳ್ಳಲು ಸಾಧ್ಯವಿಲ್ಲದವರಿಗೆ ಪುಸ್ತಕಗಳನ್ನು ಒದಗಿಸಲು ವಂತಿಗೆಗಳನ್ನು ಸಂಗ್ರಹಿಸುತ್ತಿದ್ದಾರೆ. ಮೇಲೆ ಹೇಳಿದ ಎಸ್.ಐ.ಪಿ. ಪಕ್ಷದ "ವಿಚಾರ ಮತ್ತು ಕ್ರಿಯೆ" ಪತ್ರಿಕೆ ವಿಶ್ವವಿದ್ಯಾಲಯಗಳಲ್ಲಿ ಈ ಪ್ರಚಾರ-ಪ್ರಕ್ಷೋಭೆ ನಡೆಸುತ್ತಿದೆ.

ಅಮೇರಿಕನ್ ನೆಲೆಗೆ ಜಪಾನಿನಲ್ಲಿ ವಿರೋಧ ಹೆಚ್ಚುತ್ತಿದೆ

ಬಾಲಕಿಯೊಬ್ಬಳ ಮೇಲೆ ಅಮೇರಿಕನ್ ನೆಲೆಯ ಮೂವರು ಸೈನಿಕರು ನಡೆಸಿದ ಅತ್ಯಾಚಾರದಿಂದ ಸಿಟ್ಟಿಗೆದ್ದಿರುವ ಜಪಾನಿನ ಒಕಿನಾವಾದ ಮಂದಿ ಅಮೇರಿಕನ್ ನೆಲೆಗೆ ನೀಡಿರುವ 35 ಹೆಕ್ಟೇರ್ ಜಮೀನಿನ ಲೀಸನ್ನು ನವೀಕರಿಸಲು ನಿರಾಕರಿಸುತ್ತಿದ್ದಾರೆ. ಇದು 'ಸಮಾಜವಾದಿ' ಪ್ರಧಾನಮಂತ್ರಿ ಮುರಾಯಾಮಾಗೆ ತಲೆನೋವು ತಂದಿದೆ. ಲೀಸನ್ನು ನವೀಕರಿಸ ಬಯಸದ 35 ಮಂದಿಯ ಪರವಾಗಿ 'ನೀವೇ ಲೀಸ್ ಒಪ್ಪಂದಕ್ಕೆ ಸಹಿ ಹಾಕಿ' ಎಂದು ಪ್ರಧಾನ ಮಂತ್ರಿ ಒಕಿನಾವಾದ ಗವರ್ನರ್ ಗೆ ಆದೇಶ ನೀಡುವ ಯೋಚನೆಯಲ್ಲಿದ್ದಾರೆ. ಆದರೆ ಒಕಿನಾವಾದ ಗವರ್ನರ್ ಈ ಆದೇಶ ಪಾಲಿಸುವ ಲಕ್ಷಣಗಳಿಲ್ಲ. ಇದರಿಂದ ಈ ವಿಷಯ ಕೋರ್ಟುಗಳ ಕಟ್ಟೆ ಹತ್ತಬಹುದು. ಜಪಾನ್ ಕೇಂದ್ರ ಸರಕಾರದ ವಿರುದ್ಧ ಸಂವಿಧಾನಿಕ ಆಧಾರದಲ್ಲಿ ಹೋರಾಡುವುದಾಗಿ ಗವರ್ನರ್ ಹೇಳಿದ್ದಾರೆ ಎಂದು ಚೀಣೀ ಸುದ್ದಿ ಸಂಸ್ಥೆ ಕ್ಸಿನ್ ಹುವಾ ತಿಳಿಸಿದೆ.

ಜಾಫ್ನಾದಲ್ಲಿ ಶ್ರೀಲಂಕಾ ಬಾವುಟ: ಆದರೆ.........

ಜಾಫ್ನಾದಲ್ಲಿ ಐದು ವರ್ಷಗಳ ನಂತರ ಶ್ರೀಲಂಕಾದ ರಕ್ಷಣಾ ಮಂತ್ರಿ ಶ್ರೀಲಂಕಾದ ಬಾವುಟ ಹಾರಿಸಿದ ಕೆಲವೇ ಸಮಯದೊಳಗೆ 23 ವಿಶೇಷ ತರಬೇತಿ ಹೊಂದಿದ ಪೋಲೀಸ್ ಕಮಾಂಡೋಗಳನ್ನು ಹೊಂಚುಹಾಕಿ ಕೊಂದ ಘಟನೆಯೂ ವರದಿಯಾಯಿತು. ಶ್ರೀಲಂಕಾದ ಸೇನೆಗೆ ಜಯ ದೊರೆತರೂ ಉತ್ತರ ಭಾಗದ ಕಾಡುಗಳಲ್ಲಿ ಸಮರ ಮುಂದುವರೆಯುವಂತೆ ಕಾಣುತ್ತದೆ. ಈ ನಡುವೆ ಅಧ್ಯಕ್ಷರಾದ ಚಂದ್ರಿಕಾ ಕುಮಾರತುಂಗಾ ಎಲ್.ಟಿ.ಟಿ.ಇ. ಶಸ್ತ್ರಗಳನ್ನು ಕೆಳಗಿಟ್ಟರೆ ಎಲ್ಲರಿಗೂ ಕ್ಷಮಾದಾನ ನೀಡುವುದಾಗಿ ಮತ್ತೆ ಹೇಳಿದ್ದನ್ನು ಎಲ್.ಟಿ.ಟಿ.ಇ. ಮತ್ತೆ ತಿರಸ್ಕರಿಸಿದೆ(ಕಳೆದ ಸಂಚಿಕೆಯಲ್ಲಿ "ಯುದ್ಧ ಮುಗಿದರೂ ಶಾಂತಿ ನೆಲೆಸಿತು ಅಥವಾ ಸಮಸ್ಯೆ ಪರಿಹಾರವಾಯಿತು ಎಂದಲ್ಲ ಎಂದು ಶ್ರೀಲಂಕಾ ಅಧ್ಯಕ್ಷೆ ಹೇಳಿದ್ದಾರೆ" ಎಂದಿರಬೇಕಾದ್ದು ತಪ್ಪಾಗಿ ಮುದ್ರಣಗೊಂಡಿದೆ. ಇದಕ್ಕಾಗಿ ವಿಷಾದಿಸುತ್ತೇವೆ-ವ್ಯವಸ್ಥಾಪಕರು) 50 ದಿನಗಳ ಈ ಯುದ್ಧದಲ್ಲಿ 2500 ಮಂದಿ ಸತ್ತಿದ್ದಾರೆ, 7000 ಮಂದಿ ಗಾಯಗೊಂಡಿದ್ದಾರೆ.

ಶ್ರೀಲಂಕಾದ ತಮಿಳರ ಪ್ರಧಾನ ಹಾಗೂ ನ್ಯಾಯಪೂರ್ಣ ಸಮಸ್ಯೆಗಳು ಅಂದರೆ ಅವರ ಪ್ರತ್ಯೇಕ ಅನನ್ಯತೆಗೆ ಮಾನ್ಯತೆ ನೀಡಬೇಕು, ಐಕ್ಯ ಶ್ರೀಲಂಕಾದ ಚೌಕಟ್ಟಿನೊಳಗೆ ಗರಿಷ್ಠ ಸ್ವಾಯತ್ತತೆ ನೀಡಬೇಕು ಎಂಬುದು ಇನ್ನೂ ಪರಿಹಾರ ಕಾಣದ ಬಗ್ಗೆ ಭಾರತೀಯ ಜನತೆಗೆ ತೀವ್ರ ಆತಂಕವಾಗಿದೆ ಎಂದು ಸಿಪಿಐ(ಎಂ) ತಮಿಳುನಾಡು ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿಕೆಯೊಂದರಲ್ಲಿ ಖೇದ ವ್ಯಕ್ತಪಡಿಸಿದೆ. ಶ್ರೀಲಂಕಾದಲ್ಲಿ ಯುದ್ಧ ತೀವ್ರಗೊಂಡು ಶ್ರೀಲಂಕಾ ತಮಿಳರ ಮೇಲೆ ಅಭೂತಪೂರ್ವ ಸಂಕಟಗಳನ್ನು ಹೇರಿದೆ. ಲಕ್ಷಾಂತರ ಗಂಡಸರು, ಹೆಂಗಸರು, ಮಕ್ಕಳು ಜಾಫ್ನಾ ಬಿಟ್ಟೋಡಬೇಕಾಗಿ ಬಂದಿದೆ. ಹಲವಾರು ಜೀವಗಳ, ಆಸ್ತಿಪಾಸ್ತಿಗಳು ನಷ್ಟವಾಗಿದೆ. ಹಸಿವಿನ ಹಾಹಾಕಾರ ಉಂಟಾಗಿದೆ. ಜನ ಸಾಂಕ್ರಾಮಿಕ ರೋಗಗಳಿಗೆ ಗುರಿಯಾಗಿದ್ದಾರೆ. ಸರಿಯಾದ ವೈದ್ಯಕೀಯ ಸೌಲಭ್ಯ ದೊರೆಯುತ್ತಿಲ್ಲ ಎಂಬ ಬಗ್ಗೆ ಅತೀವ ದುಃಖ ವ್ಯಕ್ತಪಡಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸಂಕಟಗ್ರಸ್ತ ಶ್ರೀಲಂಕಾ ತಮಿಳರಿಗೆ ವೈದ್ಯಕೀಯ ಪರಿಹಾರ ಸಾಮಗ್ರಿ ಕಳಿಸುವುದಾಗಿ ಮತ್ತೆ ಹೇಳಿದೆ. ಶ್ರೀಲಂಕಾ ಸರಕಾರ ದೊಡ್ಡ ಪ್ರಮಾಣದಲ್ಲಿ ವೈದ್ಯಕೀಯ ಸಹಾಯವನ್ನು, ಜೀವನಾವಶ್ಯಕ ವಸ್ತುಗಳನ್ನು ಅಲ್ಲಿಗೆ ಕಳಿಸಬೇಕು ಎಂದು ಕಾರ್ಯದರ್ಶಿ ಮಂಡಳಿ ಮನವಿ ಮಾಡಿದೆ.

ಜನಗಳ ಈ ಕಷ್ಟಕೋಟಲೆಗಳನ್ನು ದೂರ ಮಾಡಿ ಶಾಂತಿ ಹಾಗೂ ಸಾಮಾನ್ಯ ಜನಜೀವನ ನೆಲೆಗೊಳಿಸಲು ಮಾತುಕತೆಯ ಮೂಲಕ ರಾಜಕೀಯ ಇತ್ಯಾರ್ಥಕ್ಕೆ ಬರಬೇಕಾದ ಸಂದರ್ಭದಲ್ಲಿ ಎಲ್.ಟಿ.ಟಿ.ಇ. ಮುಖಂಡ ಪ್ರಭಾಕರನ್ "ಶಾಂತಿ ಮಾತುಕತೆಗಳ ಬಾಗಿಲು ಭದ್ರವಾಗಿ ಮುಚ್ಚಿದೆ" ಎಂದಿರುವುದು ಸರಕಾರದ ವಿರುದ್ಧ ಯುದ್ಧ ಮುಂದುವರಿಸಲು ಕರೆ ನೀಡಿರುವುದು ದುರದೃಷ್ಟಕರ ಎಂದಿರುವ ಕಾರ್ಯದರ್ಶಿ ಮಂಡಳಿ ಎಲ್.ಟಿ.ಟಿ.ಇ.ಯ ಈ ನಿಲುವು ಶ್ರೀಲಂಕಾದ ತಮಿಳರ ಹಿತಾಸಕ್ತಿಗಳನ್ನು ರಕ್ಷಿಸುವುದಿಲ್ಲ ಎಂಬುದನ್ನು ಗಮನಿಸಬೇಕು ಎಂದು ಶ್ರೀಲಂಕಾ ತಮಿಳರಿಗೆ ಮನವಿ ಮಾಡಿದೆ.

ಅದೇ ವೇಳೆಗೆ ಕಾರ್ಯದರ್ಶಿ ಮಂಡಳಿ ಶ್ರೀಲಂಕಾ ಸರಕಾರ ಈ ಜನಾಂಗ ಸಂಘರ್ಷಕ್ಕೆ ಒಂದು ರಾಜಕೀಯ ಇತ್ಯರ್ಥ ಪಡೆಯುವ ಪ್ರಯತ್ನ ಮುಂದುವರಿಸಿ ಶಾಂತಿ ನೆಲೆಸಿ ಲಕ್ಷಾಂತರ ಶ್ರೀಲಂಕಾ ತಮಿಳರನ್ನು ಹಾಹಾಕಾರದಿಂದ ಉಳಿಸಬೇಕು ಎಂದು ಕರೆ ನೀಡಿದೆ.

ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್‌ನ ಯೋನ್‌ಸೈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತಪ್ರದರ್ಶನ ಮಾಡುವುದನ್ನು ತಡೆದ ಪೋಲೀಸು ಹೆಲ್ಮೆಟ್‌ಗಳಿಗೆ ಕೈ ಹಾಕಿದ್ದಾರೆ. ಈ ವಿದ್ಯಾರ್ಥಿಗಳು ಲಂಚ ಸ್ವೀಕರಿಸಿದ ಆರೋಪ ಸಾಬೀತಾಗಿರುವ ಮಾಜಿ ಅಧ್ಯಕ್ಷ ರೋಹ್ ಟೇವೂಗೆ ಅತ್ಯಂತ ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ.



KRNM/BGS-405 MAG (2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು
ಫೋನ್ ನಂ. 2236462

ಸರಕಾರದ ಪೆನ್ಶನ್ ಯೋಜನೆ: ಏಕೆ ಈ ಸುಳ್ಳು ಪ್ರಚಾರ?

ಕಾರ್ಮಿಕ ಮಂತ್ರಿಗೆ ಸಿಐಟಿಯು ಮುಖಂಡರ ಪತ್ರ

ಸರಕಾರ ತರಬೇಕೆಂದಿರುವ ಪೆನ್ಶನ್ ಯೋಜನೆ ನಿಜವಾಗಿಯೂ ಕಾರ್ಮಿಕರಿಗೆ ಪ್ರಯೋಜನಕಾರಿಯಾಗುವಂತೆ ಅದನ್ನು ಆಮೂಲಾಗ್ರವಾಗಿ ಸರಿಪಡಿಸಿ ಪುನರ್ರಚಿಸುವವರೆಗೆ ಸರ್ಕಾರ ಭವಿಷ್ಯನಿಧಿ ಹಾಗೂ ಇತರ ಅಂಶಗಳ ಶಾಸನ,1952 ಕ್ಕೆ ತರಬೇಕೆಂದಿರುವ ತಿದ್ದುಪಡಿಯ ಪರಿಶೀಲನೆಯನ್ನು ಮುಂದೂಡಬೇಕು ಎಂದು ಸಿಐಟಿಯು ಮುಖಂಡ ಜೀವನ್ ರಾಯ್ ಕಾರ್ಮಿಕ ಮಂತ್ರಿ ಜಿ.ವೆಂಕಟಸ್ವಾಮಿಯವರಿಗೆ ಒಂದು ಪತ್ರ ಬರೆದು ಒತ್ತಾಯಿಸಿದ್ದಾರೆ. ಸರ್ಕಾರಕ್ಕೆ ನಿವೃತ್ತಿ ವೇತನವನ್ನು ಮೂರನೇ ಸೌಲಭ್ಯವಾಗಿ ಕೊಡಲು ಸಾಧ್ಯವಾಗದಿದ್ದರೂ ಕಾರ್ಮಿಕರೂ ವಂತಿಗೆ ನೀಡುವ ಭವಿಷ್ಯನಿಧಿಯೆಂಬ ಎರಡನೇ ಸೌಲಭ್ಯವನ್ನೂ ಕೂಡ ದುರ್ಬಲ ಗೊಳಿಸುವುದು ಸರ್ವಥಾ ಅಸಮರ್ಥನೀಯ, ಸರಕಾರ ಪ್ರಸ್ತಾವಿಸಿರುವ ಪೆನ್ಶನ್ ಯೋಜನೆ ಮತ್ತು ವಿಶೇಷಾಜ್ಞೆ ಇದನ್ನೇ ಮಾಡಿದೆ ಎಂದು ಕಾಂ.ಜೀವನ್ ರಾಯ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ

ಅಸಂಘಟಿತರ ಬಗ್ಗೆ ಸುಳ್ಳು ಪ್ರಚಾರ

ತಾನು ಮುಂದಿಟ್ಟ ಹೊಸ ಯೋಜನೆಯ ಆಕರ್ಷಣೆಯನ್ನು ಹೆಚ್ಚಿಸಲು ಸರಕಾರ ಸುಳ್ಳು ಮಾಹಿತಿ ನೀಡುತ್ತಿರುವುದಾಗಿ ಸಿಐಟಿಯು ಮುಖಂಡರು ತಮ್ಮ ಪತ್ರದಲ್ಲಿ ತಿಳಿಸುತ್ತಾ ಈ ಹೊಸ ಯೋಜನೆ ಬಹಳ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರನ್ನು ಭವಿಷ್ಯನಿಧಿ ವ್ಯಾಪ್ತಿಯಲ್ಲಿ ತರುತ್ತದೆ, ಪೆನ್ಶನ್ ಯೋಜನೆಯನ್ನು ಅವರಿಗೂ ವಿಸ್ತರಿಸಲಾಗುತ್ತದೆ ಎಂದು ಸರಕಾರ ಹೇಳಿಕೊಳ್ಳುತ್ತಿರುವುದನ್ನು ಖಂಡಿಸಿದ್ದಾರೆ.

ನಿಜ ಸಂಗತಿಯೆಂದರೆ ಸರಕಾರ ವಿಶೇಷಾಜ್ಞೆಯಾಗಲಿ, ಈ ಹೊಸ ಯೋಜನೆಯಾಗಲಿ ಈಗಾಗಲೇ ಮೇಲೆ ಹೇಳಿದ 1982 ರ ಶಾಸನದ ವ್ಯಾಪ್ತಿಯೊಳಗೆ ಇಲ್ಲದವರನ್ನು ಆ ವ್ಯಾಪ್ತಿಯೊಳಗೆ ತರಲು ಯಾವುದೇ ಅವಕಾಶ ನೀಡಿಲ್ಲ. ಭವಿಷ್ಯನಿಧಿ ವ್ಯಾಪ್ತಿಯಲ್ಲಿಲ್ಲದವರು ಪೆನ್ಶನ್ ಯೋಜನೆಗೆ ಅನ್ವಯವಾಗುವುದಿಲ್ಲ. 1.8 ಕೋಟಿ ಭವಿಷ್ಯ ನಿಧಿ ವಂತಿಗೆದಾರರಲ್ಲಿ ಬಹುಪಾಲು ಸಂಘಟಿತ ವಲಯದ ಕಾರ್ಮಿಕರು. ಇದರಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಬಹಳ ಕಮ್ಮಿ ಆದ್ದರಿಂದ ಈ ಹೊಸ ನಿವೃತ್ತಿ ಯೋಜನೆ ಏನಾದರೂ ಹೊಸ ಸೌಲಭ್ಯ ಒದಗಿಸುತ್ತಿದ್ದರೂ ಅದು ಅವರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ದಕ್ಕುತ್ತದೆ ಎಂಬುದು ಬರೀ ಭ್ರಮೆ ಎಂದು ಕಾಂ.ಜೀವನ್ ರಾಯ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಕಾರ್ಮಿಕರ ಆಯ್ಕೆಗೇ ಬಿಡಿ: ಸದ್ಯವೇ ನಿವೃತ್ತರಾಗುವ ಮತ್ತು ಚಿಕ್ಕವಯಸ್ಸಿನಲ್ಲೇ ಸಾಯುವ ಅಥವಾ ಅಂಗವಿಕಲರಾಗುವ ಬಹಳ ಕಮ್ಮಿ ಸಂಖ್ಯೆಯ ಕಾರ್ಮಿಕರನ್ನು ಬಿಟ್ಟರೆ ಬಹುಪಾಲು ಕಾರ್ಮಿಕರಿಗೆ ಈ ಯೋಜನೆಯಿಂದ ಹೆಚ್ಚಿನ ಹಣಕಾಸು ಸೌಲಭ್ಯವೇನು ಸಿಗುವುದಿಲ್ಲ. ಇದಕ್ಕೆ ಅವರು ವಿವರವಾದ ಉದಾಹರಣೆಗಳನ್ನೂ ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಇನ್ನು ಮಕ್ಕಳಿಗೆ ಪೆನ್ಶನ್ ಸಿಗುತ್ತದೆ ಎಂಬ ಹೇಳಿಕೆ ಕೂಡಾ ಅರ್ಥಹೀನ. ಏಕೆಂದರೆ ಬಾಲ ಕಾರ್ಮಿಕರ ನಿವೃತ್ತಿಯಾಗುವ ವೇಳೆಗೆ ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳ ವಯಸ್ಸು 25 ವರ್ಷಕ್ಕಿಂತ ಹೆಚ್ಚಿರುತ್ತದೆ.

ಸರ್ಕಾರ ಮುಂದಿಟ್ಟಿರುವ ಪೆನ್ಶನ್ ಯೋಜನೆ ಕಾರ್ಮಿಕರಿಗೆ ಪ್ರಯೋಜನಕಾರಿಯಲ್ಲ, ಬದಲಿಗೆ ಅವರಿಗೆ ನಷ್ಟವುಂಟುಮಾಡುತ್ತದೆ ಎಂದು ಒತ್ತಿ ಹೇಳಿರುವ ಕಾಂ.ಜೀವನ್ ರಾಯ್ ಇಡೀ ಈ ಪ್ರಶ್ನೆಯನ್ನು ಮರುಪರಿಶೀಲನೆಗೆ ಒಳಪಡಿಸಬೇಕು ಎಂದು ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ. ಏನಿಲ್ಲೆಂದರೂ ಈ ಯೋಜನೆಯನ್ನು ದೇಶದ ಕಾರ್ಮಿಕ ವರ್ಗದ ಮೇಲೆ ಹೇರುವ ಬದಲು ಈ ಹೊಸ ಯೋಜನೆಯನ್ನು ಸೇರುವ, ಸೇರದಿರುವ ಆಯ್ಕೆಯನ್ನು ಕಾರ್ಮಿಕರಿಗೇ ಬಿಡುವಂತಾದರೂ ಆಗಲೇಬೇಕು ಎಂದು ಕಾಂ.ಜೀವನ್ ರಾಯ್‌ಯವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ..

ಹಗರಣಗಳ ಸರಮಾಲೆಯ ಇನ್ನೊಂದು ಮಾಣಿಕ್ಯ!

ಪುಟ 1ರಿಂದ

ಕಂಪನಿಗಳಿಗೆ ಪರೋಕ್ಷವಾಗಿ ಆಹ್ವಾನ ನೀಡುವ ರೀತಿಯಲ್ಲೇ ಇದ್ದವು. ವಿದೇಶೀ ಸರಕಾರೀ ಕಂಪನಿಗಳಿಗೆ ಅವಕಾಶ ನೀಡಿದರೂ ಭಾರತದ ಸಾರ್ವಜನಿಕ ವಲಯದ ಕಂಪನಿಗಳಿಗೆ ಅವಕಾಶ ನಿರಾಕರಿಸಲಾಯಿತು.

■ ದೂರಸಂಪರ್ಕ ವ್ಯವಸ್ಥೆಯ ವಿಶೇಷ ಅಂಶಗಳನ್ನು ಖಾಸಗಿಯವರಿಗೆ ನೀಡುವುದರಿಂದ ದೂರಸಂಪರ್ಕ ಇಲಾಖೆಯ ಆದಾಯದಲ್ಲಿ ಭವಿಷ್ಯದಲ್ಲಿ ಎಷ್ಟು ಕಡಿತ ಉಂಟಾಗುವುದು ಎಂಬ ಬಗ್ಗೆ ಸರಕಾರ ಅಧ್ಯಯನವನ್ನೇ ಮಾಡುವ ಗೋಜಿಗೇ ಹೋಗಲಿಲ್ಲ.

■ ಟೆಂಡರ್ ಕರೆಯುವ ಮೊದಲು ಒಂದು ಸ್ವಾಯತ್ತ 'ಭಾರತ ದೂರಸಂಪರ್ಕ ಹತೋಟಿ ಪ್ರಾಧಿಕಾರ'(TRAI) ರಚಿಸುವ ಮಾತಿನಂತೆ ನಡೆದುಕೊಳ್ಳಲಿಲ್ಲ, ಇಂತಹ ಪ್ರಾಧಿಕಾರವನ್ನು ರಚಿಸಿದೆಯೇ ಟೆಂಡರ್ ಕರೆಯಿತು ಹಾಗೂ ಈಗಾಗಲೇ ಹೇಳುವಂತೆ ಟೆಂಡರ್ ತೆರೆದ ಮೇಲೆ ನಿಬಂಧನೆಗಳನ್ನು ಬದಲಿಸಿತು.

ಇವೆಲ್ಲಾ ಏಕೆ ಎಂಬುದು ಈಗ ಸ್ಪಷ್ಟಗೊಳ್ಳುತ್ತಿವೆ. ಈಗಾಗಲೇ ದೇಶದ ಪ್ರಜಾಪ್ರಭುತ್ವ ಶಕ್ತಿಗಳು ವಿವಿಧ ರೀತಿಗಳಲ್ಲಿ ವಿರೋಧ ವ್ಯಕ್ತಪಡಿಸಿವೆ. ಏಳು ರಾಜ್ಯ ಸಭಾ ಸದಸ್ಯರು ಸುಪ್ರೀಂಕೋರ್ಟಿಗೂ ಅರ್ಜಿ ಸಲ್ಲಿಸಿದ್ದಾರೆ. ಈಗ ಸಂಸತ್ತಿನಲ್ಲಿ ಸತತ ಮೂರು ದಿನಗಳ ಕಾಲ ಕೋಲಾಹಲವೆದ್ದಿದೆ. "ನಾನು ಪ್ರಧಾನಮಂತ್ರಿಗಳ ಧೋರಣೆಯನ್ನು ಅನುಷ್ಠಾನಕ್ಕೆ ತರುತ್ತಿದ್ದೇನೆ. ದೇಶಕ್ಕೇ ಒಂದು ಕೋಟಿ ರೂ. ಬರುವಂತೆ ಮಾಡಿದ ನನಗೆ ಧನ್ಯವಾದ ಅರ್ಪಿಸುವ ಬದಲು ನನ್ನ ರಾಜಿನಾಮೆ ಕೇಳುವುದು ಎಂತಹ ನ್ಯಾಯ?" ಎಂಬ ಭಂಡತನ ಪ್ರದರ್ಶಿಸುತ್ತಿದ್ದಾರೆ ಈ ಮಂತ್ರಿಗಳು. ಇಂತಹ ಭಂಡತನವನ್ನು ನರಸಿಂಹರಾವ್ ಸರಕಾರದ ಇತರ ಮಂತ್ರಿಗಳಲ್ಲೂ ನಾವು ಪದೇ ಪದೇ ಕಂಡಿದ್ದೇವೆ. (ಇತ್ತೀಚೆಗೆ ಬೆಲೆಯೇರಿಕೆ ಬಗ್ಗೆ ಸಂಸತ್ತಿನಲ್ಲಿ ಹೇಳಿಕೆ ನೀಡುವ ಪ್ರಸಂಗದ 'ಮರೆವಿ'ನಲ್ಲಿ ಇದು ಕಂಡಿತ್ತು, ಕೆಲವು ದಿನಗಳ ಹಿಂದೆ ಬ್ಯಾಂಕು ಸಾಲ ತೀರಿಸದ ಭಾರೀ ಕುಳಗಳ ಪಟ್ಟಿ ನೀಡುವ ಮಾತನ್ನು 'ಮರೆಯ' ಲಾಯಿತು! - ಪುಟ 5 ನೋಡಿ) ಈ ಭಂಡತನವನ್ನೀಗ ಬಯಲಿಗೆಳೆಯುವ ಹೋರಾಟ ಇನ್ನೊಂದು ಹಂತ ತಲುಪಿದಂತಿದೆ.

ಬೆಂಗಳೂರು ಸಮಾವೇಶದ ಕರೆ

ಪುಟ 1ರಿಂದ

ಅಧಿಕಾರಿಗಳನ್ನು ದುರುಪಯೋಗ ಮಾಡುತ್ತಿರುವುದರಿಂದಾಗಿ ಕಾರ್ಮಿಕರ ಕಷ್ಟ ಹೆಚ್ಚುತ್ತಲೇ ಇದೆ. ಕಾರ್ಮಿಕ ಕಾನೂನುಗಳ ಜಾರಿಗಾಗಿ ನೇಮಿಸಲ್ಪಟ್ಟಿರುವ ಕಾರ್ಮಿಕ ನಿರೀಕ್ಷಕರು ಮತ್ತು ಅಧಿಕಾರಿಗಳು ಪಡೆಯುವ ಲಂಚದಲ್ಲಿ ಪಾಲ್ಗೊಳ್ಳುವುದೇ ಕಾರ್ಮಿಕ ಮಂತ್ರಿಯ ಪಾತ್ರವಾಗಿದೆ. ಆದ್ದರಿಂದ ಕಾರ್ಮಿಕರು ದೃಢವಾದ ಹೋರಾಟ ಮಾಡದೇ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡಲು ಸಾಧ್ಯವಿಲ್ಲವೆಂಬ ಸಿಐಟಿಯು ದೃಢ ಅಭಿಪ್ರಾಯವನ್ನು ಈ ಸಮಾವೇಶ ಒತ್ತಿ ಹೇಳಿತು.

ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ತಾ. 26.12.95ರಿಂದ ಅಸಂಘಟಿತ ವಲಯದ ಕಾರ್ಮಿಕರ ಮುಷ್ಕರ ರಾಜ್ಯವ್ಯಾಪಿಯಾಗಿ ಅನಿರ್ದಿಷ್ಟ ಅವಧಿಯವರೆಗೆ ನಡೆಯಬೇಕೆಂದು ಸಮಾವೇಶ ಹೋರಾಟದ ಪರಿಸ್ಥಿತಿ ಅವಲೋಕನ ಮಾಡಿ ಅನಿರ್ದಿಷ್ಟ ಕಾಲದ ಮುಷ್ಕರ ಕುರಿತು ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಸಿಐಟಿಯು ರಾಜ್ಯ ಪದಾಧಿಕಾರಿಗಳಿಗೆ ಅಧಿಕಾರ ನೀಡಿದೆ.

ಸಮಾವೇಶದ ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ.ನಾಯರ್ ವಹಿಸಿದ್ದರು. ಕಾಂ.ಆರ್. ಶ್ರೀನಿವಾಸ್ ಹೋರಾಟದ ಕರೆ ಕುರಿತಾದ ನಿರ್ಣಯವನ್ನು ಮಂಡಿಸಿದರು. ಕಾಂ.ಇ.ಕೆ.ಎನ್. ರಾಜನ್, ಕಾಂ.ಗೋಪಾಲಗೌಡ, ಕಾಂ.ಕೆ.ಎಸ್. ಸುಬ್ರಹ್ಮಣ್ಯ, ಮೀನಾಕ್ಷಿಸುಂದರಂ, ಜಿ.ರಾಮಯ್ಯ, ಶ್ರೀಮತಿ ಮುಮ್ತಾಜ್ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು. ರಾಜ್ಯ ಅಧ್ಯಕ್ಷರಾದ ಕಾಂ.ಎಸ್.ಸೂರ್ಯನಾರಾಯಣರಾವ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಕೋದಂಡರಾಂ ವಂದನಾರ್ಪಣೆ ಮಾಡಿದರು.

ಪೆನ್ಶನ್ ಯೋಜನೆಗೆ ವಿರೋಧ

ಭಾರತ ಸರ್ಕಾರದ ನೂತನ ಪೆನ್ಶನ್ ಯೋಜನೆಯ ಸಾಧಕ ಬಾಧಕಗಳನ್ನು ಚರ್ಚಿಸಿದ ಸಮಾವೇಶ ಇದನ್ನು ತೀವ್ರವಾಗಿ ವಿರೋಧಿಸಿ ಒಂದು ತೀರ್ಮಾನಕ್ಕೆ ಬಂದಿದೆ.

ಹೊಸ ಪೆನ್ಶನ್ ಯೋಜನೆಯ ಜಾರಿಯಲ್ಲಿ ಬರುವ 95ರ ನವೆಂಬರ್ 16ರಿಂದ 10 ವರ್ಷ ಅನಂತರ ಸೇವೆ ಸಲ್ಲಿಸಿದವರಿಗೆ ಮಾತ್ರ ಯೋಜನೆ ಅನುಸರಿಸಿ ನೀಡಲಾಗುವ ಕನಿಷ್ಠ ಪೆನ್ಶನ್‌ನಿಂದ ಹೆಚ್ಚು ಪೆನಶನ್ ಬರಲು ಸಾಧ್ಯ. ಸ್ವಾಭಾವಿಕವಾಗಿ ಈಗ 2000 ರೂಪಾಯಿಯ ಮೇಲೆ ಸಂಬಳ ಪಡೆಯುವ ಮತ್ತು 48 ವಯಸ್ಸಿಗಿಂತ ಕಡಿಮೆ ಇರುವವರಿಗೆ ಮಾತ್ರ ಕನಿಷ್ಠ ಪೆನ್ಶನ್‌ಗಿಂತ ಹೆಚ್ಚಿನ ಪೆನ್ಶನ್ ಬರಲು ಸಾಧ್ಯವಾಗುವುದು. ಈಗ ಸಾವಿರ ರೂಪಾಯಿಗಿಂತ ಕಡಿಮೆ ಸಂಬಳ ಪಡೆಯುವವರು ತಮ್ಮ ಮುಂದಿನ ಸೇವೆ 30 ವರ್ಷಗಳಿದ್ದರೆ ಮಾತ್ರ ಕನಿಷ್ಠ ಪೆನ್ಶನ್‌ಗಿಂತ ಹೆಚ್ಚಿನ ಪೆನ್ಶನ್ ಪಡೆಯಲು ಸಾಧ್ಯವಾಗುವುದು.

ಪೆನ್ಶನ್ ಅರ್ಹತೆಗೆ ಕುಟುಂಬ ಪೆನ್ಶನ್ ಯೋಜನೆಯ ಸದಸ್ಯತ್ವದ ಕಾಲಾವಧಿ ತೆಗೆದುಕೊಂಡರೂ ಮುಂದೆ 16.11.95 ರಿಂದ ವೇತನದ ಶೇ.8.33 ಭವಿಷ್ಯನಿಧಿಯಿಂದ ಪೆನ್ಶನ್ ಯೋಜನೆಗಾಗಿ ತೆಗೆದುಕೊಳ್ಳುತ್ತದೆ. ಈಗಿನ ಸಂಬಳದ ಆಧಾರದಲ್ಲಿ ಪ್ರತಿವರ್ಷ 2 ಸಾವಿರ ಕೋಟಿ ರೂಪಾಯಿ ಬರುವ ಮೊತ್ತ ಮುಂದೆ 25 ವರ್ಷಗಳಲ್ಲಿ ಒಟ್ಟು 3 ಲಕ್ಷ ಕೋಟಿ ರೂಪಾಯಿಗಿಂತಲೂ ಹೆಚ್ಚು ಸರ್ಕಾರಕ್ಕೆ ಸೇರುವುದು ಖಚಿತ. ಈ ಅವಧಿಯಲ್ಲಿ ಸರ್ಕಾರದ ಬೊಕ್ಕಸಕ್ಕೆ ಸೇರುವ ಹಣದ ಒಂದು ಸಣ್ಣ ಭಾಗ ಮಾತ್ರವನ್ನು ಕನಿಷ್ಠ ಪೆನ್ಶನ್‌ಗಾಗಿ ಸರ್ಕಾರ ಖರ್ಚು ಮಾಡುತ್ತದೆ. ಆದ ಕಾರಣ ಈಗಿರುವ ಪೆನ್ಶನ್ ಯೋಜನೆಯನ್ನು ಕಾರ್ಮಿಕ ವಿರೋಧಿಯೆಂದು ಪರಿಗಣಿಸಬಹುದು ಎಂದಿರುವ ಸಮಾವೇಶ ಈಗಾಗಲೇ ಘೋಷಿಸಿದ ಕನಿಷ್ಠ ಪೆನ್ಶನ್ ಕಾರ್ಮಿಕರ ಕೊಡುಗೆಯಿಂದಲೇ ಆಗಿರುವುದರಿಂದ ಅದಲ್ಲದೆ ಹೆಚ್ಚಿನ ಪೆನ್ಶನ್ ಈ ಕೂಡಲೇ ನೀಡಲು ಸರ್ಕಾರ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಹೊಸ ಪೆನ್ಶನ್ ಯೋಜನೆಯನ್ನು ಕಾರ್ಮಿಕರು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಲೂಟಿ ಮಾಡಲು ಉಪಯೋಗಿಸಬಾರದೆಂದು ಒತ್ತಾಯಿಸಿರುವ ಸಮಾವೇಶ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಜೊತೆಗೆ ಚರ್ಚಿಸಿ ಅವರ ಒಪ್ಪಿಗೆ ಪಡೆದ ಮೇಲೆಯೇ ಹೊಸ ಪೆನ್ಶನ್ ಯೋಜನೆಯನ್ನು ಜಾರಿಗೆ ತರುವಂತೆ ಸಮಾವೇಶ ಒತ್ತಾಯಿಸಿದೆ

ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ
ಒಂದು ಕೋಟಿಗೂ ಹೆಚ್ಚು ವಿದ್ಯಾರ್ಥಿಗಳ ಸ್ಪಂದನ

ನವಂಬರ್ 29ರ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ ದೇಶಾದ್ಯಂತ ವ್ಯಾಪಕವಾಗಿ ನಡೆದಿದೆ. 125 ವಿಶ್ವವಿದ್ಯಾಲಯಗಳು, 3920 ಕಾಲೇಜುಗಳು ಹಾಗೂ 44714 ಪ್ರೌಢ ಶಾಲೆಗಳಲ್ಲಿ 1 ಕೋಟಿ 37 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು.

ಶಿಕ್ಷಣದಲ್ಲಿ ವಿಪರೀತ ಖಾಸಗೀಕರಣ, ಶಿಕ್ಷಣ ರಂಗದಲ್ಲಿ ಸರಕಾರ ತನ್ನ ಪಾತ್ರವನ್ನು ಕೈಬಿಟ್ಟಿರುವುದನ್ನು ವಿರೋಧಿಸಿದ ಹಾಗೂ ಒಟ್ಟು ರಾಷ್ಟ್ರೀಯ ಉತ್ಪನ್ನದ ಕನಿಷ್ಟ ಶೇ. 6ನ್ನು ಹಾಗೂ ವಾರ್ಷಿಕ ಕೇಂದ್ರ ಬಜೆಟ್ ನ ಶೇ 10ನ್ನು ಶಿಕ್ಷಣಕ್ಕೆ ನೀಡಬೇಕೆಂದು ಒತ್ತಾಯಿಸಿ ಈ ಮುಷ್ಕರ ನಡೆದಿದೆ. ಈ ಮುಷ್ಕರದ ಮೂಲಕ ವಿದ್ಯಾರ್ಥಿಗಳನ್ನು ರಾಜಕೀಯದ ಅಪರಾಧೀಕರಣ, ಸಾಮ್ರಾಜ್ಯಶಾಹಿ ಜಾಗತೀಕರಣ ಹಾಗೂ ಭಾರತದ ಆರ್ಥಿಕ ಸಾರ್ವಭೌಮತೆಯ ಮೇಲೆ ದುಷ್ಪರಿಣಾಮಗಳ ವಿರುದ್ಧ ವಿದ್ಯಾರ್ಥಿಗಳನ್ನು ಅಣಿನೆರೆಸುವ ಪ್ರಯತ್ನವೂ ನಡೆದಿದೆ.

ಎಸ್‌ಎಫ್‌ಐ, ಎಐಎಸ್‌ಎಫ್, ಸಿಜೆಡಿ, ಎಐಪಿಎಸ್‌ಯು ಹಾಗೂ ಎಐಎಸ್‌ಬಿ ಈ ಐದು ರಾಷ್ಟ್ರ ಮಟ್ಟದ ವಿದ್ಯಾರ್ಥಿ ಸಂಘಟನೆಗಳಲ್ಲದೆ 24 ಇತರ ವಿದ್ಯಾರ್ಥಿ ಸಂಘಟನೆಗಳು, 47 ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘಟನೆಗಳು ಹಾಗೂ 450 ಕಾಲೇಜು ವಿದ್ಯಾರ್ಥಿ ಸಂಘಗಳು ಈ ಮುಷ್ಕರ ಕಾರ್ಯಾಚರಣೆಯಲ್ಲಿ ಪೂರ್ಣ ರೂಪದಲ್ಲಿ ಭಾಗವಹಿಸಿದರು.

ಬಂದಿರುವ ವರದಿಗಳ ಪ್ರಕಾರ ಏಳು ರಾಜ್ಯಗಳಲ್ಲಿ ಮುಷ್ಕರಕ್ಕೆ ಸುಮಾರಾಗಿ ಸಂಪೂರ್ಣ 100% ರಷ್ಟು ಬೆಂಬಲ ದೊರೆತಿದೆ. ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ, ಮಣಿಪುರ, ಹಿಮಾಚಲ ಪ್ರದೇಶ, ಆಂಧ್ರಪ್ರದೇಶ ಹಾಗೂ ಸಿಕ್ಕಿಂ ಆ ಏಳು ರಾಜ್ಯಗಳು. ಕಲ್ಕತ್ತ, ಶಿಮ್ಲಾ, ಮದ್ರಾಸ್‌ಗಳಲ್ಲಿ ಅಂದು ಹಲವಾರು ವಿದ್ಯಾರ್ಥಿ ಮತ ಪ್ರದರ್ಶನಗಳು, ಪ್ರತಿಭಟನಾ ಮೆರವಣಿಗೆಗಳು ನಡೆದಿವೆ.

ಮಹಾರಾಷ್ಟ್ರ, ಪಂಜಾಬ್, ಒರಿಸ್ಸಾ, ಕರ್ನಾಟಕ, ಅಸ್ಸಾಂ, ರಾಜಾಸ್ತಾನ, ದಿಲ್ಲಿ ಮತ್ತು ತಮಿಳುನಾಡಿನಲ್ಲಿ ಸಾಕಷ್ಟು ಬೆಂಬಲ ವ್ಯಕ್ತವಾಯಿತು. ಸುಮಾರು 60% ಶಿಕ್ಷಣ ಸಂಸ್ಥೆಗಳು ಅಂದು ಮುಚ್ಚಿದ್ದವು. ಉತ್ತರಪ್ರದೇಶ, ಬಿಹಾರ್, ಗೋವಾ, ಮಧ್ಯಪ್ರದೇಶ, ಜಮ್ಮು ಹರ್ಯಾಣಗಳಲ್ಲಿ ಭಾಗಶಃ ಮುಷ್ಕರ ನಡೆಯಿತು.

ವಿಶ್ವವಿದ್ಯಾಲಯಗಳು ಬಂದ್

ಪಶ್ಚಿಮ ಬಂಗಾಳ, ಕೇರಳದ ವಿಶ್ವವಿದ್ಯಾಲಯಗಳಷ್ಟೇ ಅಲ್ಲ, ದೇಶಾದ್ಯಂತ ಕೆಲವು ಪ್ರತಿಷ್ಠೆಯ ವಿಶ್ವವಿದ್ಯಾಲಯಗಳಲ್ಲೂ ಮುಷ್ಕರ ನಡೆಯಿತು. ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಮುಷ್ಕರದ ಬೇಡಿಕೆಗಳತ್ತ ಗಮನ ಸೆಳೆಯುವ ಮೆರವಣಿಗೆ ನಡೆಯಿತು. ಜವಾಹರ್ ಲಾಲ್ ವಿಶ್ವವಿದ್ಯಾಲಯದಲ್ಲಿ ಮುಷ್ಕರ ನಡೆಯಲಿಲ್ಲ. ಏಕೆಂದರೆ ಅಲ್ಲಿಯ ಸಂಘದ ನೇತೃತ್ವವಿರುವ ಅಖಿಲ ಭಾರತ ವಿದ್ಯಾರ್ಥಿ ಸಂಘ(AISA) ಮುಷ್ಕರಕ್ಕೆ ಕರೆ ನೀಡಲಿಲ್ಲ. ಆದರೆ ಅಲ್ಲಿಯ ಎಸ್‌ಎಫ್‌ಐ, ಎಐಎಸ್‌ಎಫ್ ಹಾಗೂ ಸಿಜೆಡಿ ಸದಸ್ಯರು ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾಲಯದಿಂದ ಒಂದು ಮೆರವಣಿಗೆ ತೆಗೆದರು.

ಮಂತ್ರಿಗಳಿಗೆ ಮನವಿ ಪತ್ರ

ದಿಲ್ಲಿಯಲ್ಲಿ ವಿದ್ಯಾರ್ಥಿ ಸಂಘಟನೆಗಳ ಮುಖಂಡರುಗಳು ಮಾನವ ಸಂಪನ್ಮೂಲ ಅಭಿವೃದ್ಧಿ ರಾಜ್ಯ ಮಂತ್ರಿ ಶ್ರೀಮತಿ ಶೆಲ್ಜಾರವರನ್ನು ಭೇಟಿ ಮಾಡಿ ಈ ಮುಷ್ಕರ ಕುರಿತ ಒಂದು ಮನವಿ ಪತ್ರವನ್ನು ಒಪ್ಪಿಸಿದರು. ಇದರಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಹಣ, ವಾಣಿಜ್ಯೀಕರಣವನ್ನು ನಿಲ್ಲಿಸುವುದು, ಪ್ರಜಾಪ್ರಭುತ್ವ-ವಿರೋಧಿ ಕರಾಳ ಶಾಸನಗಳ ರದ್ದತಿ ಹಾಗೂ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕು ಎಂಬಿತ್ಯಾದಿ ಒಂಭತ್ತು ಬೇಡಿಕೆಗಳನ್ನು ನಿರೂಪಿಸಲಾಗಿತ್ತು.

ಮಂತ್ರಿಗಳನ್ನು ಭೇಟಿ ಮಾಡುವ ನಿಯೋಗದಲ್ಲಿ ಎಸ್‌ಎಫ್‌ಐ ಜಂಟಿ ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ಎಐಎಸ್‌ಬಿ ಪ್ರಧಾನ ಕಾರ್ಯದರ್ಶಿ ಜಿ.ದೇವರಾಜನ್, ಎಐಪಿಎಸ್‌ಯು ಅಧ್ಯಕ್ಷ ಪಿ.ಜಿ. ಪ್ರಸನ್ನಕುಮಾರ್ ಮತ್ತು ಎಸ್‌ಎಫ್‌ಐ ಕೇಂದ್ರ ಕಾರ್ಯಕಾರಿ ಮಂಡಳಿ ಸದಸ್ಯ ಭರ್ತೃಹರಿ ಇದ್ದರು. ಸಿಪಿಐ(ಎಂ) ಸಂಸತ್ ಸದಸ್ಯರಾದ ಎಂ.ಎ.ಬೇಬಿ ಹಾಗೂ ಸರಳಾ ಮಹೇಶ್ವರಿ ಕೂಡಾ ನಿಯೋಗದ ಜತೆಗಿದ್ದರು.

ಕರ್ನಾಟಕದಲ್ಲಿ

ಅಖಿಲ ಭಾರತ ಕರೆಯನ್ವಯ ನವಂಬರ್ 29ರಂದು ಕರ್ನಾಟಕದಲ್ಲಿ ವಿದ್ಯಾರ್ಥಿಗಳ ಮುಷ್ಕರ ಅತ್ಯಂತ ಯಶಸ್ವಿಯಾಗಿ ಜರುಗಿದೆ. ರಾಜ್ಯದಲ್ಲಿ ಸುಮಾರು 3.5 ಲಕ್ಷ ವಿದ್ಯಾರ್ಥಿಗಳು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಹೈಸ್ಕೂಲುಗಳು, ಕಾಲೇಜುಗಳು ಮುಂತಾದ ಸುಮಾರು 500 ಶಿಕ್ಷಣ ಸಂಸ್ಥೆಗಳಲ್ಲಿ ಈ ಮುಷ್ಕರ ನಡೆದಿದೆ. ಕೋಲಾರ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ.

ಹೊಸಪೇಟೆ, ಹರಪನಹಳ್ಳಿ, ಗದಗ, ಹುಬ್ಬಳ್ಳಿ, ರೋಣ, ಶಹಪುರ, ಸುರಪುರ, ಸಿರ್ಸಿ, ದಾಂಡೇಲಿ, ಭಟ್ಕಳ, ದಾವಣಗೆರೆ, ಕೆ.ಎಂ.ದೊಡ್ಡಿ, ಮಳವಳ್ಳಿ, ಹೆಗ್ಗಡದೇವನ ಕೋಟೆ, ಹುಣಸೂರು, ಬೀದರ್, ಬಿಜಾಪುರ ಮುಂತಾದ ರಾಜ್ಯದ 70ಕ್ಕೂ ಮೇಲ್ಪಟ್ಟ ಜಿಲ್ಲಾ-ತಾಲೂಕು ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಮುಷ್ಕರ ಅತ್ಯಂತ ಯಶಸ್ವಿಯಾಗಿ ನಡೆದಿದೆ. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಮೆರವಣಿಗೆಗಳನ್ನು ನಡೆಸಿ, ರಸ್ತೆ ತಡೆ, ಪಿಕೆಟಿಂಗ್, ಧರಣೆ, ಭೂತ ದಹನ ಮುಂತಾದ ಕಾರ್ಯಕ್ರಮಗಳನ್ನು ನಡೆಸಿ ನಂತರ ತಹಸೀಲ್ದಾರ್, ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಅರ್ಪಿಸಿದ್ದಾರೆ.

ರಾಷ್ಟ್ರಮಟ್ಟದಲ್ಲಿ 5 ವಿದ್ಯಾರ್ಥಿ ಸಂಘಟನೆಗಳು ಜಂಟಿಯಾಗಿ ಕರೆ ನೀಡಿದ್ದ ಈ ಮುಷ್ಕರವು ಕರ್ನಾಟಕದ ಬಹುತೇಕ ಕಡೆಗಳಲ್ಲಿ ಎಸ್‌ಎಫ್‌ಐನ ನೇತೃತ್ವದಲ್ಲಿಯೇ ನಡೆದಿದೆ. ಕೆಲವು ಕಡೆಗಳಲ್ಲಿ ಎಐಎಸ್‌ಎಫ್‌ನ ಜೊತೆಗೂಡಿ ಮತ್ತು ಒಂದು ಕೇಂದ್ರದಲ್ಲಿ ವಿದ್ಯಾರ್ಥಿ ಜನತಾದಳದೊಂದಿಗೆ ಕೂಡಿ ಮುಷ್ಕರವನ್ನು ಯಶಸ್ವಿಗೊಳಿಸಲಾಗಿದೆ. ಮುಷ್ಕರವನ್ನು ಯಶಸ್ವಿಗೊಳಿಸುವಲ್ಲಿ ಶಿಕ್ಷಕರು ಮತ್ತು ಶಿಕ್ಷಣ ಪ್ರೇಮಿಗಳು ಹೆಚ್ಚಿನ ಸಹಕಾರವನ್ನು ನೀಡಿದ್ದಾರೆ. ಮುಖ್ಯವಾಗಿ ರಾಜ್ಯದ ವಿದ್ಯಾರ್ಥಿ ಸಮುದಾಯ ಶಿಕ್ಷಣದ ಖಾಸಗೀಕರಣದ ವಿರುದ್ಧದ ಈ ಹೋರಾಟದಲ್ಲಿ ಅತ್ಯಂತ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಚಾರಿತ್ರಿಕ ಪಾತ್ರವನ್ನು ನಿರ್ವಹಿಸಿದೆ.

ಡಿಸೆಂಬರ್ 18ರಿಂದ ಕಲ್ಲಿದ್ದಲು ಕಾರ್ಮಿಕರ ಆರು ದಿನಗಳ ಮುಷ್ಕರ

ಕಲ್ಲಿದ್ದಲು ಉದ್ದಿಮೆಯಲ್ಲಿ ವೇತನ ಮಾತುಕತೆ ನವೆಂಬರ್ 28 ರಲ್ಲಿ ವಿಫಲವಾಗಿರುವುದರಿಂದ ಐದು ಕೇಂದ್ರ ಕಾರ್ಮಿಕ ಸಂಘಗಳು ದೇಶದ ಎಲ್ಲಾ ಕಲ್ಲಿದ್ದಲು ಗಣಿಗಳಲ್ಲಿ ಡಿಸೆಂಬರ್ 18 ರಿಂದ 23 ರವರಗೆ ಆರು ದಿನಗಳ ಸಾರ್ವತ್ರಿತ ಮುಷ್ಕರ ನಡೆಸುವ ಬಗ್ಗೆ ನೋಟಿಸ್ ನೀಡಿವೆ. ಇಂಟಕ್, ಎಐಟಿಯುಸಿ, ಹೆಚ್‌ಎಂಎಸ್, ಬಿಎಂಎಸ್ ಹಾಗೂ ಸಿಐಟಿಯು ಇವೇ ಆ ಐದು ಕೇಂದ್ರ ಕಾರ್ಮಿಕ ಸಂಘಟನೆಗಳು.

ಕಲ್ಲಿದ್ದಲು ಉದ್ದಿಮೆಯಲ್ಲಿ ತಕ್ಷಣ ನೌಕರರಿಗೆ ನಿವೃತ್ತಿವೇತನ ಜಾರಿಗೊಳಿಸಬೇಕು, 1.4.94 ರಿಂದ ಇದನ್ನು ಎಲ್ಲರಿಗೂ ...

ಈಸ್ಟರ್ನ್ ಕೋಲ್ ಫೀಲ್ಡ್ಸ್ ಹಾಗೂ ಭಾರತ್ ಕುಕಿಂಗ್ ಕೋಲ್ ಲಿಮಿಟೆಡ್ ಸಂಸ್ಥೆಗಳನ್ನು ಬಿಐಎಫ್‌ಆರ್‌ನ ಪರಿಶೀಲನೆಗೆ ನೀಡಬಾರದು, ಎಲ್ಲಾ ಸುರಕ್ಷತಾ ಕ್ರಮಗಳನ್ನು, ಕಲ್ಯಾಣ ಕ್ರಮಗಳನ್ನು ಜಾರಿಗೊಳಿಸಬೇಕು ಇತ್ಯಾದಿ ಮುಷ್ಕರದ ಬೇಡಿಕೆಗಳು.

ಕೋಲ್ ಇಂಡಿಯಾ ಲಿಮಿಟೆಡ್‌ನ ಅಧ್ಯಕ್ಷರು, ಈಸ್ಟರ್ನ್ ಕೋಲ್ ಫೀಲ್ಡ್ಸ್, ಭಾರತ್ ಕುಕಿಂಗ್ ಕೋಲ್ ಲಿಮಿಟೆಡ್. ಸೆಂಟ್ರಲ್ ಕೋಲ್ ಫೀಲ್ಡ್ಸ್, ವೆಸ್ಟರ್ನ್ ಕೋಲ್ ಫೀಲ್ಡ್ಸ್, ಸೌತ್ ಈಸ್ಟರ್ನ್ ಕೋಲ್ ಫೀಲ್ಡ್ಸ್, ನಾರ್ತರ್ನ್ ಕೋಲ್ ಫೀಲ್ಡ್ಸ್, ರಾಂಚಿಯ ಸಿಎಂಪಿಡಿಐಎಲ್, ಸಿಂಗರೇಣಿಯ ಎಸ್‌ಸಿಎಲ್, ಮಹಾನದಿ ಕೋಲ್ ಫೀಲ್ಡ್ಸ್, ಎನ್.ಇ.ಸಿ. ಮಾರ್ಗರಿತಾ, ಜಮಶೇಡ್‌ಪುರದ ಟಿಸ್ಕೋ ಹಾಗೂ ಬರ್ನ್‌ಪುರದಲ್ಲಿರುವ ಇಸ್ಕೋ ಆಡಳಿತ ನಿರ್ದೇಶಕರು ...